| | 1 | ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ. | ಬ್ಯಾಂಕಿನ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲು ಗಣಕಯಂತ್ರದ ತಂತ್ರಾಂಶವನ್ನು ಬಳಸಿಕೊಳ್ಳಲಾಗುತ್ತಿದೆ. ವರದಿ ಸಾಲಿನಲ್ಲಿ ಅಂತ್ಯಕ್ಕೆ ಬ್ಯಾಂಕಿನಲ್ಲಿ ರೂ.1524.61 ಲಕ್ಷಗಳನ್ನು ಕರಡು ಸಾಲದ ನಿಧಿಗೆ ಕಾದಿರಿಸಲಾಗಿದೆ. ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿ ದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು ಆ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ. ಆರ್.ಬಿ.ಐ/ ಶಾಸನಬದ್ದ ಲೆಕ್ಕಪರಿಶೋಧಕರು ಗಮನಿಸಿರುವ ಎನ್.ಪಿ.ಎ ಖಾತೆಗಳನ್ನು ಗಣಕಯಂತ್ರದಲ್ಲಿ ಸರಿಪಡಿಸಿ ಕೊಂಡಿರುವುದಿಲ್ಲ.<br>**ಅನುವರ್ತನೆ : ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.** |
| | 2 | ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ | ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು ಆ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ. ಅನುತ್ಪಾದಕ ಆಸ್ತಿಗಳ ಪ್ರಮಾಣ ಮತ್ತು ಕಲ್ಪಿಸಿದ ಅವಕಾಶಗಳ ವಿವರಗಳ ಪಟ್ಟಿಯನ್ನು ಈ ವರದಿಗೆ ಲಗತ್ತಿಸಲಾಗಿರುತ್ತದೆ. ಎನ್.ಪಿ.ಎ ಯಾಗಿ ವರ್ಗೀಕರಣಗೊಂಡ ಅಡಮಾನ ಸಾಲದ ಸ್ವತ್ತುಗಳನ್ನು 3 ವರ್ಷಗಳಿಗೊಮ್ಮೆ ಮರು ಮೌಲ್ಯಮಾಪನ ಮಾಡಿಸಬೇಕಾಗಿರುತ್ತದೆ. |

| | | | |
|---|---|---|---|
| | 3 | ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ. | ವರದಿ ಸಾಲಿನಲ್ಲಿ ಲೆಕ್ಕಪರಿಶೋಧನಾ ವೇಳೆಯಲ್ಲಿ ಗಮನಿಸಿದಂತೆ ಯಾವುದೇ ಸಾಲಗಳ ಮೇಲಿನ ಬಡ್ಡಿಯನ್ನು ಸಾಲದ ಅಸಲಿಗೆ ಸೇರಿಸಿದ ಯಾವುದೇ ಪ್ರಕರಣ ಗಳಿರುವುದಿಲ್ಲ. |
| | 4 | ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದುಕೊಳ್ಳುವುದು ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಪುನಃ ಸ್ವಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ DICGC / ECGC ಯನ್ನೊಳ ಗೊಂಡಂತೆ. | ಬ್ಯಾಂಕಿನಲ್ಲಿ ಸಾಲ ಮಂಜೂರು ಮಾಡುವ ಮುನ್ನ ಬ್ಯಾಂಕಿನ ಅಭಿಯಂತರರಿಂದ ಆಸ್ತಿಯ ಮೌಲ್ಯ ಮಾಪನ ಮಾಡಿಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. ವರದಿ ಸಾಲಿನಲ್ಲಿ ಯಾವುದೇ ಪುನಸಚ್ಚೀಕರಣದ ಪ್ರಕರಣಗಳು ಇರುವುದಿಲ್ಲವೆಂದೂ ಹಾಗೂ ಯಾವುದೇ ಸಾಲಗಳು DICGC/ECGC ಅಡಿಯಲ್ಲಿ ಇರುವುದಿಲ್ಲವೆಂದೂ ಬ್ಯಾಂಕಿನವರು ತಿಳಿಸಿರುತ್ತಾರೆ. |
| | 5 | ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ/ಕಲ್ಪಿಸಲಾದ ಅವಕಾಶಗಳು | ಯಾವುದೂ ಇರುವುದಿಲ್ಲ. |
| | 6 | ಸಾಲ ವಸೂಲಾತಿಯ ಕಾರ್ಯ ವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ, | ಪ್ರತಿ ಮಾಹೆ ಸಾಲ ವಸೂಲಾತಿ ಉಪ ಸಮಿತಿಯಲ್ಲಿ ಹಮ್ಮಿಕೊಂಡ ಯೋಜನೆ ಮತ್ತು ವಿಧಿವಿಧಾನಗಳನುಸಾರ ಸಾಧಿಸಲ್ಪಟ್ಟ ಪ್ರಗತಿ ಯನ್ನು ಆಡಳಿತ ಮಂಡಳಿಯಲ್ಲಿ ವಿಮರ್ಶಿಸ ಲಾಗುತ್ತಿರುವುದನ್ನು ಗಮನಿಸಿದೆ. |
| | ಎಫ್ | **ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:**<br>ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನಸೆಳೆಯಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ. | ಸಾಲದ ಖಾತೆಗಳಲ್ಲಿ ನಮಗೆ ಕಂಡುಬಂದ ನ್ಯೂನ್ಯತೆಗಳು ಈ ಕೆಳಕಂಡಂತಿವೆ; |

## ಅಡಮಾನ ಸಾಲಗಳ ನ್ಯೂನ್ಯತೆಗಳು

**1. ಜಯನಗರ ಶಾಖೆ :**

(1) ಖಾತೆ ಸಂಖ್ಯೆ : 02536000008 ರೂ.1,95,00,000/–

ಸಾಲ ನಿಯಮಾವಳಿಗಳ ಪ್ರಕಾರ ಮೌಲ್ಯಮಾಪಕರು ನಿಗಧಿ ಪಡಿಸಿದ ಸ್ವತ್ತಿನ ಮೌಲ್ಯದ ಶೇ.60 ರಷ್ಟು ಸಾಲ ನೀಡಬೇಕಾಗಿದ್ದು ಶೇ.85 ರಷ್ಟು ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಇವರ ತಂದೆ ಬ್ಯಾಂಕಿಗೆ ಅಡಮಾನ ಮಾಡಿರುವ ಸ್ವತ್ತಿನ ಮೌಲ್ಯ ಎರಡನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(2) ಖಾತೆ ಸಂಖ್ಯೆ : 02536000003 ರೂ.1,95,00,000/–

ಸಾಲಗಾರರ ಮಾಸಿಕ ಆದಾಯ ರೂ.6.96 ಲಕ್ಷಗಳಿದ್ದು, ಪಾವತಿಸ ಬೇಕಾದ EMI ಮಾಸಿಕ ಮೊತ್ತ ರೂ.9.75 ಲಕ್ಷಗಳಾಗಿರುತ್ತವೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ, ಸಾಲಗಾರರ ಮರುಪಾವತಿ ಸಾಮರ್ಥ್ಯ ಮತ್ತು ಕುಟುಂಬದ ಸದಸ್ಯರ ಆದಾಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(3) ಖಾತೆ ಸಂಖ್ಯೆ : 02531000001 ರೂ.60,00,000/–

ಅ) ಸಾಲಗಾರರಿಗೆ ಮನೆ ಖರೀದಿಗೆ ಸಾಲ ನೀಡಿದ್ದು ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.54 ಲಕ್ಷಗಳ ಸಾಲವನ್ನು ನೀಡಬಹುದಾಗಿದ್ದು ರೂ.60 ಲಕ್ಷಗಳ ಸಾಲವನ್ನು ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

ಆ) ಕಾನೂನು ವರದಿಯಲ್ಲಿ ಬಿ.ಡಿ.ಎ ಯಿಂದ ಸ್ವತ್ತನ್ನು ನೊಂದಾವಣಿ ಮಾಡಿಕೊಳ್ಳುವ ದಿನಾಂಕ ಮತ್ತು ಸ್ವತ್ತು ಹಂಚಿಕೆ ದಿನಾಂಕದ 90 ದಿನಗಳು ಮುಕ್ತಾಯವಾಗಿದ್ದು ಮತ್ತೆ ವಿಸ್ತರಿಸಲಾದ ದಿನಾಂಕದ ಪತ್ರವನ್ನು ಪಡೆಯಲು ತಿಳಿಸಿದ್ದು ಪಡೆದಿರುವುದಿಲ್ಲ.

**ಅನುವರ್ತನೆ : ವಿಸ್ತರಿಸಿದ ದಿನಾಂಕದ ಪತ್ರವನ್ನು ಪಡೆಯಲಾಗುವುದು.**

ಇ) ಮಂಜೂರಾದ ಸಾಲದ ಮೊತ್ತವನ್ನು 2025 ರಲ್ಲಿ ಬಿ.ಡಿ.ಎ.ಗೆ ಪಾವತಿಸಿದ್ದು ಇಲ್ಲಿಯವರೆವಿಗೂ ಸ್ವತ್ತನ್ನು ಬ್ಯಾಂಕಿನ ಹೆಸರಿಗೆ ನೋಂದಾಯಿಸಿಕೊಂಡಿರುವುದಿಲ್ಲ.

**ಅನುವರ್ತನೆ : ಸ್ವತ್ತು ಬ್ಯಾಂಕಿನ ಹೆಸರಿಗೆ ನೋಂದಾವಣೆಯಾಗುವವರೆಗೆ ಬ್ಯಾಂಕಿನಲ್ಲಿ ಅಡಮಾನ ಸಾಲ ಪಡೆದ ಸದಸ್ಯರಿಂದ ಜಾಮೀನು ಪಡೆಯಲಾಗಿದೆ. ಸ್ವತ್ತನ್ನು ಬ್ಯಾಂಕಿನ ಹೆಸರಿಗೆ ನೋಂದಾವಣೆ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.**

(4) ಖಾತೆ ಸಂಖ್ಯೆ : 02536000007 ರೂ.1,95,00,000/–

ಇ–ಖಾತಾದಲ್ಲಿ ಸ್ವತ್ತಿನ ಅಳತೆಯಲ್ಲಿ ವ್ಯತ್ಯಾಸವಿರುತ್ತದೆ.

**ಅನುವರ್ತನೆ : ವ್ಯತ್ಯಾಸವನ್ನು ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ಧವಾಗಿ ಮರುಪಾವತಿಸುತ್ತಿದ್ದಾರೆ.**

**2. ಮತ್ತೀಕೆರೆ ಶಾಖೆ :**

(1) ಖಾತೆ ಸಂಖ್ಯೆ : 03403016254 ರೂ.85,00,000/–

ಸಾಲಗಾರರು 2021–22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಾಗಿದ್ದು ವೇತನ ಪಡೆಯುತ್ತಿದ್ದು ಮತ್ತು 2022–23ನೇ ಸಾಲಿನಾ ಆರ್ಥಿಕ ವರ್ಷದಲ್ಲಿ ವಯೋನಿವೃತ್ತಿ ಹೊಂದಿ ಪಿಂಚಣಿ ಮೊತ್ತವನ್ನು ಪಡೆಯುತ್ತಿದ್ದರು ಆಯಾ ವರ್ಷದ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವುದಿಲ್ಲ.

**ಅನುವರ್ತನೆ : ಸಾಲಗಾರರ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿನ ಆದಾಯ ಮತ್ತು ಪಿಂಚಣಿ ಮೊತ್ತವನ್ನು ಗಣನೆಗೆ ತೆಗೆದುಕೊಂಡು ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ಧವಾಗಿ ಮರುಪಾವತಿಸುತ್ತಿದ್ದಾರೆ.**

(2) ಖಾತೆ ಸಂಖ್ಯೆ : 03533000001 ರೂ.54,00,000/–

ಸಾಲಗಾರರಿಗೆ ನಿವೇಶನ ಕೊಳ್ಳಲು ಸಾಲ ನೀಡಲಾಗಿದೆ. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.52.65 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.54 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ಧವಾಗಿ ಮರುಪಾವತಿಸುತ್ತಿದ್ದಾರೆ.**

**3. ವಿಜಯನಗರ ಶಾಖೆ :**

(1) ಖಾತೆ ಸಂಖ್ಯೆ : 04403006923 ರೂ.65,00,000/–

ಅ) ಸಾಲಗಾರರಿಗೆ ಮನೆ ಕೊಳ್ಳಲು ಸಾಲ ನೀಡಲಾಗಿದೆ. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.49.20 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.65 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ಧವಾಗಿ ಮರುಪಾವತಿಸುತ್ತಿದ್ದಾರೆ.**

ಆ) ಪಾವತಿಸಿದ ಮೊತ್ತ ರೂ.1.18 ಲಕ್ಷಗಳ ವಿವರವನ್ನು ಮಾರಾಟ ಪತ್ರದಲ್ಲಿ ನಮೂದಿಸಿರುವುದಿಲ್ಲ.

ಇ) ಮಾರಾಟ ಕರಾರು ಪತ್ರದಲ್ಲಿ ರೂ.4.15 ಲಕ್ಷಗಳ ನಗದು ವಿವರವನ್ನು ನಮೂದಿಸಿದ್ದು ಮಾರಾಟ ಪತ್ರದಲ್ಲಿ ನಮೂದಿಸಿರುವುದಿಲ್ಲ.

**ಅನುವರ್ತನೆ : ಕರಾರು ಪತ್ರದಲ್ಲಿ ನಮೂದಿಸಿದ ಹಾಗೂ ಪಾವತಿಸಿದ ಮೊತ್ತಗಳನ್ನು ಮಾರಾಟ ಪತ್ರದಲ್ಲಿ ಪ್ರತ್ಯೇಕವಾಗಿ ನಮೂದಿಸುವ ಬದಲು ಒಟ್ಟುಗೂಡಿಸಿ ನಮೂದಿಸಿರುತ್ತಾರೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(2) ಖಾತೆ ಸಂಖ್ಯೆ : 04403006924 ರೂ.20,00,000/–

ಅ) ಸಾಲಗಾರರಿಗೆ ನಿವೇಶನ ಕೊಳ್ಳಲು ಸಾಲ ನೀಡಿದ್ದು. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.14.40 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.20 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

ಆ) ಮಾರಾಟ ಒಪ್ಪಂದದ ಕರಾರು ಪತ್ರದಲ್ಲಿ ರೂ.28.50 ಲಕ್ಷಗಳನ್ನು ನಮೂದಿಸಿದ್ದು, ಮಾರಾಟ ಪತ್ರದಲ್ಲಿ ರೂ.24 ಲಕ್ಷಗಳನ್ನು ನಮೂದಿಸಲಾಗಿರುತ್ತದೆ.

**ಅನುವರ್ತನೆ : ಕರ್ನಾಟಕ ರಾಜ್ಯ ಮುಂದ್ರಾಕ ಇಲಾಖೆಯ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವ ಮೊತ್ತವನ್ನು ನಮೂದಿಸಿರುತ್ತಾರೆ.**

**4. ಯಲಹಂಕ ಶಾಖೆ:**

(1) ಖಾತೆ ಸಂಖ್ಯೆ : 06403005754 – ರೂ.40,00,000/–

ಸಾಲಗಾರರಿಗೆ ಮನೆ ಕೊಳ್ಳಲು ಸಾಲ ನೀಡಿದ್ದು. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.27 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.40 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

**5. ಬಿ.ಇ.ಎಸ್ ಕಾಲೇಜು ಶಾಖೆ :**

(1) ಖಾತೆ ಸಂಖ್ಯೆ : 08403000464 ರೂ.1,40,00,000/–

ಅ) ಸಾಲವನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ Take Over ಮಾಡಿಕೊಂಡು ಮನೆ ಕಟ್ಟುವ ಉದ್ದೇಶಕ್ಕೆ ಸಾಲ ನೀಡಲಾಗಿದೆ.

ಆ) ಅಭಿಯಂತರರ ಮೌಲ್ಯದ ಮೇಲೆ ಸಾಲದ ನಿಯಮಾವಳಿಗಳ ಪ್ರಕಾರ ರೂ.103.61 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.140 ಲಕ್ಷ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ, ಮನೆ ಕಟ್ಟಲು ತಗಲುವ ಅಂದಾಜು ವೆಚ್ಚದ ದರಪಟ್ಟಿಯ ಮೊತ್ತ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರು ಪಾವತಿಸುತ್ತಿದ್ದಾರೆ.**

(2) ಖಾತೆ ಸಂಖ್ಯೆ : 08403000461 ರೂ.1,40,00,000/–

ಸಾಲಗಾರರ ವಾರ್ಷಿಕ ಒಟ್ಟು ವ್ಯವಹಾರ ರೂ.10 ಕೋಟಿಗಳಿಗಿಂತ ಮೀರಿದ್ದು ಆರ್ಥಿಕ ಲೆಕ್ಕ ಪರಿಶೋಧನಾ ತಃಖ್ತೆಗಳನ್ನು ಪಡೆಯಬೇಕಾಗಿದ್ದು, ಪಡೆದಿರುವುದಿಲ್ಲ.

**ಅನುವರ್ತನೆ : ಪಡೆಯಲು ಕ್ರಮಕೈಗೊಳ್ಳಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

**6. ಬೇಗೂರು ಶಾಖೆ :**

(1) ಖಾತೆ ಸಂಖ್ಯೆ: 09536000002 ರೂ.1,95,00,000/–

ಅ) Cearsai ವರದಿಯಲ್ಲಿ ಹಣಕಾಸು ನೇರವು ನೀಡಿದ ಸಂಸ್ಥೆಯ ಕಲಂ ನಲ್ಲಿ ಬಹು ಹಣಕಾಸು ಸಂಸ್ಥೆಗಳು ಎಂದಿದ್ದು ಈ ನ್ಯೂನ್ಯತೆಯನ್ನು ಸರಿಪಡಿಸಿಕೊಳ್ಳಲು ಕ್ರಮ ಆಗತ್ಯ.

**ಅನುವರ್ತನೆ: ಸರಿಪಡಿಸಿಕೊಳ್ಳಲಾಗುವುದು.**

ಆ) ವಿಮೆ ಪಾಲಿಸಿಯ ಪ್ರತಿ ಲಭ್ಯವಿರುವುದಿಲ್ಲ.

**ಅನುವರ್ತನೆ : ಪಡೆಯಲಾಗಿದೆ.**

(2) ಖಾತೆ ಸಂಖ್ಯೆ: 09403000051 ರೂ.46,00,000/–

ಸಾಲಗಾರರಿಗೆ ಪ್ಲಾಟ್ ಕೊಳ್ಳಲು ಸಾಲ ನೀಡಿದ್ದು. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.36.73 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.46 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(3) ಖಾತೆ ಸಂಖ್ಯೆ: 09403000053 ರೂ.97,00,000/–

ಅ) ಸಾಲಗಾರರಿಗೆ ಮನೆ ಕೊಳ್ಳಲು ಸಾಲ ನೀಡಿದ್ದು. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.64.86 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.97 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ಧವಾಗಿ ಮರುಪಾವತಿಸುತ್ತಿದ್ದಾರೆ.**

ಆ) ಮಾರಾಟ ಒಪ್ಪಂದದ ಕರಾರು ಪತ್ರದಲ್ಲಿ ರೂ.152 ಲಕ್ಷಗಳನ್ನು ನಮೂದಿಸಿದ್ದು, ಮಾರಾಟ ಪತ್ರದಲ್ಲಿ ರೂ.108.10 ಲಕ್ಷಗಳನ್ನು ನಮೂದಿಸಲಾಗಿರುತ್ತದೆ.

**ಅನುವರ್ತನೆ : ಕರ್ನಾಟಕ ರಾಜ್ಯ ಮುಂದ್ರಾಕ ಇಲಾಖೆಯ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವ ಮೊತ್ತವನ್ನು ನಮೂದಿಸಿರುತ್ತಾರೆ.**

ಇ) ಮೂಲ ಮಾರಾಟ ಒಪ್ಪಂದದ ಪತ್ರ ಲಭ್ಯವಿರುವುದಿಲ್ಲ.

**ಅನುವರ್ತನೆ : ಪಡೆಯಲಾಗಿದೆ.**

ಈ) ಕಾನೂನು ಸಲಹೆಗಾರರ ವರದಿಯಲ್ಲಿ ಮನೆ ಬದಲಿಗೆ ಖಾಲಿ ನಿವೇಶನವೆಂದು ಉಲ್ಲೇಖಿಸಲಾಗಿದೆ.

**ಅನುವರ್ತನೆ : ಸರಿಪಡಿಸಿದ ವರದಿಯನ್ನು ಪಡೆಯಲಾಗಿದೆ.**

ಉ) ಕಾನೂನು ಸಲಹೆಗಾರರ ವರದಿಯಲ್ಲಿ ಮಾರಾಟ ಒಪ್ಪಂದದ ಪತ್ರಕ್ಕೆ ಕರ್ನಾಟಕ ಮುದ್ರಾಂಕ ಶುಲ್ಕ ಕಾಯಿದೆ ಪ್ರಕಾರ ನಿಗಧಿ ಪಡಿಸಿದ ಶುಲ್ಕವನ್ನು ಪಾವತಿಸಬೇಕೆಂದು ತಿಳಿಸಿದರು ಪಾವತಿಸಿರುವುದಿಲ್ಲ.

**ಅನುವರ್ತನೆ : ನಿಗಧಿತ ಶುಲ್ಕವನ್ನು ಮುಂದ್ರಾಕ ಇಲಾಖೆಗೆ ಪಾವತಿಸಿ ಮಾರಾಟ (ಕ್ರಯ) ಪತ್ರವನ್ನು ನೋಂದಾವಣೆಮಾಡಿಕೊಂಡಿರುತ್ತಾರೆ.**

ಊ) ವಿಮೆ ಪಾಲಿಸಿಯ ಪ್ರತಿ ಲಭ್ಯವಿರುವುದಿಲ್ಲ.

**ಅನುವರ್ತನೆ : ಪಡೆಯಲಾಗಿದೆ.**

**7. ಸಿಬ್ಬಂದಿ ಅಡಮಾನ ಸಾಲ :**

1. ಖಾತೆ ಸಂಖ್ಯೆ : 01504001024 – ರೂ.43,00,000/–

ಅ) ಮಾರಾಟ ಪತ್ರದಲ್ಲಿ ಬ್ಯಾಂಕ ನೀಡಿರುವ ಸಾಲದ ಮೊತ್ತ ಮತ್ತು ಮಾರಾಟಗಾರರಿಗೆ ಪಾವತಿಸಿದ್ದ ಮೊತ್ತದ ವಿವರವನ್ನು ಉಲ್ಲೇಖಿಸಿರುವುದಿಲ್ಲ.

**ಅನುವರ್ತನೆ : ತಿದ್ದುಪಡಿ ಪತ್ರ ಪಡೆಯಲು ಕ್ರಮಕೈಗೊಳ್ಳಲಾಗಿದೆ.**

ಆ) ಸಿಬ್ಬಂದಿ ಸಾಲ ನಿಯಮಾವಳಿಗಳ ಪ್ರಕಾರ ಒಟ್ಟು ಕಡಿತಗಳು ಶೇ.50ಕಿಂತ ಕಡಿಮೆ ಇರಬೇಕಾಗಿದ್ದು ಶೇ.50ರ ಮಿತಿಗಿಂತ ಹೆಚ್ಚಾಗಿರುತ್ತದೆ.

**ಅನುವರ್ತನೆ : ಸಿಬ್ಬಂದಿಯ ವೇತನ ಮತ್ತು ಬಾಡಿಗೆ ಆದಾಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ.**

ಇ) ಸಾಲದ ಅವಧಿಯು ಸಿಬ್ಬಂದಿಯ ಉಳಿದ ಸೇವಾ ಅವಧಿಗಿಂತ ಹೆಚ್ಚಾಗಿರುತ್ತದೆ.

**ಅನುವರ್ತನೆ : ಸಿಬ್ಬಂದಿ ವಯೋನಿವೃತ್ತಿ ಸೌಲಭ್ಯದ ಮೊತ್ತದಲ್ಲಿ ಸಾಲದ ಖಾತೆಯನ್ನು ಮುಕ್ತಾಯ ಮಾಡುವುದಾಗಿ ಒಪ್ಪಿಗೆ ಪತ್ರ ನೀಡಿರುತ್ತಾರೆ.**

**8. ಇತರೆ ನ್ಯೂನ್ಯತೆಗಳು**

1. ಈ ಕೆಳಕಂಡ ಅಡಮಾನ ಸಾಲದ ಖಾತೆಗಳಲ್ಲಿ ಬಿಡುಗಡೆಯಾದ ಸಾಲದ ಮೊತ್ತದಲ್ಲಿ ಹೆಚ್ಚಿನ ಮೊತ್ತವನ್ನು ಉಳಿತಾಯ/ ಠೇವಣಿಗಳಲ್ಲಿ ಹೂಡಿಕೆ ಮಾಡಿರುತ್ತಾರೆ.

1) 02536000005
2) 04403006928
3) 05403003534
4) 05403003539
5) 09536000002
6) 09536000001
7) 09403000049

**ಅನುವರ್ತನೆ : 1) ಖಾತೆ ಸಂಖ್ಯೆ : 04403006928, 05403003534, 09536000001 ಮತ್ತು 09403000049 ಈ ಖಾತೆಗಳಲ್ಲಿನ ಠೇವಣಿ ಮೊತ್ತವನ್ನು ಹಿಂಪಡೆದಿರುತ್ತಾರೆ. ಉಳಿದ ಠೇವಣಿ ಖಾತೆಗಳಲ್ಲಿ ಹೂಡಿಕೆಮಾಡಿರುವ ಅಡಮಾನ ಸಾಲದ ಮೊತ್ತವನ್ನು ಸಾಲ ಪಡೆದ ಉದ್ದೇಶಕ್ಕೆ ಬಳಸಿಕೊಳ್ಳುವಂತೆ ಸಾಲಗಾರರಿಗೆ ತಿಳಿಸಲಾಗಿದೆ.**

2. ಈ ಕೆಳಕಂಡ ಅಡಮಾನ ಸಾಲದ ಖಾತೆಗಳಲ್ಲಿ ಬಿಡುಗಡೆಯಾದ ಸಾಲದ ಮೊತ್ತ ಉಳಿತಾಯ ಖಾತೆಗೆ ಜಮೆಯಾಗಿದ್ದು ಉಳಿತಾಯ ಖಾತೆಯಲ್ಲಿ ಬಾಕಿ ಇರುವ ಸಾಲದ ಮೊತ್ತದಲ್ಲಿ ಪ್ರತಿ ತಿಂಗಳು ಸಾಲದ ಕಂತು ಸಾಲದ ಖಾತೆಗೆ ಜಮೆಯಾಗುತ್ತಿದೆ.

1) 02536000006
2) 02536000003
3) 05403003537
4) 05403003536
5) 08403000465
6) 09403000050

**ಅನುವರ್ತನೆ : ಖಾತೆ ಸಂಖ್ಯೆ : 02536000003 – IMPS ಮೂಲಕ ವರ್ಗಾವಣೆಯಾದ ಮೊತ್ತದಲ್ಲಿ ಸಾಲದ ಕಂತುಗಳ ಮೊತ್ತವನ್ನು ಪಡೆಯಲಾಗುತ್ತಿದೆ.**

**ಖಾತೆ ಸಂಖ್ಯೆ : 08403000465 ಇವರ ಉಳಿತಾಯ ಖಾತೆಯಲ್ಲಿ ಸಾಲ ಪಡೆಯುವುದಕ್ಕೆ ಮೊದಲೆ ಬಾಕಿ ಇದ್ದ ಮೊತ್ತದಲ್ಲಿ ಸಾಲದ ಕಂತುಗಳ ಮೊತ್ತವನ್ನು ಪಡೆಯಲಾಗುತ್ತಿದೆ.**

**ಖಾತೆ ಸಂಖ್ಯೆ : 09403000050 – ಪ್ರಸ್ತುತ ನಗದು ಮೂಲಕ ಸಾಲದ ಕಂತುಗಳನ್ನು ಪಾವತಿಸುತ್ತಿದ್ದಾರೆ. ಉಳಿದ ಖಾತೆಗಳಲ್ಲಿ ಬಿಡುಗಡೆಯಾದ ಸಾಲದ ಮೊತ್ತದಲ್ಲಿ ಸಾಲದ ಕಂತುಗಳು ಸಾಲದ ಖಾತೆಗೆ ಜಮೆಯಾಗದಂತೆ ಕ್ರಮವಹಿಸಲಾಗಿದೆ.**

3. ಮತ್ತೀಕೆರೆ ಮತ್ತು ವಿಜಯನಗರ ಶಾಖೆಗಳಲ್ಲಿ ಕೆಲವು ಆಭರಣ ಸಾಲಗಾರರು ಪೂರ್ತಿಮೊತ್ತವನ್ನು ಪಾವತಿಸಿದ ನಂತರ ಸಾಲದ ಖಾತೆಯನ್ನು ಮುಕ್ತಾಯ ಮಾಡಿ ಅದೆ ಸಾಲಗಾರರಿಗೆ ಅದೇ ದಿವಸ ಮತ್ತೆ ಆಭರಣ ಸಾಲಗಳನ್ನು ನೀಡಲಾಗಿದೆ.

**ಅನುವರ್ತನೆ : ಆಭರಣ ಸಾಲದ ಖಾತೆಯನ್ನು ಮುಕ್ತಾಯ ಮಾಡಿದ ನಂತರದ ದಿನಗಳಲ್ಲಿ ಸಾಲ ನೀಡಲು ಕ್ರಮಕೈಗೊಳ್ಳಲಾಗಿದೆ.**

<table>
<tr>
<td>ಈ</td>
<td>1)</td>
<td>ಸದಸ್ಯರ ಸಾಲ ಮತ್ತು ಮುಂಗಡ ಗಳು:<br>ಬ್ಯಾಂಕಿನ ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ನೀಡ ಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಬಗ್ಗೆ ವಿಮರ್ಷೆ.</td>
<td>
<table>
<tr><th>ಕ್ರ.ಸಂ</th><th>ಸಾಲದ ಸ್ವರೂಪ</th><th>ಸಾಲಗಳ ಅವಧಿ ತಿಂಗಳು</th><th>ಸಾಲದ ಗರಿಷ್ಠ ಮಿತಿ</th></tr>
<tr><td>1</td><td>ಚಿನ್ನಾಭರಣ ಸಾಲ</td><td>12</td><td>ರೂ.10 ಲಕ್ಷ</td></tr>
<tr><td>2</td><td>ವಾಹನ ಸಾಲ</td><td>60</td><td>ರೂ.40 ಲಕ್ಷ</td></tr>
<tr><td colspan="4">ಅಡಮಾನ ಸಾಲಗಳು</td></tr>
<tr><td>3</td><td>ವ್ಯಾಪಾರ ಅಭಿವೃದ್ದಿ ಸಾಲ</td><td>120</td><td>ರೂ.195 ಲಕ್ಷಗಳು</td></tr>
<tr><td>4</td><td>ಮನೆ ಕಟ್ಟಲು/ ಕೊಳ್ಳಲು</td><td>180</td><td>ರೂ.140 ಲಕ್ಷಗಳು</td></tr>
<tr><td>5</td><td>ನಿವೇಶನ ಕೊಳ್ಳಲು</td><td>180</td><td>ರೂ.60 ಲಕ್ಷಗಳು</td></tr>
<tr><td>6</td><td>ನಿವೇಶನ ಕೊಳ್ಳಲು ಜೊತೆಗೆ ಕಟ್ಟಡ ಕಟ್ಟಲು</td><td>180</td><td>ರೂ.140 ಲಕ್ಷಗಳು</td></tr>
<tr><td>7</td><td>ಸಾಲ ತೀರಿಸಲು</td><td>180</td><td>ರೂ.195 ಲಕ್ಷಗಳು</td></tr>
<tr><td>8</td><td>ಮದುವೆ ಉದ್ದೇಶಕ್ಕೆ</td><td>180</td><td>ರೂ.25 ಲಕ್ಷಗಳು</td></tr>
<tr><td>9</td><td>ಮನೆ ರಿಫೇರಿ/ ನವೀಕರಣ</td><td>180</td><td>ರೂ.30 ಲಕ್ಷಗಳು</td></tr>
<tr><td>10</td><td>ವಿದ್ಯಾಭ್ಯಾಸಕ್ಕೆ</td><td>180</td><td>ರೂ.25 ಲಕ್ಷಗಳು</td></tr>
<tr><td>11</td><td>ಸ್ವತ್ತಿನ ಮೇಲೆ ಬಾಡಿಗೆ ರಿಯಾಯಿತಿ</td><td>120</td><td>ರೂ.150 ಲಕ್ಷಗಳು</td></tr>
</table>
ಆರ್.ಬಿ.ಐ ಮಾರ್ಗ ಸೂಚಿಯ ಪ್ರಕಾರ ಏಕ ಸಾಲಗಾರನಿಗೆ ಮತ್ತು ಗುಂಪು ಸಾಲಗಾರರಿಗೆ ಅನುಕ್ರಮವಾಗಿ ಹಿಂದಿನ ಆರ್ಥಿಕ ವರ್ಷದ Tier 1 ಬಂಡವಾಳ ನಿಧಿಯ (ಶೇ.15 ಮತ್ತು ಶೇ.25) ಮೀರದಂತೆ ಸಾಲಗಳನ್ನು ಮಂಜೂರು ಮಾಡಬಹುದಾಗಿರುತ್ತದೆ.
</td>
</tr>
</table>

| | | | |
|---|---|---|---|
| | | | Audited tier 1 capital (in crores)<br><br>Particulars — Amount in Rs.<br>Net paid up capital — -2.27<br>Total Reserves & Surplus — 15.50<br>Total — 13.23<br>Single Exposure Limit 15% of Tier 1 Capital — 1.98<br>Group Exposure Limit 25% of Tier 1 Capita — 3.30<br><br>ಬ್ಯಾಂಕು ನಿಗದಿ ಪಡಿಸಿದ ಒಬ್ಬ ಸದಸ್ಯನ ಎಲ್ಲಾ ರೀತಿಯ ಪಡೆಯಬಹುದಾದ ಸಾಲದ ಮಿತಿ ರೂ.195 ಲಕ್ಷಗಳು.<br>ಸಾಲಗಳ ಮೌಲ್ಯಾಂಕನದಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ಕಂಡಿಕೆ "ಎಫ್" ದಲ್ಲಿ ವಿವರಿಸಲಾಗಿದೆ. |
| 2 | | ವರದಿ ಸಾಲಿನಲ್ಲಿ ಆದ ಪ್ರತಿ ಯೊಂದು ಸಾಲದ ವ್ಯವಹಾರ ಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು. | |

(ಲಕ್ಷಗಳಲ್ಲಿ)

| ಸಾಲಗಳ ಸ್ವರೂಪ | ಆರಂಭದ ಬಾಕಿ | ಪ್ರಸಕ್ತ ಸಾಲಿನಲ್ಲಿ ಹಂಚಿದ ಸಾಲ | ಪ್ರಸಕ್ತ ಸಾಲಿನಲ್ಲಿ ವಸೂಲಿಸಿದ ಸಾಲ | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ |
|---|---|---|---|---|---|---|
| ಆಭರಣ ಸಾಲ | 61.30 | 188.56 | 135.63 | 114.23 | 114.23 | – |
| ಓವರ್ ಡ್ರಾಫ್ಟ್ | 236.06 | – | – | 236.06 | 236.06 | – |
| ಆಧಾರವಿಲ್ಲದ ಸಾಲಗಳು | 256.81 | 36.58 | 116.34 | 177.05 | 177.05 | – |
| ವಾಹನ ಸಾಲಗಳು | 153.10 | 142.77 | 52.93 | 242.94 | 242.94 | – |

| | | | | | | |
|---|---|---|---|---|---|---|
| ಸ್ಥಿರಾಸ್ತಿ ಮೇಲಿನ ಸಾಲಗಳು | 14984.28 | 5786.67 | 4666.12 | 16104.83 | 16104.83 | – |
| ಠೇವಣಿ ಮೇಲಿನ ಸಾಲಗಳು | 205.44 | 432.56 | 452.79 | 185.21 | 185.21 | – |
| ಸಿಬ್ಬಂದಿ ಮುಂಗಡ | 1139.41 | 207.45 | 299.42 | 1047.44 | 1047.44 | – |
| ಠೇವಣಿ ಮೇಲಿನ ಓವರ್ ಡ್ರಾಫ್ಟ್ | 17.67 | 266.65 | 284.30 | 0.02 | 0.02 | – |
| Restructured ಸಾಲಗಳು | 483.95 | – | 161.01 | 322.94 | 322.94 | – |
| **ಒಟ್ಟು ರೂ** | **17538.02** | **7061.24** | **6168.54** | **18430.72** | **18430.72** | – |

| | | | |
|---|---|---|---|
| | 3 | ವರ್ಷಾಂತ್ಯಕ್ಕೆ ಬಾಕಿ ಇದ್ದ ಸಾಲಗಳನ್ನು ಹಿಂದಿನ ಸಾಲಿನ ಅವಧಿಗೆ ಹೋಲಿಸಿ ಹೆಚ್ಚು / ಕಡಿಮೆ ಆದ ಬಗ್ಗೆ ವಿಮರ್ಶೆ. | 2024–25: 17538.02 ಲಕ್ಷಗಳು; 2025–26: 18430.72 ಲಕ್ಷಗಳು<br>ವರದಿ ಸಾಲಿನ ಆರಂಭದಲ್ಲಿ ಸಾಲಗಳು ರೂ.175.38 ಕೋಟಿಗಳಾಗಿದ್ದು ವರ್ಷಾಂತ್ಯಕ್ಕೆ ರೂ.184.31 ಕೋಟಿಗಳಾಗಿರುತ್ತದೆ. ಇದು ಹಿಂದಿನ ಸಾಲಿನ ಅಂತ್ಯಕ್ಕೆ ಹೋಲಿಸಿದಾಗ ರೂ.8.93 ಕೋಟಿ (ಅಂದರೆ ಶೇ.5.09) ಗಳಷ್ಟು ಏರಿಕೆಯಾಗಿದೆ. |
| | 4 | ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ/ಚಾಲ್ತಿಯಲ್ಲಿರುವ ಬಗ್ಗೆ. | ಆಡಳಿತ ಮಂಡಳಿಯ ಸದಸ್ಯರು ಯಾವುದೇ ಸಾಲ ಮತ್ತು ಮುಂಗಡವನ್ನು ಪಡೆದಿರುವುದಿಲ್ಲ. |
| | | ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ದ ಕ್ರಮ ಕೈಕೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ? | ಆಡಳಿತ ಮಂಡಳಿಯ ಸದಸ್ಯರು ಬ್ಯಾಂಕಿನಲ್ಲಿ ಯಾವುದೇ ಸಾಲ ಪಡೆಯದೇ ಇರುವುದರಿಂದ ಈ ಬಗ್ಗೆ ಪ್ರಸ್ತಾವನೆ ಸಲ್ಲಿಸುವ ಅಗತ್ಯವಿರುವುದಿಲ್ಲ. |

<table>
<tr><td></td><td>5</td><td>ಸಾಲದ ಕುಳುವಾರು ತಃಖ್ತೆಗಳು ಆಸ್ತಿ ಜವಾಬ್ದಾರಿ ತಃಖ್ತೆಗೆ ತಾಳೆ ಇರುವ ಬಗ್ಗೆ:<table><tr><td>ಕ್ರ.ಸಂ</td><td>ಸಾಲದ ಸ್ವರೂಪ</td><td>ವರ್ಷಾಂತ್ಯದ ಬಾಕಿ</td><td>ಯಾದಿಯ ಮೊತ್ತ</td><td>ಅಂತರ</td></tr><tr><td></td><td></td><td></td><td></td><td></td></tr></table></td><td>ಸಾಲದ ಕುಳುವಾರು ತಃಖ್ತೆಗಳು ಆಸ್ತಿ ಜವಾಬ್ದಾರಿ ತಃಖ್ತೆಗೆ ತಾಳೆ ಇರುತ್ತವೆ. ಸಾಲದ ವಿವರಗಳನ್ನು ಈ ಮೇಲಿನ ಕ್ರಮ ಸಂಖ್ಯೆ 2 ರಲ್ಲಿ ವಿವರಿಸಲಾಗಿದೆ.</td></tr>
<tr><td></td><td>6</td><td>ಮುದ್ದತ್ತ ಮೀರಿದ ಮತ್ತು ಮುದ್ದತ್ತ ಮೀರುವ ಅವಧಿ ಪೂರ್ವದಲ್ಲಿಯೇ ಸಾಲಗಳನ್ನು ನವೀಕರಿಸಲಾಗುತ್ತಿದೆಯೇ? ಈ ರೀತಿ ನವೀಕರಿಸುವುದಕ್ಕೆ ಬೈಲಾದಲ್ಲಿ ಅವಕಾಶವಿರುವುದೋ?</td><td>ಮುದ್ದತ್ತ ಮೀರಿದ ಮತ್ತು ಮುದ್ದತ್ತ ಮೀರುವ ಅವಧಿ ಪೂರ್ವದಲ್ಲಿಯೇ ಸಾಲಗಳನ್ನು ನವೀಕರಿಸಿರುವುದಿಲ್ಲ. ನವೀಕರಿಸುವುದಕ್ಕೆ ಬ್ಯಾಂಕಿನ ಬೈಲಾದಲ್ಲಿ ಅವಕಾಶವಿದೆ.</td></tr>
<tr><td></td><td>7</td><td>ವರದಿ ಸಾಲಿನಲ್ಲಿ ಒಟ್ಟು ನವೀಕರಿಸಿದ ಸಾಲದ ಪ್ರಕರಣಗಳು ಮತ್ತು ಮೊತ್ತ</td><td>ಯಾವುದೇ ಸಾಲಗಳನ್ನು ನವೀಕರಿಸಿರುವುದಿಲ್ಲ.</td></tr>
<tr><td></td><td>8</td><td>ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದ ಅಷ್ಟೇ ಮೊತ್ತಕ್ಕೆ ಹೊಸ ಸಾಲ ಎಂದು ಖರ್ಚು ಹಾಕಿರುವ ಪ್ರಕರಣಗಳಿರುತ್ತಿವೆಯೇ ವಿವರಿಸಿ.</td><td>ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದ ಅಷ್ಟೇ ಮೊತ್ತಕ್ಕೆ ಹೊಸ ಸಾಲ ಎಂದು ಖರ್ಚು ಹಾಕಿರುವ ಪ್ರಕರಣಗಳು ಲೆಕ್ಕ ಪರಿಶೋಧನಾ ವೇಳೆಯಲ್ಲಿ ಕಂಡು ಬಂದಿರುವುದಿಲ್ಲ.</td></tr>
<tr><td></td><td>9</td><td>ಹಳೇ ಸಾಲದ ಬಾಕಿಗಿಂತ ಹೆಚ್ಚುವರಿ ಸಾಲ ಮಂಜೂರಿ ಮಾಡಿ ಹಳೇ ಸಾಲದ ಬಾಕಿ ಜಮೆ ಪಡೆದಿರುವ ಪ್ರಕರಣಗಳಿದ್ದಲ್ಲಿ ವಿಮರ್ಶಿಸಿ.</td><td>ವರದಿ ಸಾಲಿನಲ್ಲಿ ಇಂತಹ ಸಾಲಗಳನ್ನು ಸಾಲಗಾರರಿಗೆ ಮಂಜೂರು ಮಾಡಿರುವ ಪ್ರಕರಣಗಳು ಲೆಕ್ಕ ಪರಿಶೋಧನಾ ವೇಳೆಯಲ್ಲಿ ಕಂಡು ಬಂದಿರುವುದಿಲ್ಲ.</td></tr>
<tr><td></td><td>10</td><td>ಬಂಗಾರ ಅಡುವಿನ ಸಾಲ ನೀಡಿದಲ್ಲಿ ಸಂಸ್ಥೆಯಲ್ಲಿಯ ಅಡುವಿನ ಬಂಗಾರದ ಆಭರಣದ ಬಗ್ಗೆ ಭದ್ರತೆ ಹಾಗೂ ವಿಮೆ ಮಾಡಿಸಿರುವ ಮೊತ್ತ.</td><td>ಬ್ಯಾಂಕು ಚಿನ್ನಾಭರಣದ ಮೇಲೆ ಸಾಲ ನೀಡುತ್ತಿದ್ದು ಸಾಲಕ್ಕೆ ಅಡವಿಟ್ಟ ಎಲ್ಲಾ ಆಭರಣಗಳನ್ನು ಸೇಫ್ ಡಿಪಾಸಿಟ್ ಲಾಕರ್‌ನಲ್ಲಿ ಭದ್ರವಾಗಿ ಇಡಲಾಗಿದೆ. ಬ್ಯಾಂಕು ಒಟ್ಟು ರೂ.6.86 ಕೋಟಿಗಳಿಗೆ ಬ್ಲಾಂಕೆಟ್ ಪಾಲಿಸಿ ಅಡಿಯಲ್ಲಿ ನಗದು ಮತ್ತು ಆಭರಣಗಳ ಮೇಲೆ ವಿಮೆ ಮಾಡಿಸಲಾಗಿದ್ದು ಅದು ದಿನಾಂಕ: 31.03.2027ರವರೆಗೆ ಚಾಲ್ತಿಯಲ್ಲಿರುತ್ತದೆ.</td></tr>
</table>

| | | | |
|---|---|---|---|
| | 11 | ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು | ದಿನಾಂಕ 31.03.2026ಕ್ಕೆ ಆಧಾರದ ಸಾಲಗಳು ರೂ.18253.68 ಲಕ್ಷಗಳು ಇದ್ದು ಮತ್ತು ಆಧಾರವಿಲ್ಲದ ಸಾಲಗಳು ರೂ.177.05 ಲಕ್ಷಗಳು ಇರುತ್ತವೆ. ಆಧಾರರಹಿತ ಸಾಲಗಳು ಹಿಂದಿನ ವರ್ಷಾಂತ್ಯದ ಒಟ್ಟು ಸಾಲಗಳಿಗೆ ಹೋಲಿಸಿದಾಗ ಅದು ಶೇ.10 ಮೀರದಂತೆ ಇರಬೇಕಾಗಿದ್ದು ಇದು ಶೇ.0.96 ಇರುತ್ತದೆ. |
| | 12 | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನ್ಯತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು, ಅದರಂತೆ ಸಂಘಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನ್ಯತೆಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿನ ಗುರುತರ ನ್ಯೂನ್ಯತೆಗಳನ್ನು ಕಂಡಿಕೆ ಎಫ್ ನಲ್ಲಿ ವಿವರಿಸಲಾಗಿದೆ. ಬ್ಯಾಂಕು ಸದರಿ ಸಾಲಿನಲ್ಲಿ ಸಂಘ ಸಂಸ್ಥೆಗಳಿಗೆ ಠೇವಣಿಗಳ ಮೇಲೆ ಸಾಲ ನೀಡಲಾಗಿರುತ್ತದೆ. |
| | 13 | ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು. | ಆಯ್ದ ಕೆಲವು ಸಾಲದ ಖಾತೆಗಳ ಮೇಲಿನ ಬಡ್ಡಿ ಲೆಕ್ಕಾಚಾರವನ್ನು ಪರಿಶೀಲಿಸಲಾಗಿದ್ದು, ಯಾವುದೇ ನ್ಯೂನ್ಯತೆಗಳು ಕಂಡು ಬಂದಿರುವುದಿಲ್ಲ. |
| | 14 | ಒಟ್ಟು ಸದಸ್ಯರ ಸಂಖ್ಯೆಗೆ ಬ್ಯಾಂಕಿನ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು. | ಒಟ್ಟು ಸದಸ್ಯರ ಸಂಖ್ಯೆ: 38496<br>ಸಾಲ ಪಡೆದ ಸದಸ್ಯರ ಸಂಖ್ಯೆ : 942<br>ಶೇಕಡಾವಾರು 2.45 ರಷ್ಟು. |
| | 15 | ರೂ.20,000ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು. | ಲೆಕ್ಕಪರಿಶೋಧನಾ ವೇಳೆಯಲ್ಲಿ ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| | 16 | ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಶಿಸುವುದು. | ಸ್ಥಿರಾಸ್ತಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದ್ದು ಸಾಮಾನ್ಯವಾಗಿ ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹ ಸದಸ್ಯರಿಗೆ ಸಾಲ ಮಂಜೂರು ಮಾಡಲಾಗುತ್ತಿದೆ. |

| | | | |
|---|---|---|---|
| | 17 | ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಬಗ್ಗೆ ವಿವರಿಸುವುದು | ಸಾಲದ ಖಾತೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಗುರುತಿಸಲಾಗಿದೆ. ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು ಬ್ಯಾಂಕಿನ ಘೋಷಿತ ಅನುತ್ಪಾದಕ ಆಸ್ತಿಗಳು ರೂ.1700.20 ಲಕ್ಷಗಳಾಗಿದ್ದು, ಇದು ಒಟ್ಟು ಸಾಲದ ಮೊತ್ತ ರೂ.18430.72 ಲಕ್ಷಗಳಿಗೆ ಶೇ.9.22 ಮತ್ತು ನಿವ್ವಳ ಎನ್.ಪಿ.ಎ ಶೇ.1.04 ಆಗಿರುತ್ತದೆ. ಆರ್.ಬಿ.ಐ/ ಶಾಸನಬದ್ಧ ಲೆಕ್ಕಪರಿಶೋಧಕರು ಗಮನಿಸಿರುವ ಎನ್.ಪಿ.ಎ ಖಾತೆಗಳನ್ನು ಗಣಕಯಂತ್ರದಲ್ಲಿ ಸರಿಪಡಿಸಿಕೊಂಡಿರುವುದಿಲ್ಲ. **ಅನುವರ್ತನೆ : ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.** |
| | 18 | ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಮೊತ್ತದ ಅನುಗುಣವಾಗಿ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿ ಇರುವುದೋ? | ಸಂಶಯಾತ್ಮಕ ಮತ್ತು ಮುಳುಗುವ ಸಾಲಗಳಿಗೆ ಕಲ್ಪಿಸಬೇಕಾದ ಅವಕಾಶದ ಮೊತ್ತ ರೂ.1445.06 ಲಕ್ಷಗಳಾಗಿದ್ದು ವರ್ಷಾಂತ್ಯಕ್ಕೆ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿಯಲ್ಲಿ ರೂ.1524.61 ಲಕ್ಷಗಳು ಇರುತ್ತದೆ. ಆದ್ದರಿಂದ ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಇರುವ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ. |
| | 19 | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನ್ಯತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು, ಅದರಂತೆ ಸಂಘ ಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನ್ಯತೆಗಳ ಬಗ್ಗೆ ವಿವರವಾಗಿ ವಿಮರ್ಶಿಸುವುದು | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿದಾಗ, ಅವುಗಳಲ್ಲಿ ಗುರುತರ ನ್ಯೂನ್ಯತೆಗಳು ಕಂಡು ಬಂದಿರುವುದಿಲ್ಲ ಮತ್ತು ಸದರಿ ಸಾಲಿನಲ್ಲಿ ಯಾವುದೇ ಸಂಘ ಸಂಸ್ಥೆಗಳಿಗೆ ಸಾಲ ನೀಡಿರುವುದು ಕಂಡು ಬಂದಿರುವುದಿಲ್ಲ. |

| | | | |
|---|---|---|---|
| | 20 | ಲೆಕ್ಕ ಪರಿಶೋಧನಾ ಸೂಚನೆ (Audit Instruction No 1) ಸಂಖ್ಯೆ ಸಿಎಡಿ/ಎಎಫ್ಆರ್–1/ಎ.181–82 ದಿನಾಂಕ : 06.07.1981 ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕ ಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತಪಡಿಸಿಕೊಂಡಿರುವುದರ ಬಗ್ಗೆ ವಿಮರ್ಷಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು. | ಸಾಲದ ಖಾತೆಯಲ್ಲಿರುವ ಬಾಕಿಯನ್ನು ಕೆಲವು ಸಾಲಗಾರರಿಂದ ಖಚಿತ ಪಡಿಸಿಕೊಳ್ಳಲಾಗಿದೆ ಹಾಗೂ ಅವರಿಂದ ದೃಢೀಕರಣ ಪಡೆಯಲಾಗಿದ್ದು, ಅದರ ಪಟ್ಟಿಯನ್ನು ಈ ವರದಿಗೆ ಲಗತ್ತಿಸಲಾಗಿದೆ. |
| **25** | 1 | **ಸುಸ್ತಿ ಸಾಲಗಳ ವಿವರ**<br>**ಸುಸ್ತಿ ಸಾಲದ ಮೊತ್ತ** | ಸುಸ್ತಿ ಸಾಲದ ಮೊತ್ತ ರೂ.902.23 ಲಕ್ಷಗಳು |
| | 2 | ಡಿ.ಸಿ.ಬಿ. ರಿಜಿಸ್ಟರ್ ಇಟ್ಟ ಬಗ್ಗೆ ಒಟ್ಟು ಸಾಲಕ್ಕೆ ಸುಸ್ತಿ ಸಾಲದ ಶೇಕಡ | ಪ್ರತ್ಯೇಕವಾಗಿ ಡಿ.ಸಿ.ಬಿ ರಿಜಿಸ್ಟರ್ ಇರುವುದಿಲ್ಲ. ಆದರೆ ಬ್ಯಾಂಕಿನ ತಂತ್ರಾಂಶದಲ್ಲಿ ಸುಸ್ತಿ ಸಾಲದ ವಿವರಗಳು ಲಭ್ಯವಿರುತ್ತವೆ. ಸುಸ್ತಿ ಸಾಲವು ಒಟ್ಟು ಸಾಲದ ಶೇ.4.90 ರಷ್ಟಿರುತ್ತದೆ. |
| | 3 | ವರ್ಷಾವಾರು, ಸಾಲಾವಾರು ಸುಸ್ತಿ ಸಾಲದ ವಿವರ | |

| ಕ್ರ.ಸಂ | ಅವಧಿ | ಅಡಮಾನ ಸಾಲ | ಆಧಾರ ರಹಿತ ಸಾಲ | ಸಂಬಳಾ ಧಾರಿತ ಸಾಲ | ಠೇವಣಿ ಮೇಲಿನ ಸಾಲ | ಚಿನ್ನಾ ಭರಣಗಳ ಸಾಲ | ಓ.ಡಿ. ಸಾಲ | ವಾಹನ ಸಾಲ | Restructure ಸಾಲ | ಒಟ್ಟು |
|---|---|---|---|---|---|---|---|---|---|---|
| 1 | ಒಂದು ವರ್ಷದೊಳಗೆ | 23.96 | 4.30 | 0 | 0 | 0.54 | 0 | 0.31 | 0.19 | 29.30 |
| 2 | 1 ರಿಂದ 2 ವರ್ಷದೊಳಗೆ | 8.84 | 4.66 | 0 | 0 | 0 | 96.06 | 0 | 0 | 109.56 |
| 3 | 2 ರಿಂದ 3 ವರ್ಷದೊಳಗೆ | 5.87 | 1.65 | 0 | 0 | 0 | 0 | 0 | 0 | 7.52 |
| 4 | 3 ರಿಂದ 4 ವರ್ಷದೊಳಗೆ | 0 | 2.24 | 0 | 0 | 0 | 0 | 0 | 0 | 2.24 |
| 5 | 4 ರಿಂದ 5 ವರ್ಷದೊಳಗೆ | 0 | 1.71 | 0 | 0 | 0 | 0 | 0 | 0 | 1.71 |
| 6 | 5 ರಿಂದ 6 ವರ್ಷದೊಳಗೆ | 24.11 | 0 | 0 | 0 | 0 | 140 .00 | 0 | 0 | 164.11 |
| 7 | 6 ವರ್ಷ ಮೇಲ್ಪಟ್ಟು | 566.90 | 19.44 | 1.45 | 0 | 0 | 0 | 0 | 0 | 587.79 |
| | **ಒಟ್ಟು** | **629.68** | **34.00** | **1.45** | **0** | **0.54** | **236.06** | **0.31** | **0.19** | **902.23** |

| | | |
|---|---|---|
| 4 | ಸುಸ್ತಿಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ | ದಾವಾ ಪ್ರಕರಣಗಳ ಸಂಖ್ಯೆ : 19<br>ದಾವಾ ಮೊತ್ತ : ರೂ.529.96 ಲಕ್ಷಗಳು |

| ಕ್ರ.ಸಂ | ದಾವಾ ಹಾಗೂ ಡಿಕ್ರಿ | ಪ್ರಕರಣಗಳು | ಮೊಬಲಗು ರೂ. ಲಕ್ಷಗಳಲ್ಲಿ |
|---|---|---|---|
| 1 | ಅಂತಿಮ ತಿಳುವಳಿಕೆ ಪತ್ರಗಳ ರವಾನೆ | 40 | 50.52 |
| 2 | ದಾವಾ ಪ್ರಕರಣಗಳು | 19 | 529.96 |
| 3 | ಅಮಲ್ದಾರಿ ಪ್ರಕರಣಗಳು | 88 | 565.89 |
| 4 | SARFAESI ACT ಪ್ರಕಾರ ಕ್ರಮಕೈಗೊಂಡಿರುವುದು | 13 | 1025.08 |
| | ಒಟ್ಟು | 160 | 2171.45 |

| | | |
|---|---|---|
| 5 | ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಲಾಖಾ ಮೇಲಾಧಿ ಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಲಾಗಿದೆಯೇ? | ಆಡಳಿತ ಮಂಡಳಿ ಸದಸ್ಯರು ಯಾವುದೇ ಸಾಲ ಪಡೆದಿರುವುದಿಲ್ಲ. |

| | | | |
|---|---|---|---|
| | 6 | ಅಮಲ್ದಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು | ವರದಿ ಸಾಲಿನಲ್ಲಿ ಅಮಲ್ದಾರಿಯಲ್ಲಿ ಯಾವುದೇ ಆಸ್ತಿಗಳನ್ನು ಖರೀದಿಸಿರುವುದಿಲ್ಲ. |
| | 7(1) | ಎನ್.ಪಿ.ಎ ಬಗ್ಗೆ ವಿಮರ್ಶೆ [ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತಃಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು) | ಸಾಲದ ಖಾತೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯಂತೆ ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಗುರುತಿಸಲಾಗಿದೆ. ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು ಬ್ಯಾಂಕಿನ ಘೋಷಿತ ಅನುತ್ಪಾದಕ ಆಸ್ತಿಗಳು ರೂ,1700.20 ಲಕ್ಷಗಳಾಗಿದ್ದು ಇದು ಒಟ್ಟು ಸಾಲದ ಮೊತ್ತ ರೂ.18430.72 ಲಕ್ಷಗಳಿಗೆ ಶೇ.9.22 ಮತ್ತು ನಿವ್ವಳ ಎನ್.ಪಿ.ಎ ಶೇ.1.04 ಆಗಿರುತ್ತದೆ. ಆರ್.ಬಿ.ಐ/ ಶಾಸನಬದ್ಧ ಲೆಕ್ಕಪರಿಶೋಧಕರು ಗಮನಿಸಿರುವ ಎನ್.ಪಿ.ಎ ಖಾತೆಗಳನ್ನು ಗಣಕಯಂತ್ರದಲ್ಲಿ ಸರಿಪಡಿಸಿಕೊಂಡಿರುವುದಿಲ್ಲ.<br>**ಅನುವರ್ತನೆ : ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.** |
| | (2) | ದಿನಾಂಕ 31.03.2026ಕ್ಕೆ ಇರುವ ಎಲ್ಲ ಸಾಲಗಳ ರಿಸರ್ವ್ ಬ್ಯಾಂಕಿನ (IRAC) ಸುತ್ತೋಲೆಯಂತೆ ವರ್ಗೀಕರಿಸಲಾಗಿದೆಯೇ? | ಬ್ಯಾಂಕಿನ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲು ಗಣಕಯಂತ್ರದ ತಂತ್ರಾಂಶವನ್ನು ಬಳಸಿಕೊಳ್ಳಲಾಗುತ್ತಿದೆ. ವರ್ಷಾಂತ್ಯಕ್ಕೆ ಸಾಲದ ಖಾತೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಗುರುತಿಸಲಾಗಿದೆ. ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು ಆ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ. ಆರ್.ಬಿ.ಐ / ಶಾಸನಬದ್ಧ ಲೆಕ್ಕಪರಿಶೋಧಕರು ಗಮನಿಸಿರುವ ಎನ್.ಪಿ.ಎ ಖಾತೆಗಳನ್ನು ಗಣಕಯಂತ್ರದಲ್ಲಿ ಸರಿಪಡಿಸಿಕೊಂಡಿರುವುದಿಲ್ಲ.<br>**ಅನುವರ್ತನೆ : ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.** |

| | | | |
|---|---|---|---|
| | (3) | ಈ ಮೇಲಿನಂತೆ ವರ್ಗೀಕರಿಸಲಾಗಿರುವ ಅನುತ್ಪಾದಕ ಆಸ್ತಿಗಳಿಗೆ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶವನ್ನು ಪ್ರತಿಶತರಷ್ಟು ಕಲ್ಪಿಸಲಾಗಿದೆಯೇ? | ಅವಶ್ಯವಿರುವ ಅವಕಾಶವನ್ನು ಕಲ್ಪಿಸಲಾಗಿದೆ. |
| | (4) | ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶವನ್ನು ಕಲ್ಪಿಸುವಲ್ಲಿ ಏನಾದರೂ ಕೊರತೆ ಇದೆಯೇ? ಇದ್ದಲ್ಲಿ ರಕ್ಕಮುಗಳನ್ನು ಕಡ್ಡಾಯವಾಗಿ ನಮೂದಿಸುವುದು | ವರ್ಷಾಂತ್ಯಕ್ಕೆ ಅವಕಾಶಗಳಲ್ಲಿ ಯಾವುದೇ ಕೊರತೆ ಇರುವುದಿಲ್ಲ. |
| | (5) | ಕೊರತೆ ಇರುವ ರಕ್ಕಮಿನ ಅವಕಾಶ ಕಲ್ಪಿಸಲು ಬ್ಯಾಂಕಿನ ಆಡಳಿತ ಮಂಡಳಿಯವರು ನಿರಾಕರಿಸಿದಲ್ಲಿ ಈ ಕುರಿತು ವರದಿ ಪುಟ (4)ರಲ್ಲಿ ಸೂಚಿಸಿದಂತೆ ಅರ್ಹತಾತ್ಮಕ ಅಭಿಪ್ರಾಯ ನೀಡಲಾಗಿದೆಯೇ? | ಅನ್ವಯಿಸುವುದಿಲ್ಲ |
| | (6) | ಕಡಿಮೆ ಅವಕಾಶ ಕಲ್ಪಿಸಿರುವುದರಿಂದ ಬ್ಯಾಂಕಿನ ಪ್ರಸಕ್ತ ಸಾಲಿನ ನಿವ್ವಳ ಲಾಭದ ಮೇಲೆ ಬೀರುವ ಪರಿಣಾಮ ಹಾಗೂ ಸದರಿ ನಿವ್ವಳ ಲಾಭ ಕ.ಸ.ಸಂಘಗಳ ನಿಯಮ (22) ರ ವ್ಯತಿರಿಕ್ತವಾಗಿದ್ದರಿಂದ ಪ್ರಮಾಣೀಕರಿಸದೇ ಈ ಕುರಿತು ವಿವರವಾಗಿ ವಿಮರ್ಷಿಸುವುದು. | ಅನ್ವಯಿಸುವುದಿಲ್ಲ |
| | (7) | ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು. | ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲವೆಂದು ಕಾರ್ಯದರ್ಶಿಯವರು ಭಾರತೀಯ ರಿಸರ್ವ್ ಬ್ಯಾಂಕಿಗೆ ನಿಗದಿತ ನಮೂನೆಯಲ್ಲಿ ಸಲ್ಲಿಸಿರುತ್ತಾರೆ |

| ಕ್ರ.ಸಂ | ನಿರ್ದೇಶಕರ ಹೆಸರು | ಬಾಕಿ ಸಾಲದ ಮೊತ್ತ (ಅಸಲು) | ಸುಸ್ತಿ ಸಾಲದ ಬಗ್ಗೆ | | ಯಾವ ದಿನಾಂಕದಿಂದ ಸುಸ್ತಿಯಾಗಿದೆ | ಷರಾ |
|---|---|---|---|---|---|---|
| | | | ಅಸಲು | ಬಡ್ಡಿ | | |
| | | | | | | |
| ಅನ್ವಯಿಸುವುದಿಲ್ಲ | | | | | | |

| | | |
|---|---|---|
| 8 | ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ | ಆದ್ಯತಾ ವಲಯದ ಬಾಕಿ ಸಾಲದ ಮೊತ್ತ ರೂ.1694.65 ಲಕ್ಷಗಳಿದ್ದು, ಐ.ಡಿ.ಬಿ.ಐ ಬ್ಯಾಂಕಿನಿಂದ ರೂ.17000 ಲಕ್ಷಗಳ PSL Certificate ಖರೀದಿಸಿದ್ದು, ಒಟ್ಟು ಆದ್ಯತಾ ವಲಯದ ಮೊತ್ತ ರೂ.18694.65 ಲಕ್ಷಗಳಾಗಿರುತ್ತದೆ. ಕಳೆದ ವರ್ಷದ ಸಾಲದ ಬಾಕಿ ಮತ್ತು PSL Certificate ಸೇರಿ ರೂ.40788.03 ಲಕ್ಷಗಳಾಗಿರುತ್ತದೆ. ಇದು ಪ್ರಸಕ್ತ ಸಾಲಿನಲ್ಲಿ ಆದ್ಯತಾ ವಲಯದ ಸರಾಸರಿ ಶೇ.64.20 ರಷ್ಟಿರುತ್ತದೆ. |
| 9 | ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ. | ವರ್ಷಾಂತ್ಯಕ್ಕೆ ದುರ್ಬಲ ವರ್ಗದವರಿಗೆ ನೀಡಿರುವ ಬಾಕಿ ಸಾಲದ ಮೊತ್ತ ರೂ.246.97 ಲಕ್ಷಗಳಾಗಿರುತ್ತದೆ. |
| 10 | ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ | ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳು ಶೇ.1.34 ರಷ್ಟಿರುತ್ತದೆ. |

**ಸಾಲಗಳಲ್ಲಿ ಗಮನಿಸಲಾದ ನ್ಯೂನ್ಯತೆಗಳು:**

[ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನ್ಯತೆ ಉಪನಿಯಮಕ್ಕೆ ವಿರುದ್ದವಾಗಿ ನೀಡಲಾಗಿರುವ ಸಾಲ ಜೋಡಣೆ ಷೇರು ಪಡೆಯದೇ ಇರುವ ಬಗ್ಗೆ ಆಕರಣೆ ಸರಿ ಇಲ್ಲದ ಬಗ್ಗೆ ಪೂರ್ಣ ವಿಮರ್ಶೆ ನೀಡುವುದು.]

1) ಸಾಲಗಾರರು ತಮ್ಮ ಮರುಪಾವತಿ ಸಾಮರ್ಥ್ಯವನ್ನು ದೃಡೀಕರಿಸಲು ಆದಾಯ ತೆರಿಗೆ ರಿಟರ್ನ್ಸ್ ಪ್ರತಿಯೊಂದಿಗೆ ಸ್ವಘೋಷಿತ ಆದಾಯ ಪತ್ರವನ್ನು ಸಹ ಕೊಟ್ಟಿರುತ್ತಾರೆ. ಆ ಸ್ವಘೋಷಿತ ಆದಾಯ ಪತ್ರದಲ್ಲಿ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ಘೋಷಿಸದ ಬಾಡಿಗೆ ಆದಾಯ ಮುಂದೆ ಬರಬಹುದಾದ ಬಾಡಿಗೆ ಆದಾಯ ಇತ್ಯಾದಿಗಳನ್ನು ತೋರಿಸಿರುತ್ತಾರೆ. ಬ್ಯಾಂಕು ಸಾಲ ಮಂಜೂರು ಮಾಡುವಾಗ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವ ಆದಾಯವನ್ನು ಗಣನೆಗೆ ತೆಗೆದುಕೊಳ್ಳದೇ ಸ್ವಘೋಷಿತ ಆದಾಯ ಪತ್ರದ ಆದಾಯವನ್ನು ಗಣನೆಗೆ ತೆಗೆದುಕೊಂಡಿರುತ್ತಾರೆ.

| 26) ಸಂಘದ ಸ್ಥಿರಾಸ್ತಿ, ಚರಾಸ್ತಿಗಳ ಪರಿಶೀಲನೆ: | | | | | |
|---|---|---|---|---|---|
| ಎ | | ಸ್ಥಿರಾಸ್ತಿ | ವಿವರಗಳು | ವಿಸ್ತೀರ್ಣ | ಮೊತ್ತ ರೂ |
| | 1 | ಕೇಂದ್ರ ಕಛೇರಿ | # 30, 15ನೇ ಕ್ರಾಸ್, ಜಯನಗರ, 3ನೇ ಬ್ಲಾಕ್, ಬೆಂಗಳೂರು. | 5320 ಚದರ ಅಡಿಗಳು | ರೂ. 247329642 |
| | 2 | ಮತ್ತೀಕೆರೆ ಶಾಖೆ | # 1047, ತ್ರಿವೇಣಿ ರಸ್ತೆ, ಮತ್ತೀಕೆರೆ, ಬೆಂಗಳೂರು. | 2750 ಚದರ ಅಡಿಗಳು | ರೂ. 36359490 |
| | 3 | ಯಲಹಂಕ ಶಾಖೆ | # 981, ಸೆಕ್ಟರ್ ಎ, 12ನೇ ಎ ಕ್ರಾಸ್, 3ನೇ ಹಂತ, ಯಲಹಂಕ ನ್ಯೂ ಟೌನ್ ಯಲಹಂಕ ಬೆಂಗಳೂರು. | 1307.55 ಚದರ ಅಡಿಗಳು | ರೂ. 22850639 |

| | | | |
|---|---|---|---|
| | 1 | ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ದಾಖಲಾತಿಗಳು ಹಾಗೂ 'ಕ''ಡ' ಉತಾರೆ ಪರಿಶೀಲಿಸಿದ ಬಗ್ಗೆ ವಿಮರ್ಶೆ | ಈ ಮೇಲಿನ ಆಸ್ತಿಯ ದಾಖಲೆಗಳು ಕೇಂದ್ರ ಕಛೇರಿಯಲ್ಲಿ ಲಭ್ಯವಿದ್ದು, ಪರಿಶೀಲಿಸಲಾಗಿದೆ. |
| | 2 | ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಗಣಕ ಯಂತ್ರದಲ್ಲಿ ನಿರ್ವಹಿಸಲಾಗಿದೆ. |
| | 3 | ಎಲ್ಲಾ ಸ್ಥಿರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಎಲ್ಲಾ ಸ್ಥಿರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿ ನೊಂದಣಿಯಾಗಿರುತ್ತದೆ. |
| | 4 | ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ಸ್ಥಿರಾಸ್ತಿಗಳ ಮೇಲೆ ಸೂಕ್ತ ವಿಮೆ ಇರುತ್ತದೆ. |
| | 5 | ಸ್ಥಿರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ. | ಸ್ಥಿರಾಸ್ತಿಯ ಮೇಲೆ ಆದಾಯಕರ ಕಾಯ್ದೆಯಂತೆ ಶೇ.10 ರಷ್ಟು ಸವಕಳಿ ತೆಗೆಯಲಾಗಿದೆ. |
| | 6 | ಗೋಡೌನುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ. | ಅನ್ವಯಿಸುವುದಿಲ್ಲ |
| | 7 | ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿಯಾಗುತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ? | ವರದಿ ಸಾಲಿನಲ್ಲಿ ಕಟ್ಟಡಗಳನ್ನು ಬಾಡಿಗೆಗೆ ನೀಡಿರುವುದಿಲ್ಲ. |

| | | | |
|---|---|---|---|
| | 8 | ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಅದು ನಿಯಮಾನುಸಾರ ಮಾಡಲಾಗಿದೆಯೇ? ಉಲ್ಲಂಘನೆಗಳಿದ್ದಲ್ಲಿ ವಿವರಿಸುವುದು. | ಅನ್ವಯಿಸುವುದಿಲ್ಲ |
| | 9 | ವರದಿ ಸಾಲಿನಲ್ಲಿ ವಿಲೇವಾರಿ ಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಶೆ. | ಅನ್ವಯಿಸುವುದಿಲ್ಲ |
| | 10 | ಸ್ಥಿರಾಸ್ತಿಯ ತೆರಿಗೆಯನ್ನು ತಹಲದವರೆಗೂ ಪಾವತಿಸಲಾಗಿದೆಯೇ? | ಸ್ಥಿರಾಸ್ತಿಯ ತೆರಿಗೆಯನ್ನು ತಹಲದವರೆಗೂ ಪಾವತಿಸಲಾಗಿದೆ. |
| ಬಿ | | **ಚರಾಸ್ತಿ** | |
| | 1 | ಸಂಘವು ಹೊಂದಿರುವ ಚರಾಸ್ತಿಯ ವಿವರಗಳು | ಕ್ರ ಸಂ \| ವಿವರ \| 31.03.2026ಕ್ಕೆ ಇದ್ದ ಮೊತ್ತ<br>1 \| ಸಾಫ್ಟ್‌ವೇರು \| ರೂ. 29800<br>2 \| ಪೀಠೋಪಕರಣಗಳು \| ರೂ. 3907431<br>3 \| ಕಂಪ್ಯೂಟರ್ ಪೆರಿಪಿರಲ್ಸ್ \| ರೂ. 4665<br>4 \| ಕಛೇರಿ ಉಪಕರಣಗಳು \| ರೂ. 1758663<br>5 \| ವಾಹನಗಳು \| ರೂ. 197770 |
| | 2 | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಗಣಕ ಯಂತ್ರದಲ್ಲಿ ನಿರ್ವಹಿಸಲಾಗಿದೆ. |
| | 3 | ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಎಲ್ಲಾ ಚರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿವೆ. |
| | 4 | ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆ. |
| | 5 | ಚರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ. | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಗಣಕ ಯಂತ್ರಗಳ ಮೇಲೆ ಸ್ಟ್ರೇಟ್‌ಲೈನ್ ಮೆಥೆಡ್ ಮತ್ತು ಇತರೆ ಚರಾಸ್ತಿಗಳ ಮೇಲೆ ಆದಾಯಕರ ಕಾಯ್ದೆಯಂತೆ ಸವಕಳಿಯನ್ನು ತೆಗೆಯಲಾಗಿರುತ್ತದೆ. |
| | | ವರದಿ ಸಾಲಿನಲ್ಲಿ ವಿಲೇವಾರಿ ಮಾಡಿರುವ ಚರಾಸ್ತಿಗಳ ಕುರಿತು ವಿಮರ್ಶೆ | ವರದಿ ಸಾಲಿನಲ್ಲಿ ಬ್ಯಾಂಕು ಯಾವುದೇ ಚರಾಸ್ತಿಗಳನ್ನು ವಿಲೇವಾರಿ ಮಾಡಿರುವುದಿಲ್ಲ. |

| | | |
|---|---|---|
| | ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಕೊಂಡಿರುವ ಕ್ರಮಗಳ ಕುರಿತು ವಿಮರ್ಶೆ. | ಅನುಪಯುಕ್ತ ಚರಾಸ್ತಿಗಳು ಇರುವುದಿಲ್ಲ. |
| 6 | ಸಂಘವು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಶೆ. ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ? | ಬ್ಯಾಂಕು ದಿನಾಂಕ 31.03.2026ರ ಅಂತ್ಯಕ್ಕೆ ಈ ಕೆಳಕಂಡ ವಾಹನಗಳನ್ನು ಹೊಂದಿರುತ್ತದೆ. |

| ವಿವರ | 31.03.2026ರ ಪುಸ್ತಕದ ಬೆಲೆ (ರೂ.ಗಳಲ್ಲಿ) | ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿದ ಸರಾಸರಿ ದೂರ |
|---|---|---|
| 1. ಮಾರುತಿ ವ್ಯಾನ್ KA-05-MT-3477 | ರೂ. 56805 | 10 |
| 2. ಮಾರುತಿ ವ್ಯಾನ್ KA-05-MS-2310 | ರೂ. 55512 | 10 |
| 3. ಮಾರುತಿ ವ್ಯಾಗನಾರ್ KA-05-MS-8103 | ರೂ. 80383 | 11 |
| 4. ಹೀರೋ ಹೊಂಡ ಬೈಕ್ KA-05-HR-5575 | ರೂ. 5070 | 45 |
| ಪ್ರತಿ ವಾಹನಕ್ಕೂ ಲಾಗ್ ಪುಸ್ತಕ ಬರೆಯಲಾಗಿದೆ. | | |

| | | |
|---|---|---|
| 7 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ವಾಹನದ ಕುರಿತು ವಿಮರ್ಶೆ. | ವರದಿ ಸಾಲಿನಲ್ಲಿ ಬ್ಯಾಂಕು ಯಾವುದೇ ವಾಹನವನ್ನು ವಿಲೇವಾರಿ ಮಾಡಿರುವುದಿಲ್ಲ. |

**8 ಬ್ಯಾಂಕೇತರ ಆಸ್ತಿಗಳು: (Non Banking Asset)**

| ಜಮೀನು ಆಸ್ತಿಯ ವಿವರ | ವಿ.ಪಿ.ಸಿ/ಸಿ.ಟಿ.ಎಸ್.ನಂ | ಖರೀದಿಯ ಮೌಲ್ಯ |
|---|---|---|
| ನಂ.3, 3ನೇ ಬಿ ಕ್ರಾಸ್, ಜೆ.ಸಿ.ನಗರ, ಬೆಂಗಳೂರು–86 ಒಟ್ಟು 1200 ಚದರ ಅಡಿಗಳಲ್ಲಿ 3 ಅಂತಸ್ತಿನ ಕಟ್ಟಡವಿರುತ್ತದೆ. | PID No.13–61–3 | 1,37,90,915.00 |

ಬ್ಯಾಂಕೇತರ ಆಸ್ತಿಯನ್ನು ದಿನಾಂಕ: 18.03.2026ರಂದು ಬಹಿರಂಗ ಹರಾಜಿನ ಮೂಲಕ ರೂ.1,70,00,000/–ಗಳಿಗೆ ಮಾರಾಟ ಮಾಡಲಾಗಿದೆ. ದಿನಾಂಕ: 31.03.2026 ರಂದು ರೂ. 1,37,90,915/–ಗಳನ್ನು ಬ್ಯಾಂಕೇತರ ಆಸ್ತಿಗೆ ಜಮಾ ತೆಗೆದುಕೊಂಡು ಬಾಕಿ ಉಳಿದ ಮೊತ್ತ ರೂ.32,09,085/–ಗಳನ್ನು ಆದಾಯದ ಖಾತೆಗೆ ಜಮಾ ತೆಗೆದುಕೊಳ್ಳಲಾಗಿದೆ.

**27) ಇತರೆ ಬರತಕ್ಕವುಗಳು:**

(ಇತರೆ ಬರತಕ್ಕವುಗಳ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು.)

| ಕ್ರ ಸಂ. | ವಿವರ | ಮೊತ್ತ |
|---|---|---|
| 1 | ಶಾಖೆಗಳ ಬಾಡಿಗೆ ಮುಂಗಡ | ರೂ. 1060000.00 |
| 2 | ಲೇಖನ ಸಾಮಗ್ರಿಗಳ ದಾಸ್ತಾನು | ರೂ. 470976.00 |
| 3 | ದೂರವಾಣಿ ಠೇವಣಿ | ರೂ.19820.00 |
| 4 | ಸಾಲಗಳ ಮೇಲಿನ ಇತರೆ ವೆಚ್ಚ | ರೂ.3197657.50 |
| 5 | ಉತ್ಪಾದಕ ಆಸ್ತಿಗಳ ಮೇಲಿನ ಬಡ್ಡಿ | ರೂ.7813471.00 |
| 6 | ಪೆಟ್ರೋ ಕಾರ್ಡ್‌ಗಳು | ರೂ.8383.51 |
| 7 | ಹೂಡಿಕೆಗಳ ಮೇಲಿನ ಬಡ್ಡಿ | ರೂ.11646388.00 |
| 8 | ಸಂಡ್ರಿ ಪರ್ಸನ್ಸ್ ಪೇಮೆಂಟ್ | ರೂ.739000.00 |
| 9 | DEAF ಖಾತೆಯಿಂದ ಬರಬೇಕಾದ ಮೊತ್ತ | ರೂ.52502.85 |
| 10 | ಕೋರ್ಟಿಗೆ ಪಾವತಿಸಿರುವ ಠೇವಣಿ ಮೊತ್ತ ( ಕಾರ್ವಿ) | ರೂ.4030426.00 |
| 11 | GST INPUT TAX | ರೂ.206979.00 |
| 12 | ಚುನಾವಣಾ ಮೊತ್ತ ಅಮಾರ್ಟೈಸೇಷನ್ | ರೂ.988338.00 |
| 13 | ಆದಾಯ ತೆರಿಗೆ ಇಲಾಖೆಯಿಂದ ಬರಬೇಕಾದ ಮೊತ್ತ 2025–26 | ರೂ.2334260.00 |
| | ಒಟ್ಟು | **ರೂ.32568201.86** |

3 ವರ್ಷಕ್ಕೂ ಮೇಲ್ಪಟ್ಟ ಸಾಲಗಳ ಮೇಲಿನ ಇತರೆ ವೆಚ್ಚದ ಮೊತ್ತವನ್ನು ಗುರುತಿಸಿ ಆ ಮೊತ್ತಕ್ಕೆ ಅವಕಾಶ ಕಲ್ಪಿಸಲು ಕ್ರಮಕೈಗೊಳ್ಳಬೇಕು.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

| | |
|---|---|
| ಚೆಕ್ಕು, ಬಿಲ್ಲು, ಡಿಸ್ಕೌಂಟ್ ವ್ಯವಹಾರ ಕೈಗೊಂಡಿರುವರೋ ವಿವರಿಸಿ. | ಬ್ಯಾಂಕಿನಲ್ಲಿ ಚೆಕ್ ಅಥವಾ ಬಿಲ್ ಡಸ್ಕೌಂಟ್ ವ್ಯವಹಾರ ಮಾಡುತ್ತಿಲ್ಲ. |
| ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು | 2025–26ನೇ ಸಾಲಿನಲ್ಲಿ ಸಾಲಗಳ ಮೇಲೆ ವಸೂಲಾಗಿರುವ ಮತ್ತು ಠೇವಣಿಗಳ ಮೇಲೆ ಪಾವತಿಸಿರುವ ಬಡ್ಡಿ ಸಮಂಜಸವಾಗಿರುತ್ತದೆ. |
| ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತಿವೆಯೇ? | ಶಾಖೆಗಳ ಲೆಕ್ಕಗಳನ್ನು ಸಮನ್ವಯ ಮಾಡಿರುತ್ತಾರೆ. ಯಾವ ಹಳೆಯ ಲೆಕ್ಕಗಳು ಮುಂದುವರೆದಿರುವುದಿಲ್ಲ. |
| **28) ಮೋಸ, ವಂಚನೆ, ಹಣ ದುರುಪಯೋಗದ ವರದಿ:** | |
| ಹಣ ದುರುಪಯೋಗ ಪತ್ತೆ ಆದ ಕೂಡಲೇ ಸಹಕಾರ ಹಾಗೂ ಲೆಕ್ಕ ಪರಿಶೋಧನಾ ಇಲಾಖಾ ಮೇಲಧಿಕಾರಿಗಳಿಗೆ ಅಂತಿಮ ವರದಿ ಸಲ್ಲಿಸ ಲಾಗಿದೆಯೇ? | ನಮಗೆ ತಿಳಿಸಿದ ಮಾಹಿತಿ ಮತ್ತು ನಾವು ಪರಿಶೀಲಿಸಿದ ಪ್ರಕಾರ ವರದಿ ಸಾಲಿನಲ್ಲಿ ಹಣ ದುರುಪಯೋಗದ ಪ್ರಕರಣಗಳು ಕಂಡು ಬಂದಿರುವುದಿಲ್ಲ. ಆದುದರಿಂದ ಅನ್ವಯ ವಾಗುವುದಿಲ್ಲ. |
| ಪ್ರತಿಯೊಂದು ಹಣ ದುರುಪಯೋಗದ ಅಂಶದ ಸ್ವರೂಪದ ಬಗ್ಗೆ ದಿನಾಂಕವಾರು ಹಣ ದುರುಪಯೋಗ ಮಾಡಿದ ರೀತಿ ಉದ್ದೇಶ ಅದರಿಂದ ಸಂಘದ ಆ ದಿನದ ನಗದು ಶಿಲ್ಕುಗಳ ಮೇಲೆ ಅಥವಾ ಆಸ್ತಿಗಳಲ್ಲಿ ಆಗಿರುವ ಕೊರತೆಯ ಬಗ್ಗೆ ವಿವರವಾಗಿ ವಿಮರ್ಷಿಸಿ ಆಪಾದಿತರಿಗೆ ವಿವರಣೆ ನೀಡಲು ನೊಂದಾಯಿತ ಅಂಚೆಯ ಮೂಲಕ ಜ್ಞಾಪನಾ ಪತ್ರ ನೀಡಲಾಗಿದೆಯೇ? | ಅನ್ವಯಿಸುವುದಿಲ್ಲ |
| ಹಣ ದುರುಪಯೋಗ ಸಾಬೀತಾದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿಯನ್ನು ನಿಗದಿ ಪಡಿಸಿ ಫೌಜದಾರಿ ಮತ್ತು ದಿವಾಣಿ ಕ್ರಮಕ್ಕೆ ಏಕೆ ಕ್ರಮ ಕೈಗೊಳ್ಳಬಾರದೆಂಬ ಬಗ್ಗೆ ಸಂಬಂಧಪಟ್ಟವರಿಗೆ ಜಾರಿ ಮಾಡಿರುವ ನೋಟೀಸು ಹಾಗೂ ಸಮನ್ಸ್‌ಗಳ ಕುರಿತು ಹಾಗೂ ಅದಕ್ಕೆ ಅವರು ನೀಡಿರುವ ವಿವರಣೆಯನ್ನು ಪರಿಗಣಿಸಿದ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಅನ್ವಯಿಸುವುದಿಲ್ಲ |

| | |
|---|---|
| ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಪೂರಕ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ವರದಿಗೆ ಲಗತ್ತಿಸಿರುವ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಅನ್ವಯಿಸುವುದಿಲ್ಲ |
| ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಸಂಘದ ಆರ್ಥಿಕ ತಃಖ್ತೆಗಳಲ್ಲಿ ಜವಾಬ್ದಾರಿ ಗೊತ್ತುಪಡಿಸಿ, ಸದರಿ ರಕ್ಕಮ್ಮುಗಳಿಗೆ ಸೂಕ್ತ ಅವಕಾಶ ಕಲ್ಪಿಸಿರುವುದರ ಬಗ್ಗೆ ಹಾಗೂ ಹಣದುರುಪಯೋಗದ ರಕ್ಕಮ್ಮನ್ನು ವಸೂಲಿಸುವ ಕುರಿತು ಕೈಗೊಳ್ಳಬಹುದಾದ ಕ್ರಮಗಳ ಕುರಿತು ವಿವರವಾಗಿ ವಿಮರ್ಷಿಸುವುದು. | ಅನ್ವಯಿಸುವುದಿಲ್ಲ |
| ಹಣದುರುಪಯೋಗದ ರಕ್ಕಮ್ಮನ್ನು ವಸೂಲಿಸಲು ಸಂಘವು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಮರ್ಷಿಸುವುದು. | ಅನ್ವಯಿಸುವುದಿಲ್ಲ |
| ಕೇಂದ್ರ ಕಛೇರಿ ಸುತ್ತೋಲೆ ಸಂಖ್ಯೆ ಲೆಪಶಾ-1/ಇತರೆ/ಲೆಪನೆ/16/2016-17 ದಿನಾಂಕ 23.02.2017ರ ಹಾಗೂ ನಿರ್ದೇಶನಗಳಂತೆ ಹಣದುರುಪಯೋಗವುಳ್ಳ ವರದಿಗಳನ್ನು ಲೆಕ್ಕ ಪರಿಶೋಧನಾ ಇಲಾಖೆಯ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಕೈಗೊಂಡು ಅವರು ಸೂಚಿಸಿರುವ ಎಲ್ಲಾ ಅಂಶಗಳನ್ನು ಹಾಗೂ ಸೂಚನೆಗಳನ್ನು ವರದಿಯಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಅಂತಹ ವಿಚಾರಣೆ ಇರುವುದಿಲ್ಲ ಎಂದು ಬ್ಯಾಂಕಿನವರು ತಿಳಿಸಿರುತ್ತಾರೆ, ಆದುದರಿಂದ ಅನ್ವಯವಾಗುವುದಿಲ್ಲ |

| **29) ನಿಬಂಧಕರ ಆದೇಶಗಳ ಅನುಪಾಲನೆ:** | |
|---|---|
| ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 64ರ ಅನ್ವಯ ಯಾವುದಾದರೂ ವಿಚಾರಣೆ ನಡೆದಿದೆಯೇ? | ಇಲ್ಲ |
| ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 65ರ ಅನ್ವಯ ಯಾವುದಾದರೂ ಪರಿವೀಕ್ಷಣೆ ನಡೆದಿದೆಯೇ? | ಇಲ್ಲ |
| ಮೇಲ್ಕಂಡ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ನಿವಾರಿಸಲು ನಿಬಂದಕರಿಂದ ಕಲಂ 68ರ ಅಡಿ ಆದೇಶ ಜಾರಿಯಾಗಿದೆಯೇ? | ಅನ್ವಯಿಸುವುದಿಲ್ಲ |
| ಲೆಕ್ಕ ಪರಿಶೋಧಕರು ತಮ್ಮ ವರದಿಯಲ್ಲಿ ಮತ್ತು ಆರ್ಥಿಕ ತಃಖ್ತೆಗಳಲ್ಲಿ ನಿಬಂದಕರ ಕಲಂ 68ರ ಅಡಿ ಆಗಿರುವ ಆದೇಶವನ್ನು ಪರಿಗಣಿಸಿ ಸೂಕ್ತವಾಗಿ ಅಳವಡಿಕೆ ಮಾಡಿಕೊಂಡಿದ್ದಾರೆಯೇ? | ಅನ್ವಯಿಸುವುದಿಲ್ಲ |

| ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು<br>(ಷೆಡ್ಯೂಲ್ ಇ ನಲ್ಲಿರುವ ವಿವರಗಳ ಬಗ್ಗೆ ಟಿಪ್ಪಣಿ) | |
|---|---|
| ಬ್ಯಾಂಕಿನ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ | ಬ್ಯಾಂಕಿನ ಉಪನಿಯುಮದ ಪ್ರಕಾರ ನಿರ್ದೇಶಕರ ಸಂಖ್ಯೆ 18 ಆಗಿರುತ್ತದೆ. |
| ಮೀಸಲಾತಿ ಮತ್ತು ಅವುಗಳ ಭರ್ತಿ ಬಗ್ಗೆ ವಿವರ. | ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ, ಒಂದು ಸ್ಥಾನವನ್ನು ಪರಿಶಿಷ್ಟ ಪಂಗಡ, ಎರಡು ಸ್ಥಾನಗಳನ್ನು ಮಹಿಳಾ ವರ್ಗ, ಒಂದು ಸ್ಥಾನವನ್ನು ಹಿಂದುಳಿದ ವರ್ಗ ಪ್ರವರ್ಗ "ಎ", ಒಂದು ಸ್ಥಾನವನ್ನು ಹಿಂದುಳಿದ ವರ್ಗ ಪ್ರವರ್ಗ "ಬಿ". ಈ ರೀತಿಯಾಗಿ ವಿವಿಧ ವರ್ಗಗಳಿಗೆ ಸೇರಿದ ಸದಸ್ಯರಿಗೆ ಮೀಸಲಿರಿಸ ಬೇಕಾಗಿದ್ದು ಸರಿಯಾದ ಮೀಸಲಾತಿ ಸ್ಥಾನಗಳನ್ನೊಳಗೊಂಡಂತೆ ವರದಿ ಸಾಲಿನಲ್ಲಿ ಒಟ್ಟು 18 ಸದಸ್ಯರು ಮತ್ತು ಇಬ್ಬರು ವೃತ್ತಿಪರ ನಾಮ ನಿರ್ದೇಶಕರು ಆಡಳಿತ ಮಂಡಳಿಯಲ್ಲಿ ಇರುತ್ತಾರೆ. |
| ಪ್ರಸಕ್ತ ಮಂಡಳಿಯು ಅಧಿಕಾರ ವಹಿಸಿಕೊಂಡ ದಿನಾಂಕ | ದಿನಾಂಕ :31.01.2025 |
| ಮಂಡಳಿಯ ಅವಧಿ | ಮಂಡಳಿಯ ಅವಧಿಯು 5 ವರ್ಷ ಗಳಾಗಿರುವತ್ತದೆ. |
| ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಅವಧಿ | 1 ಹುದ್ದೆ 3 1/2 ವರ್ಷ |
| ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಳಿಯ ಸಭೆಗಳ ಸಂಖ್ಯೆ | ಪ್ರಸಕ್ತ ಸಾಲಿನಲ್ಲಿ ಒಟ್ಟು 18 ಆಡಳಿತ ಮಂಡಳಿ ಸಭೆಗಳು ನಡೆದಿರುತ್ತವೆ. |
| ಮಂಡಳಿಯ ಸಭೆಗಳಿಗಾಗಿ ಆದ ವೆಚ್ಚ | ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಿಗಾಗಿ ರೂ. 402000/–ಗಳು ವೆಚ್ಚ ವಾಗಿರುತ್ತದೆ. |
| ನಿರ್ದೇಶಕರ ತರಭೇತಿ ಕಾರ್ಯಕ್ರಮಗಳ ವಿವರ | ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ಮಹಾಮಂಡಳ ಮತ್ತು ಪಟ್ಟಣ ಬ್ಯಾಂಕುಗಳ ಮಹಾಮಂಡಳ ಏರ್ಪಡಿಸುವ ತರಭೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತಾರೆ. |

| | |
|---|---|
| ನಿರ್ದೇಶಕರ ತರಭೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ತರಭೇತಿ ಕಾರ್ಯಕ್ರಮಗಳಿಗೆ ಯಾವುದೆ ವೆಚ್ಚ ಆಗಿರುವುದಿಲ್ಲ. |
| ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರ | ನಡಾವಳಿ ಪುಸ್ತಕಗಳನ್ನು ಪರಿಶೀಲಿಸಲಾಗಿದೆ.<br>1. ಬ್ಯಾಂಕಿನ ಜಮಾ ಮತ್ತು ಖರ್ಚಿನ ವಿಷಯಗಳು.<br>2. ಹಿಂದಿನ ಸಭೆಯ ನಡಾವಳಿಕೆಗಳು ಜಾರಿಯಾಗಿರುವ ಬಗ್ಗೆ<br>3. ಸಿ ಆರ್ ಆರ್ ಮತ್ತು ಎಸ್ ಎಲ್ ಆರ್ ಗಳ ಬಗ್ಗೆ ಪರಿಶೀಲನೆ.<br>4. ಬ್ಯಾಂಕಿನ ಸದಸ್ಯತ್ವಕ್ಕಾಗಿ ಸಲ್ಲಿಸಿರುವ ಅರ್ಜಿಗಳ ಪರಿಶೀಲನೆ ಮತ್ತು ಅನುಮೋದನೆಗಳ ಬಗ್ಗೆ.<br>5. ಸುಸ್ತಿಯಾದ ಸಾಲಗಳ ಮರುಪಾವತಿಯ ಪರಿಶೀಲನೆ.<br>6. ಬ್ಯಾಂಕಿನ ವ್ಯವಸ್ಥಾಪಕರು ಮಂಜೂರು ಮಾಡಿರುವ ಸಾಲಗಳ ಅನುಮೋದನೆ<br>7. ಸಾಲದ ಉಪಸಮಿತಿ ಮತ್ತು ಆಡಿಟ್ ಉಪಸಮಿತಿಯ ಸಭೆಯ ನಡಾವಳಿಕೆ ಗಳನ್ನು ಪರಿಶೀಲಿಸಿ ಅನುಮೋದನೆ<br>8. ವಂಚನೆ ಪ್ರಕರಣಗಳು ಮತ್ತು ಕ್ಲಿಷ್ಟಕರ ಸಾಲಗಳ ವಸೂಲಾತಿ ಪರಿಶೀಲನೆ.<br>9. ಬ್ಯಾಂಕಿಗೆ ಸಂಬಂದಿಸಿದ ಇತರೆ ವಿಷಯಗಳು. |

**30) ಸಂಘದ ಆಡಳಿತ : ನಿರ್ದೇಶಕರ ಸಭಾ ಹಾಜರಾತಿ**
**(ದಿನಾಂಕ 1-4-2025 ರಿಂದ 31-03-2026)**

| ಕ್ರ ಸಂ | ನಿರ್ದೇಶಕರ ಹೆಸರು | ಹುದ್ದೆ | ಹಾಜರಾದ ಸಭೆಗಳ ಸಂಖ್ಯೆ | ಸಂಭಾವನೆ |
|---|---|---|---|---|
| 1 | ಶ್ರೀ ಸುಧಾಕರ್ ಕೆ.ಎಸ್. | ಅಧ್ಯಕ್ಷರು | 13 | 19500 |
| 2 | ಶ್ರೀ ಜಯಪ್ರಕಾಶ್ ಜೆ.ಎಂ. | ಉಪಾಧ್ಯಕ್ಷರು | 18 | 27000 |
| 3 | ಶ್ರೀ ಜಿ.ಎನ್.ಆರ್.ಮೋಹನ | ನಿರ್ದೇಶಕರು | 7 | 10500 |
| 4 | ಶ್ರೀ ಪಿಳ್ಳಾಂಜನಪ್ಪ. ಹೆಚ್ | ನಿರ್ದೇಶಕರು | 14 | 21000 |
| 5 | ಶ್ರೀ ಸತೀಶ್ ಆರ್. | ನಿರ್ದೇಶಕರು | 17 | 25500 |
| 6 | ಶ್ರೀ ರವಿಶಂಕರ್ ಟಿ. | ನಿರ್ದೇಶಕರು | 10 | 15000 |
| 7 | ಶ್ರೀ ಲಕ್ಷ್ಮಣ್ | ನಿರ್ದೇಶಕರು | 13 | 19500 |
| 8 | ಶ್ರೀ ಜಯದೇವ ಹೆಚ್. | ನಿರ್ದೇಶಕರು | 18 | 27000 |
| 9 | ಡಾ: ವೀರಪ್ಪ ಎಂ. | ನಿರ್ದೇಶಕರು | 17 | 25500 |
| 10 | ಶ್ರೀ ಲೋಕೇಶ್ ಬಿ.ಎನ್. | ನಿರ್ದೇಶಕರು | 14 | 21000 |
| 11 | ಶ್ರೀ ಆದಿಶೇಷನ್ ಗೌಡ ಟಿ.ಜಿ. | ನಿರ್ದೇಶಕರು | 10 | 15000 |
| 12 | ಶ್ರೀ ಸಂಜೀವ್ ಬಿ.ಎಲ್. | ನಿರ್ದೇಶಕರು | 13 | 19500 |
| 13 | ಶ್ರೀ ಬಸವರಾಜಪ್ಪ ಎಸ್. | ನಿರ್ದೇಶಕರು | 17 | 25500 |
| 14 | ಶ್ರೀ ಶಾಂತರಾಜೇಗೌಡ ಕೆ.ಸಿ. | ನಿರ್ದೇಶಕರು | 15 | 22500 |
| 15 | ಶ್ರೀ ಶ್ರೀನಿವಾಸಯ್ಯ ವಿ. | ನಿರ್ದೇಶಕರು | 15 | 22500 |
| 16 | ಶ್ರೀಮತಿ ನಂದಿನಿ ಬಿ.ಎಲ್. | ನಿರ್ದೇಶಕರು | 17 | 25500 |
| 17 | ಶ್ರೀಮತಿ ಅನಿತ ಎಂ.ಹೆಚ್. | ನಿರ್ದೇಶಕರು | 12 | 18000 |
| 18 | ಶ್ರೀ ಬಾಹುಬಲಿ ಸಿ. | ವೃತ್ತಿಪರ ನಿರ್ದೇಶಕರು | 14 | 21000 |
| 19 | ಡಾ: ಕೃಷ್ಣಪ್ಪ ಎನ್-ಕೋಡಿಪಾಳ್ಯ | ವೃತ್ತಿಪರ ನಿರ್ದೇಶಕರು | 14 | 21000 |
| | **ಒಟ್ಟು** | | **268** | **402000** |

| ಮಂಡಳಿ, ಸಮಿತಿಗಳು, ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ | |
|---|---|
| ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತ ವಾಗಿ ನಡೆಸುತ್ತಿದ್ದಾರೆಯೇ? | ಆಡಳಿತ ಮಂಡಳಿಯ ಮತ್ತು ಉಪ ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸಲಾಗುತ್ತಿದೆ. |
| ಬ್ಯಾಂಕಿನ ಬೈಲಾ ಮತ್ತು ಕಾಯ್ದೆಗೆ ಅನು ಗುಣವಾಗಿದೆಯೇ? | ಬ್ಯಾಂಕಿನ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆ. |
| ಮಂಡಳಿಯ/ಸಮಿತಿಗಳ ಸಭೆಗಳ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ. | ಆಡಳಿತ ಮಂಡಳಿಯ ಮತ್ತು ಉಪ ಸಮಿತಿಗಳ ಸಭೆಗಳ ನಡಾವಳಿಗಳನ್ನು ಪ್ರತ್ಯೇಕವಾದ ರಿಜಿಸ್ಟರಿನಲ್ಲಿ ದಾಖಲಿಸಲಾಗಿರು ತ್ತದೆ. |
| ನಿರ್ದೇಶಕರ, ಅವರ ಕುಟುಂಬ ವರ್ಗದವರ ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ | |
| ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನ್ವಯವಾಗಿದೆಯೇ? | ನಿರ್ದೇಶಕರು ಅಥವಾ ಅವರ ಕುಟುಂಬ ವರ್ಗದವರಿಗೆ ಯಾವುದೇ ಸಾಲ ನೀಡಿ ರುವುದಿಲ್ಲ. |
| ಎಲ್ಲಾ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆಯೇ? | ಎಲ್ಲಾ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆ. |
| ನಿರ್ದೇಶಕರು ಅಥವಾ ಅವರ ಕುಟುಂಬ ವರ್ಗದವರು ಸಾಲ ಪಡೆದಿದ್ದರೆ ಅವುಗಳ ವಿವರ | ನಿರ್ದೇಶಕರು ಅಥವಾ ಅವರ ಕುಟುಂಬ ವರ್ಗದವರಿಗೆ ಯಾವುದೇ ಸಾಲ ನೀಡಿರುವುದಿಲ್ಲ. |
| ನಿರ್ದೇಶಕರು ಅಥವಾ ಅವರ ಕುಟುಂಬ ವರ್ಗದವರು ಜಾಮೀನು ನೀಡಿದ್ದರೆ ಅವುಗಳ ವಿವರ | ವರದಿ ಸಾಲಿನಲ್ಲಿ ನಿರ್ದೇಶಕರು ಅಥವಾ ಅವರ ಕುಟುಂಬದವರು ಯಾವುದೇ ಜಾಮೀನು ನೀಡಿರುವುದಿಲ್ಲ. |
| ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ | ಅನ್ವಯಿಸುವುದಿಲ್ಲ |

| 31) ವಾರ್ಷಿಕ ಸಾಮಾನ್ಯ ಸಭೆ: | |
|---|---|
| ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ | 14.09.2025 |
| ಬ್ಯಾಂಕಿನ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ. | ಬ್ಯಾಂಕಿನ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ ಒಟ್ಟು ಸದಸ್ಯರ ಪೈಕಿ ಶೇ.10 ರಷ್ಟು ಅಥವಾ 1000 ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರಿರತಕ್ಕದ್ದು. |
| ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ. | ಹಾಜರಾತಿ ಪುಸ್ತಕದ ಪ್ರಕಾರ ವಾರ್ಷಿಕ ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ.3536. |
| ಸಭಾ ನಡಾವಳಿಗಳ ಪರಿಶೀಲನೆ ಬಗ್ಗೆ ಟಿಪ್ಪಣಿ | ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಗಳನ್ನು ಪ್ರತ್ಯೇಕವಾದ ರಿಜಿಸ್ಟರಿನಲ್ಲಿ ದಾಖಲಿಸಲಾಗಿರುತ್ತದೆ. ಸಭಾನಡಾವಳಿಗಳನ್ನು ಪರಿಶೀಲಿಸಿರುತ್ತೇವೆ. |
| ಸದರಿ ಸಭೆಯಲ್ಲಿ ಕಳೆದ ವರ್ಷದ ಅಂದಾಜು ಆಯವ್ಯಯ ಪತ್ರದ ಮಿತಿಗಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಬಗ್ಗೆ ಅನುಮೋದನೆ ಪಡೆಯಲಾಗಿದೆಯೇ ವಿವರಿಸಿ. | ಸದರಿ ಸಭೆಯಲ್ಲಿ ಕಳೆದ ವರ್ಷದ ಅಂದಾಜು ಆಯವ್ಯಯ ಪತ್ರದ ಮಿತಿಗಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಬಗ್ಗೆ ಅನುಮೋದನೆ ಪಡೆಯಲಾಗಿದೆ. |
| ಸದರಿ ಸಭೆಯಲ್ಲಿ ಮುಂದಿನ ವರ್ಷದ ಅಂದಾಜು ಆಯವ್ಯಯ ಪತ್ರ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ? | ಸದರಿ ಸಭೆಯಲ್ಲಿ ಮುಂದಿನ ವರ್ಷದ ಅಂದಾಜು ಆಯವ್ಯಯ ಪತ್ರ ಮಂಡಿಸಿ ಅನುಮೋದನೆ ಪಡೆಯಲಾಗಿದೆ. |
| ಸದರಿ ಸಭೆಯಲ್ಲಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ? | ಸದರಿ ಸಭೆಯಲ್ಲಿ 2024–25 ನೇ ಸಾಲಿನಲ್ಲಿ ನಡೆದ ವಾರ್ಷಿಕ ಲೆಕ್ಕಪರಿಶೋಧಿತ ಪತ್ರಗಳನ್ನು ಮಂಡಿಸಿ ಅನುಮೋದನೆಯನ್ನು ಪಡೆದಿರುತ್ತಾರೆ. |
| ಸದರಿ ಸಭೆಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧನೆಯ ಕುರಿತು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲಾಗಿದೆಯೇ? ನೇಮಕ ಮಾಡಿದಲ್ಲಿ ಲೆಕ್ಕ ಪರಿಶೋಧಕರ ಹೆಸರು/ ಪದನಾಮ ಹಾಗೂ ಠರಾವಿನ ಕ್ರಮಾಂಕ ಹಾಗೂ ವಾರ್ಷಿಕ ಮಹಾಸಭೆಯ ದಿನಾಂಕ ಹಾಗೂ ಜಿಲ್ಲಾ ಉಪನಿರ್ದೇಶಕರಿಗೆ ವರದಿಸಿದ ದಿನಾಂಕ | ಭಾರತೀಯ ರಿಸರ್ವ್ ಬ್ಯಾಂಕ್ ಆದೇಶದ ಸಂಖ್ಯೆ. BRL.DOS.ARG.No.S744 /11.01.111/2025-26 ದಿನಾಂಕ : 28.08.2025 ಪ್ರಕಾರ ಮೆ. ಗಿರೀಶ ವಿಜಯ್ ಅಂಡ್ ಅಸೋಸಿಯೇಟ್ಸ್ ಶಾಸನ ಲೆಕ್ಕಪರಿಶೋಧಕರು. ಇವರನ್ನು ನೇಮಕ ಮಾಡಲಾಗಿರುತ್ತದೆ. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿಬಂಧಕರಿಗೆ ಪತ್ರ ಸಂಖ್ಯೆ.BCB/831/2025–26 ಪ್ರಕಾರ 30.10.2025ರಂದು ಮಾಹಿತಿ ಸಲ್ಲಿಸಲಾಗಿದೆ. |

| | | | |
|---|---|---|---|
| ವಾರ್ಷಿಕ ಸಭೆಯ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | | | ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯ ಸೂಚಿಯ (ಅಜೆಂಡಾ) ಪ್ರಕಾರ ಸಭೆಯನ್ನು ನಡೆಸಿರುವುದು ಕಂಡುಬಂದಿರುತ್ತದೆ. |
| **32)** | 1 | ಸಿಬ್ಬಂದಿ ವರ್ಗ<br>ಬ್ಯಾಂಕಿನಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಬ್ಯಾಂಕಿಗೆ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ : 134<br>ಕಾರ್ಯನಿರ್ವಹಿಸಿತ್ತಿರುವ ಸಿಬ್ಬಂದಿಗಳ ಸಂಖ್ಯೆ : 70 |
| | 2 | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಿರುವ ಬಗ್ಗೆ | ಕರ್ನಾಟಕ ರಾಜ್ಯ ಸರ್ಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಶಿಫಾರಸ್ಸು ಮಾಡಿರುವ ವೇತನ ಶ್ರೇಣಿ, ಕಾಲಕಾಲಕ್ಕೆ ಕರ್ನಾಟಕ ಸರ್ಕಾರವು ನಿರ್ಧರಿಸುವ ತುಟ್ಟಿಭತ್ಯೆಯನ್ನು ಒಳಗೊಂಡಂತೆ ಬ್ಯಾಂಕಿನ ಸಿಬ್ಬಂದಿ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಆಡಳಿತ ಮಂಡಳಿಯು ಸಿಬ್ಬಂದಿ ವೇತನ ಶ್ರೇಣಿಯನ್ನು ನಿಗದಿಗೊಳಿಸಿಕೊಂಡಿರುತ್ತಾರೆ. ಬ್ಯಾಂಕು ಸಿಬ್ಬಂದಿ ಸೇವಾ ನಿಯಮಾವಳಿಯನ್ನು ರಚಿಸಿಕೊಂಡಿರುತ್ತದೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಿರುತ್ತದೆ. |
| | 3 | ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುವ ಬಗ್ಗೆ. | ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುತ್ತದೆ. |
| | 4 | ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ,ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರ ಗಳೊಂದಿಗೆ ನೀಡುವುದು. | ವಿವರಗಳನ್ನು ಈ ವರದಿಗೆ ಲಗತ್ತಿಸಲಾಗಿದೆ. |
| | 5 | ಸಿಬ್ಬಂದಿಯಿಂದ ನಿಭಂದಕರ ಸುತ್ತೋಲೆ ಯಂತೆ ಭದ್ರತೆ ಪಡೆದಿರುವ ಬಗ್ಗೆ. | ಸಿಬ್ಬಂದಿ ಸೇವಾ ನಿಯಮಗಳ ಪ್ರಕಾರ ಭದ್ರತೆ ಪಡೆಯಲಾಗಿದೆ. |
| | 6 | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು. | ವರದಿ ಸಾಲಿನಲ್ಲಿ ಸಿಬ್ಬಂದಿಗಳಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು ರೂ.792.60 ಲಕ್ಷಗಳಾಗಿರುತ್ತದೆ. |
| | 7 | ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ | ಸಿಬ್ಬಂದಿ ವೆಚ್ಚ ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇ. 1.83 ರಷ್ಟಿರುತ್ತದೆ. |

| | | | |
|---|---|---|---|
| | 8 | ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ / ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು. | ವರದಿ ಸಾಲಿನಲ್ಲಿ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ. |
| | 9 | ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾದೆಯೇ? ಇದು ಸರಿ ಇರುವ ಬಗ್ಗೆ ದೃಢೀಕರಿಸುವುದು. | ಬೋನಸ್ ಕಾಯಿದೆ ಅನ್ವಯಿಸುವುದಿಲ್ಲ. ಆದರೆ ಎಕ್ಸ್‌ಗ್ರೇಷಿಯಾ ನೀಡಲು ರೂ.750891/– ಗಳ ಅವಕಾಶವನ್ನು ಕಲ್ಪಿಸಿಕೊಂಡಿರುತ್ತಾರೆ. |
| | 10 | ಶೆಡ್ಯೂಲ್ ಇ ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆಯೇ? | ತಾಳೆಯಾಗಿರುತ್ತದೆ. |
| | 11 | ಸಿಬ್ಬಂದಿಗಾಗಿ ಖರ್ಚು ಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೇ? | ಸಿಬ್ಬಂದಿ ವೆಚ್ಚವು ನಿಬಂಧಕರು ವಿಧಿಸಿರುವ ಶೇ.2ರ ಮಿತಿಯೊಳಗಿರಬೇಕಾಗಿದ್ದು ಇದು ಶೇ. 1.83 ರಷ್ಟಿರುತ್ತದೆ. |

**ಸಿಬ್ಬಂದಿಗಳಿಗೆ ಮತ್ತು ಸದಸ್ಯರಿಗೆ ನಡೆದ ತರಭೇತಿ ಕಾರ್ಯಕ್ರಮಗಳ ವಿವರ:**

| | |
|---|---|
| ಸಿಬ್ಬಂದಿಗಳಿಗೆ ನಡೆದ ತರಭೇತಿ ಕಾರ್ಯಕ್ರಮಗಳ ವಿವರ: | ಕಾಲಕಾಲಕ್ಕೆ ಆರ್.ಬಿ.ಐ, ಪಟ್ಟಣ ಬ್ಯಾಂಕುಗಳ ಮಹಾಮಂಡಳ ಹಮ್ಮಿಕೊಳ್ಳುವ ತರಭೇತಿ ಕಾರ್ಯಕ್ರಮಕ್ಕೆ ಬ್ಯಾಂಕಿನ ಸಿಬ್ಬಂದಿ ಪ್ರತಿನಿಧಿಸಿ ತರಭೇತಿಯನ್ನು ಪಡೆದಿರುತ್ತಾರೆ. |
| ಸಿಬ್ಬಂದಿಗಳಿಗೆ ನಡೆದ ತರಭೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ; | ಸಿಬ್ಬಂದಿಗಳಿಗೆ ನಡೆದ ತರಭೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ ರೂ.15513/– ಗಳಾಗಿರುತ್ತದೆ. |
| ಸದಸ್ಯರಿಗೆ ನಡೆದ ತರಭೇತಿ ಕಾರ್ಯಕ್ರಮಗಳ ವಿವರ | ವರದಿ ಸಾಲಿನಲ್ಲಿ ಸದಸ್ಯರಿಗೆ ಯಾವುದೇ ತರಭೇತಿ ಕಾರ್ಯಕ್ರಮಗಳನ್ನು ನಡೆಸಲಾಗಿರುವುದಿಲ್ಲ. |
| ಸದಸ್ಯರಿಗೆ ನಡೆದ ತರಭೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ಅನ್ವಯಿಸುವುದಿಲ್ಲ |

## ಬ್ಯಾಂಕಿನ ಆರ್ಥಿಕ ಫಲಿತಾಂಶಗಳ ವಿವರಗಳು

**ಹಣಕಾಸಿನ ವರದಿಯ ವಿಶ್ಲೇಷಣೆ:** (ರೂ. ಲಕ್ಷಗಳಲ್ಲಿ)

| | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ಬ್ಯಾಂಕಿನ ಒಟ್ಟು ವಹಿವಾಟು | 52213.81 | 49086.99 |
| ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳ | 43254.72 | 39271.95 |
| ಬ್ಯಾಂಕಿನ ಲಾಭ | 86.99 | 62.67 |
| ಬ್ಯಾಂಕಿನ ಮುಂದುವರೆದ ನಷ್ಟ | 1068.43 | 1155.42 |
| ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ | – | – |

**33) ತಲಾ ಷೇರಿನ ಗಳಿಕೆ:**

| | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ನಿವ್ವಳ ಲಾಭ | – | – |
| ಒಟ್ಟು ಷೇರುಗಳು | 193783 | 185600 |
| ತಲಾ ಷೇರಿನ ಗಳಿಕೆ | – | – |

| ಕ್ರ. ಸಂ. | ಶಾಖೆಗಳು | ವ್ಯಾಪಾರಿ ಲಾಭ/ಹಾನಿ | ನಿವ್ವಳ ಲಾಭ/ಹಾನಿ | ಠೇವಣಿಗಳು | ಸಾಲಗಳು | ಶಾಖಾ ಹೊಂದಾಣಿಕೆ |
|---|---|---|---|---|---|---|
| 1 | ಕೇಂದ್ರ ಕಛೇರಿ/ ಜಯನಗರ | – | –47.72 | 12228.00 | 5793.55 | –6869.38 |
| 2 | ಮತ್ತೀಕೆರೆ | – | 111.44 | 7278.04 | 3147.01 | –4487.71 |
| 3 | ವಿಜಯನಗರ | – | –62.88 | 2605.30 | 1315.30 | –1695.69 |
| 4 | ಇಂದಿರಾನಗರ | – | –14.72 | 2409.79 | 894.42 | –1558.48 |
| 5 | ಕೆಂಗೇರಿ | – | 13.48 | 1757.71 | 1154.53 | –717.19 |
| 6 | ಯಲಹಂಕ | – | 37.79 | 5263.70 | 2741.64 | –2549.63 |
| 7 | ಬಿ.ಇ.ಎಸ್ ಕಾಲೇಜು | – | 53.87 | 1368.26 | 2181.30 | +800.55 |
| 8 | ಬೇಗೂರು | – | –4.27 | 872.28 | 1202.97 | +346.79 |
| | | | **86.99** | **33783.08** | **18430.72** | **–16730.74** |

| | | |
|---|---|---|
| ಎ | **ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ** | |
| 1 | ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ/ಕ್ರಮದ ಬಗ್ಗೆ ವಿವರಣೆ, ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು. | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿರುತ್ತದೆ. ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಪರೀಕ್ಷಾರ್ಥ ವಾಗಿ ಪರಿಶೀಲಿಸಿದಾಗ ಅಂತಹ ಯಾವುದೇ ಅಸಮಾನ್ಯ ಎಂಟ್ರಿಗಳನ್ನು ಹಾಕಿರುವುದು ಕಂಡು ಬಂದಿರುವುದಿಲ್ಲ. |
| 2 | ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳನ್ನು ಕಂಡು ಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ. | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು ಪ್ರಧಾನ ಕಛೇರಿ ಯಲ್ಲಿ ಕಾಲಕಾಲಕ್ಕೆ ಸಮನ್ವಯ ಮಾಡಿಕೊಳ್ಳಲಾಗುತ್ತಿರುತ್ತದೆ. |
| 3 | ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು | ಸಮನ್ವಯಗಳನ್ನು ತಹಲ್‌ವರೆಗೆ ಮಾಡಿರುತ್ತಾರೆ. |
| ಬಿ | **ಶಾಖೆಗಳ ಪರಿವೀಕ್ಷಣೆ :** | |
| 1 | ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ ಬಗ್ಗೆ/ ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖೆ [ಪರಿವೀಕ್ಷಣೆ] ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ | ಸಮವರ್ತಿತ ಲೆಕ್ಕ ಪರಿಶೋಧಕರು ಎಲ್ಲಾ ಶಾಖೆಗಳ ವ್ಯವಹಾರಗಳನ್ನು ಪರಿಶೋಧಿಸಿ ವರದಿಯನ್ನು ಮಾಸಿಕವಾಗಿ ಸಲ್ಲಿಸಿರುತ್ತಾರೆ. ದಿನಾಂಕ : 31.03.2026 ರವರೆಗೆ ಎಲ್ಲಾ ಶಾಖೆಗಳ ವರದಿಗಳನ್ನು ಸಲ್ಲಿಸಿರುತ್ತಾರೆ. |
| 2 | ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ. | ವರದಿಗಳಿಗೆ ಹಿಂಬಾಲಿಕೆ ಕ್ರಮವಾಗಿ ಸಂಬಂಧಪಟ್ಟ ಶಾಖೆಗಳಿಂದ ಅನುಪಾಲನೆ ವರದಿಯನ್ನು ಪಡೆದು, ಅದನ್ನು ಲೆಕ್ಕ ಮತ್ತು ಲೆಕ್ಕ ಪರಿಶೋಧನಾ ಉಪಸಮಿತಿಯಲ್ಲಿ ಪರಾಮರ್ಶಿಸಿ, ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗು ತ್ತಿದೆ. |
| 3 | ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ? | ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬ ವಿಲ್ಲದೆ ಸಲ್ಲಿಸುತ್ತಿವೆ. |

| | | |
|---|---|---|
| 4 | ಹೊಂದಾಣಿಕೆ ಲೆಕ್ಕಗಳ ಬಗ್ಗೆ – "ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ" – ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ. | ಶಾಖೆಗಳ ಡ್ರಾಯಿಂಗ್ ಖಾತೆಗಳನ್ನು ಕೇಂದ್ರ ಕಛೇರಿಯಲ್ಲಿ ನಿರ್ವಹಿಸುತ್ತಿರುವ ಡ್ರಾಯಿಂಗ್ ಖಾತೆಗೆ ಪ್ರತಿ ಮಾಸಾಂತ್ಯಕ್ಕೆ ತಾಳೆ ಮಾಡಿಕೊಳ್ಳುವ ಪದ್ಧತಿ ಜಾರಿಯಲ್ಲಿದೆ. ದಿನಾಂಕ: 31.03.2026ಕ್ಕೆ ಎಲ್ಲಾ ಶಾಖೆಗಳ ಡ್ರಾಯಿಂಗ್ ಖಾತೆಯ ಮೊತ್ತಕ್ಕೆ ತಾಳೆ ಇರುತ್ತದೆ. |
| ಸಿ | **ಇತರೆ ಷರಾ/ಇತರೆ ವಿಷಯಗಳು:** | |
| 1 | ಲೆಕ್ಕನಿರ್ವಹಣಾ ಕಾರ್ಯನೀತಿ / ಅದು ಲೆಕ್ಕ ನಿರ್ವಹಣಾ ಪ್ರಮಾಣಕ್ಕನುಗುಣವಾಗಿದೆಯೇ | ಲೆಕ್ಕ ಕಾರ್ಯನಿರ್ವಹಣೆಯ ನೀತಿಯು ಸಾಮಾನ್ಯವಾಗಿ ಲೆಕ್ಕನಿರ್ವಹಣಾ ಮಟ್ಟಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕರ್ನಾಟಕ ಸಹಕಾರ ಸಂಘಗಳ ಇಲಾಖೆಯ ಮಾರ್ಗ ಸೂಚಿಗಳ ಪ್ರಕಾರ ನಿರ್ವಹಿಸಬೇಕಾಗಿದ್ದು, ಅಂತಹ ಲೆಕ್ಕ ನಿರ್ವಹಣಾ ಮಟ್ಟಗಳನ್ನು ಆ ಮಾರ್ಗಸೂಚಿಯಂತೆ ಅಳವಡಿಸಿಕೊಂಡಿ ರುತ್ತಾರೆ. |
| 2 | ಶಾಖೆಗಳ ನಿಯತಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತಃಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು. | ಕ್ರೋಢೀಕರಿಸುವಾಗ ಯಾವುದೇ ಗಮನಾರ್ಹ ಅಂಶಗಳು ಕಂಡು ಬಂದಿರುವುದಿಲ್ಲ. |
| 3 | ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ ಸಮನ್ವಯಕ್ಕೊಳಪಟ್ಟಿರುವ ತಃಖ್ತೆಗಳ ಬಗ್ಗೆ ವಿವರಣೆ | ಬ್ಯಾಂಕ್ ಶಿಲ್ಕುಗಳಿಗೆ ಸಂಬಂಧಪಟ್ಟಂತೆ ಸದರಿ ಬ್ಯಾಂಕುಗಳಿಂದ ದೃಢೀಕರಣ ಪತ್ರ ಪಡೆಯಲಾಗಿದ್ದು ಮತ್ತು ಬ್ಯಾಂಕು ಸಮನ್ವಯ ತಃಖ್ತೆಯನ್ನು ತಯಾರಿಸಿದ್ದು, ಆಸ್ತಿ ಮೊತ್ತಕ್ಕೆ ತಾಳೆ ಇದ್ದು, ವರದಿಗೆ ಲಗತ್ತಿಸಲಾಗಿದೆ. |
| 4 | NOSTRO ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್‌ವರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ಧತಿ ಬಗ್ಗೆ | ಅನ್ವಯಿಸುವುದಿಲ್ಲ |

| | | |
|---|---|---|
| 5 | CRAR ರ ಬಗ್ಗೆ ವಿಶ್ಲೇಷಣೆ | ಬ್ಯಾಂಕಿನ ಸ್ವಂತ ಬಂಡವಾಳ / ಆಸ್ತಿಯು ಆರ್.ಬಿ.ಐ ನಿರ್ದೇಶನದ ರೀತಿ ಅಪಾಯದ ಪ್ರಭಾವವಿರುವ ಆಸ್ತಿಗಳಿಗೆ ಹೋಲಿಸಿದಾಗ ಶೇ.12 ರ ಕನಿಷ್ಟ ಮಟ್ಟದ ಮೇಲಿರಬೇಕಾಗಿದ್ದು ಅದು ವರದಿ ಸಾಲಿನಾಂತ್ಯಕ್ಕೆ ಶೇ.15.13 ರಷ್ಟಿರುತ್ತದೆ. |
| 6 | ಹಿಂದಿನ ಸಾಲಿನ ಲಾಭದ ಶೇ.1%ಕ್ಕಿಂತ ಹೆಚ್ಚಿಗೆ ಕೊಡುಗೆ/ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ. | ಯಾವುದೇ ಕೊಡುಗೆ/ ದಾನ ಕೊಟ್ಟಿರುವುದಿಲ್ಲ. |
| 7 | ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ | ವರದಿ ಸಾಲಿನಲ್ಲಿ ಠೇವಣಿಗಳ ಮೇಲಿನ ಸರಾಸರಿ ವೆಚ್ಚವು (Cost Of Deposits) ಶೇ.5.97 ರಷ್ಟಿದ್ದು, ಸಾಲಗಳ ಮೇಲಿನ ಸರಾಸರಿ ಆದಾಯವು (Yield On Advances) ಶೇ.11.32 ರಷ್ಟಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಈ ಅನುಪಾತವು ಸಮರ್ಪಕವಾಗಿರುತ್ತದೆ. |
| 8 | ಗಣಕೀಕರಣದ ಅಳವಡಿಕೆ ಮತ್ತು ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ. | ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ಸೇವೆಯನ್ನು ಅಳವಡಿಸಲಾಗಿದ್ದು ಕೋರ್ ಬ್ಯಾಂಕಿಂಗ್ ಸೇವೆಯ ಲಾಭವನ್ನು ಸಮಂಜಸವಾಗಿ ಪಡೆಯಲಾಗುತ್ತಿರುವುದನ್ನು ಗಮನಿಸಲಾಗಿದೆ.<br>2025-26ನೇ ಸಾಲಿಗೆ ಇನ್‌ಫರ್ಮೇಷನ್ ಸಿಸ್ಟಂ ಆಡಿಟ್‌ನ್ನು ಮಾಡಿಸಲಾಗಿದೆ. ಸಿಬಿಎಸ್ ಸಾಫ್ಟವೇರ್‌ನಲ್ಲಿ ಕೈಬರಹದಲ್ಲಿ ವ್ಯವಹರಿಸಲು ಅವಕಾಶವಿರುವುದಿಲ್ಲ |
| 9 | ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಛಿಸುವ ಇತರೆ ವಿಷಯಗಳ ಬಗ್ಗೆ. | 1. ಸಾಲ ಮಂಜೂರಾದ 3 ಸಾಲಗಾರರ ಉಳಿತಾಯ ಖಾತೆಗಳಿಂದ ಒಂದಿಷ್ಟು ಮೊತ್ತವನ್ನು ಬ್ಯಾಂಕಿನ ಇಬ್ಬರು ಸಿಬ್ಬಂದಿಗಳ ಉಳಿತಾಯ ಖಾತೆಗಳಿಗೆ ವರ್ಗಾವಣೆಯಾಗಿರುತ್ತದೆ. ಈ ರೀತಿಯ ವಹಿವಾಟುಗಳು ಎವರ್‌ಗ್ರೀನಿಂಗ್ (Evergreening) ಸಂಬಂಧಿಸಿದ ಶಂಕಾಸ್ಪದ ಕ್ರಮ, ಹಣದ ಅಕ್ರಮ ಮಾರ್ಗಸೂಚಿ ಮತ್ತು ಹಿತಾಸಕ್ತಿ |

| | | |
|---|---|---|
| | | ಸಂಘರ್ಷ(Conflict of interest) ವನ್ನು ಸೂಚಿಸುತ್ತದೆ.<br>**ಅನುವರ್ತನೆ : ಸಂಬಂಧಪಟ್ಟ ಸಿಬ್ಬಂದಿಗಳಿಗೆ ನೋಟಿಸ್ ನೀಡಲಾಗಿದು ವಿಚಾರಣೆ ನಡೆಸಿ ಕಠಿಣ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.**<br><br>2. ಬ್ಯಾಂಕಿನ ಸಿಬ್ಬಂದಿಗಳಿಗೆ ಆಭರಣ ಸಾಲಗಳನ್ನು ಆಯಾ ಶಾಖೆಗಳಲ್ಲಿ ನೀಡಲಾಗುತ್ತಿದೆ. ಉತ್ತಮ ಆಂತರಿಕ ನಿಯಂತ್ರಣಕ್ಕಾಗಿ ಸಿಬ್ಬಂದಿಗಳ ಸಾಲ ಮತ್ತು ಮುಂಗಡಗಳ ಶೀರ್ಷಿಕೆಯಡಿಯಲ್ಲಿ ಕೇಂದ್ರ ಕಛೇರಿಯ ಆಡಳಿತ ವಿಭಾಗದಲ್ಲಿ (EST) ಆಭರಣ ಸಾಲಗಳನ್ನು ನೀಡುವುದು ಸೂಕ್ತವಾಗಿರುತ್ತದೆ.<br>**ಅನುವರ್ತನೆ : ಸಿಬ್ಬಂದಿಗಳಿಗೆ ಆಭರಣ ಸಾಲಗಳನ್ನು ಕೇಂದ್ರ ಕಛೇರಿಯಲ್ಲಿ ಮಾತ್ರ ವಿತರಿಸಲು ಕ್ರಮಕೈಗೊಳ್ಳಲಾಗಿದೆ.**<br><br>**3**. ಬ್ಯಾಂಕಿನಲ್ಲಿ ಅಡಮಾನ ಸಾಲ ಪಡೆದ ಎಲ್ಲಾ ಸಾಲಗಾರರ ಸ್ವತ್ತುಗಳಿಗೆ ಕೇಂದ್ರ ಕಛೇರಿಯ ಸಾಲದ ವಿಭಾಗದಲ್ಲಿ ಬೆಂಕಿ ವಿಮೆ ಪಾಲಿಸಿಯುನ್ನು ಶ್ರೀರಾಮ ಇನ್‌ಶೂರೆನ್ಸ್ ಕಂಪನಿಯಿಂದ ಮಾಡಿಸಲಾಗುತ್ತಿದೆ. ಅದರೆ ಬೇಗೂರು ಶಾಖೆಯಲ್ಲಿ ವಿತರಿಸಲಾದ ಸಾಲಗಳ ಮೊತ್ತಕ್ಕೆ ಶಾಖಾ ವ್ಯವಸ್ಥಾಪಕರೆ ಪ್ರತ್ಯೇಕವಾಗಿ ಬೆಂಕಿ ವಿಮೆ ಪಾಲಿಸಿಯನ್ನು ಮಾಡಿಸುತ್ತಿದ್ದಾರೆ. ಉತ್ತಮ ನಿಯಂತ್ರಣ, ಆದಾಯ ಸೋರಿಕೆಯನ್ನು ತಪ್ಪಿಸಲು ಮತ್ತು ಏಕರೂಪತೆಯನ್ನು ತರಲು ಕೇಂದ್ರ ಕಛೇರಿಯಲ್ಲಿ ನಿರ್ವಹಿಸುವುದು ಸೂಕ್ತವಾಗಿರುತ್ತದೆ.<br>**ಅನುವರ್ತನೆ : ಕೇಂದ್ರ ಕಛೇರಿಯಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳಲಾಗಿದೆ.** |

## 34) ಬ್ಯಾಂಕಿನ ಲಾಭ ಅಥವಾ ನಷ್ಟದ ಬಗ್ಗೆ ಲೆಕ್ಕಪರಿಶೋಧಕರ ವಿಮರ್ಶೆ / ವಿಶ್ಲೇಷಣೆ

| ಕ್ರ ಸಂ | ವಿವರ | | | | ಪ್ರತಿಶತ ಪ್ರಮಾಣ | | | |
|---|---|---|---|---|---|---|---|---|
| | | ಪ್ರಸಕ್ತ ಸಾಲಿನ ಮೊತ್ತ (ರೂ.ಲಕ್ಷಗಳಲ್ಲಿ) | ಹಿಂದಿನ ಸಾಲಿನ ಮೊತ್ತ (ರೂ.ಲಕ್ಷಗಳಲ್ಲಿ) | ಪ್ರತಿಶತ ಪ್ರಮಾಣದ ಆಧಾರ | ಪ್ರಸಕ್ತ ಸಾಲಿನ | ಹಿಂದಿನ ಸಾಲಿನ | ಹೆಚ್ಚು | ಕಡಿಮೆ |
| 1 | ಒಟ್ಟು ಮಾರಾಟ | | – | ಒಟ್ಟು ಮಾರಾಟ | – | – | – | – |
| | ವ್ಯಾಪಾರಿ ಲಾಭ | | – | | – | – | – | – |
| | ವ್ಯಾಪಾರಿ ನಷ್ಟ | | – | | | | | |
| 2 | ಒಟ್ಟು ಗುಂತಾವಣಿಗಳು | 19153.56 | 17720.56 | ಒಟ್ಟು ಗುಂತಾವಣಿಗಳು | | – | | |
| | ಗುಂತಾವಣಿಗಳ ಮೇಲೆ ಸ್ವಿಕರಿಸಿದ ಬಡ್ಡಿ | 1090.57 | 1073.89 | | 5.70 | 6.06 | | 0.36 |
| 3 | ಒಟ್ಟ ನೀಡಿದ ಸಾಲ | 18430.72 | 17538.03 | ಒಟ್ಟ ನೀಡಿದ ಸಾಲ | – | – | – | – |
| | ಸಾಲಗಳ ಮೇಲೆ ಸ್ವಿಕರಿಸಿದ ಬಡ್ಡಿ | 1821.38 | 2043.25 | | 9.88 | 11.65 | – | 1.77 |
| 4 | ದುಡಿಯುವ ಬಂಡವಾಳ | 43254.72 | 39271.95 | ದುಡಿಯುವ ಬಂಡವಾಳ | – | – | – | – |
| | ಇತರೆ ಆದಾಯ | 281.76 | 78.58 | | 0.65 | 0.20 | 0.45 | – |
| 5 | ಒಟ್ಟು ಪಡೆದ ಸಾಲ | – | – | ಒಟ್ಟು ಪಡೆದ ಸಾಲ | – | – | – | – |
| | ಸಾಲುಗಳ ಮೇಲೆ ಪಾವತಿಸಿದ ಬಡ್ಡಿ | – | – | | – | – | – | – |
| 6 | ಒಟ್ಟು ಠೇವಣಿ | 33783.08 | 31548.96 | ಒಟ್ಟು ಠೇವಣಿ | – | – | – | – |
| | ಠೇವಣಿಗಳ ಮೇಲೆ ಪಾವತಿಸಿದ ಬಡ್ಡಿ | 1903.44 | 1906.83 | | 5.63 | 6.04 | | 0.41 |

| | | | | | | | | |
|---|---|---|---|---|---|---|---|---|
| 7 | ದುಡಿಯುವ ಬಂಡವಾಳ | 43254.72 | 39271.95 | | - | - | - | - |
| 8 | ಸಿಬ್ಬಂದಿ ವೆಚ್ಚ | 792.60 | 901.82 | | 1.83 | 2.30 | - | 0.47 |
| 9 | ಆಡಳಿತ ವೆಚ್ಚ | 279.42 | 268.33 | | 0.65 | 0.68 | - | 0.03 |
| 10 | ಇತರೆ ವೆಚ್ಚ | 6.82 | 10.96 | ದುಡಿಯುವ ಬಂಡವಾಳ | 0.02 | 0.03 | - | 0.01 |
| 11 | ಸವಕಳಿಗಳು | 9.98 | 11.91 | | 0.02 | 0.03 | - | 0.01 |
| | ಅವಕಾಶಗಳು | 120.89 | 39.79 | | 0.28 | 0.10 | 0.18 | - |
| 12 | ನಿವ್ವಳ ಲಾಭ | 86.99 | 62.67 | | 0.20 | 0.16 | 0.04 | - |
| | ಮುಂದುವರೆದ ನಿವ್ವಳ ನಷ್ಟ | 1068.43 | 1155.42 | | 2.47 | 2.94 | - | 0.47 |

| | | |
|---|---|---|
| | **ಈ ಮೇಲಿನ ತುಲನಾತ್ಮಕ ಅಂಕಿ ಸಂಖ್ಯೆಗಳ ಬಗ್ಗೆ ವಿಮರ್ಶೆ:** | |
| | ಲಾಭ-ನಷ್ಟದ ತಃಖ್ತೆ<br>ವರದಿ ಸಾಲಾಂತ್ಯಕ್ಕೆ ಗಳಿಸಿದ ನಿವ್ವಳ ಲಾಭ: | ನಿವ್ವಳ ಲಾಭ : ರೂ.86.99 ಲಕ್ಷಗಳು |
| 1 | ಬ್ಯಾಂಕು ಪ್ರಸಕ್ತ 2025-26ನೇ ಸಾಲಿನಲ್ಲಿ ಗಳಿಸಿರುವ ಲಾಭವು ಪ್ರಮಾಣೀಕರಿಸುವ ಮುನ್ನ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22ರಲ್ಲಿ ವಿವರಿಸಿದ ಎಲ್ಲಾ ಅವಕಾಶಗಳನ್ನು ಮಾಡಿರುವುದರ ಬಗ್ಗೆ ವಿಮರ್ಶೆ. | ಎಲ್ಲಾ ವೆಚ್ಚಗಳನ್ನು ಮತ್ತು ಕೊಡತಕ್ಕ ವೆಚ್ಚಗಳಿಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸಿಕೊಳ್ಳುವುದರ ಮೂಲಕ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಲಾಭವನ್ನು ನಿರ್ಧರಿಸಿರುವುದನ್ನು ಗಮನಿಸಲಾಗಿದೆ. |
| 2 | ವರ್ಷಾಂತ್ಯಕ್ಕೆ ಬರತಕ್ಕ ಇರುವ ಬಡ್ಡಿ ವರದಿ ಸಾಲಿನ ಲಾಭವೆಂದು ಪರಿಗಣಿಸಿದ್ದಲ್ಲಿ ಈ ಕುರಿತು ಕರ್ನಾಟಕ ಸಹಕಾರಿ ಸಂಘಗಳ ನಿಯಮ 22(ಎ)ರನ್ವಯ ನಿಬಂಧಕರ ಮಂಜೂರಿ ಪಡೆಯಲಾಗಿದೆಯೇ? | ವರದಿ ಸಾಲಿನಲ್ಲಿ ಉತ್ಪಾದಕ ಸಾಲಗಳ ಮೇಲೆ ಬರಬೇಕಾದ ಬಡ್ಡಿ ಮೊತ್ತ ರೂ.7902329/- ಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ: DCBR.BPO(PCB)MC No.129 /109. 14.000/2015-16 ಪ್ರಕಾರ ಪರಿಗಣಿಸಿದೆ. |

| | | |
|---|---|---|
| 3 | ಬ್ಯಾಂಕು ಗಳಿಸಿರುವ ಲಾಭ ಕಳೆದ ಸಾಲಿನ ಹೋಲಿಕೆಯೊಂದಿಗೆ ಹೆಚ್ಚು/ಕಡಿಮೆ ಇರುವುದರ ಬಗ್ಗೆ ವಿಮರ್ಶೆ. | ಬ್ಯಾಂಕು ಕಳೆದ ಸಾಲಿನಲ್ಲಿ ರೂ.62.67 ಲಕ್ಷಗಳ ನಿವ್ವಳ ಲಾಭಗಳಿಸಿದ್ದು, ವರದಿ ಸಾಲಿನಲ್ಲಿ ರೂ.86.99 ಲಕ್ಷಗಳ ನಿವ್ವಳ ಲಾಭಗಳಿಸಿರುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ರೂ.24.32 ಲಕ್ಷಗಳ ಲಾಭ ಹೆಚ್ಚಾಗಿರುತ್ತದೆ. |
| 4 | ಕಳೆದ ಸಾಲುಗಳ ಲಾಭ ವಿಲೇವಾರಿ ಆಗದೆ ಮುಂದುವರೆದಿರುವ ವಿವರ ಹಾಗೂ ಈ ಸಂಬಂದ ಲೆಕ್ಕಪರಿಶೋಧಕರು ನೀಡಬೇಕಾಗಿರುವ ಸಲಹೆಯೊಂದಿಗೆ ವಿಮರ್ಶೆ. | ಕಳೆದ ಸಾಲುಗಳ ಲಾಭ ವಿಲೇವಾರಿಯಾಗದೆ ಮುಂದುವರೆದಿರುವ ಯಾವುದೆ ಪ್ರಕಾರಣಗಳು ಇರುವುದಿಲ್ಲ. |
| 5 | ನಷ್ಟವಾಗಿದ್ದಲ್ಲಿ ಕಾರಣಗಳು: | ಅನ್ವಯಿಸುವುದಿಲ್ಲ. |

**35) ಇತರೆ ಷರಾ ಹಾಗೂ ಬಾಬ್ತುಗಳು :**

**ವರದಿ ಸಾಲಿಗೆ ಸಂಬಂಧಿಸಿದಂತೆ ಈ ಕೆಳಗಿನ ಅನುಪಾತಗಳನ್ನು ಗಮನಿಸಲಾಗಿದೆ :**

| | |
|---|---|
| (1) ಠೇವಣಿಗಳ ಮೇಲಿನ ಸರಾಸರಿ ವೆಚ್ಚ | ಶೇ. 5.97 |
| (2) ಒಟ್ಟು ನಿಧಿಗಳ (ಪಡೆದ ಠೇವಣಿ+ಪಡೆದ ಸಾಲ) ಮೇಲಿನ ಸರಾಸರಿ ವೆಚ್ಚ | ಶೇ. 5.97 |
| (3) ಸಾಲಗಳ ಮೇಲಿನ ಸರಾಸರಿ ಆದಾಯ | ಶೇ. 11.32 |
| (4) ಹೂಡಿಕೆಗಳ ಮೇಲಿನ ಸರಾಸರಿ ಆದಾಯ | ಶೇ. 5.84 |
| (5) ಒಟ್ಟು ನಿಧಿಗಳ (ಕೊಟ್ಟ ಸಾಲ+ಹೂಡಿಕೆ) ಮೇಲಿನ ಸರಾಸರಿ ಆದಾಯ | ಶೇ. 8.38 |
| (6) ಮಾರ್ಜಿನ್ (5 –2) | ಶೇ. 2.41 |

| ವಿವರ | 31.03.2026ಕ್ಕೆ (ರೂ. ಲಕ್ಷಗಳಲ್ಲಿ) | 31.03.2025ಕ್ಕೆ (ರೂ. ಲಕ್ಷಗಳಲ್ಲಿ) | ಶೇಕಡಾವಾರು (ಹೆಚ್ಚಳ/ಇಳಿಕೆ) |
|---|---|---|---|
| ಸಾಲಗಳು | 18430.72 | 17538.02 | (+) 5.09 |
| ಠೇವಣಿಗಳು | 33783.08 | 31548.96 | (+) 7.08 |
| ಸಾಲ ಮತ್ತು ಠೇವಣಿಗಳ ಅನುಪಾತ | 54.56 | ಶೇ. 55.59 | (–) 1.03 |

ಸಾಲ ಮತ್ತು ಠೇವಣಿಗಳ ಅನುಪಾತವು ಕಳೆದ ವರ್ಷಾಂತ್ಯಕ್ಕೆ ಹೋಲಿಸಿದಾಗ ಇಳಿಕೆಯಾಗಿದ್ದು ನಮ್ಮ ಅಭಿಪ್ರಾಯದಲ್ಲಿ ಸದಸ್ಯರನ್ನು ಸಾಲದ ವ್ಯವಹಾರದಲ್ಲಿ ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ಸಾಲ ಮತ್ತು ಠೇವಣಿಗಳ ಅನುಪಾತವನ್ನು ಇನ್ನೂ ಹೆಚ್ಚಿಸಿಕೊಳ್ಳಲು ಕ್ರಮವಿಡುವುದು ಅಗತ್ಯ.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

**36) ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು:–**

1. ಸ್ಥಿರಾಸ್ತಿಗಳ ಆಧಾರದ ಮೇಲೆ ಮಂಜೂರು ಮಾಡಬೇಕಾದ ಸಾಲದ ಮೊತ್ತವನ್ನು ನಿಗಧಿಪಡಿಸುವಾಗ ಸಾಲಕ್ಕಾಗಿ ಸಲ್ಲಿಸಿದ ಅರ್ಜಿದಾರರ ಆದಾಯ ಅಥವಾ ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯಕ್ಕೆ ಶೇ.60 ರಷ್ಟು ಇವುಗಳಲ್ಲಿ ಯಾವುದು ಕಡಿಮೆ ಇದೆಯೋ ಆ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಆದರೆ ನಮ್ಮ ಅಭಿಪ್ರಾಯದಲ್ಲಿ ಸಾಲ ಮಂಜೂರಾತಿ ಮೊತ್ತವನ್ನು ನಿಗದಿ ಮಾಡುವಾಗ ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸೂಕ್ತವಾಗಿರುತ್ತದೆ.

ಅ) ಸಾಲಗಾರರು ತಮ್ಮ ಮರುಪಾವತಿ ಸಾಮರ್ಥ್ಯವನ್ನು ದೃಢೀಕರಿಸಲು ಆದಾಯ ತೆರಿಗೆ ರಿಟರ್ನ್ಸ್ ಪ್ರತಿಯೊಂದಿಗೆ ಸ್ವಘೋಷಿತ ಆದಾಯ ಪತ್ರವನ್ನು ಸಹ ಕೊಟ್ಟಿರುತ್ತಾರೆ. ಆ ಸ್ವಘೋಷಿತ ಆದಾಯ ಪತ್ರದಲ್ಲಿ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ಘೋಷಿಸಿದ ಬಾಡಿಗೆ ಆದಾಯ ಇತ್ಯಾದಿಗಳನ್ನು ತೋರಿಸಿರುತ್ತಾರೆ. ಬ್ಯಾಂಕು ಸಾಲ ಮಂಜೂರು ಮಾಡುವಾಗ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವ ಆದಾಯವನ್ನು ಗಣನೆಗೆ ತೆಗೆದುಕೊಳ್ಳದೇ ಸ್ವಘೋಷಿತ ಆದಾಯ ಪತ್ರದ ಆದಾಯವನ್ನು ಗಣನೆಗೆ ತೆಗೆದುಕೊಂಡಿರುತ್ತಾರೆ. ನಮ್ಮ ಅಭಿಪ್ರಾಯದಲ್ಲಿ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವ ಆದಾಯವನ್ನು ಗಣನೆಗೆ ತೆಗೆದುಕೊಳ್ಳುವುದು ಸರಿಯಾದ ಕ್ರಮವಾಗಿರುತ್ತದೆ.

**ಅನುವರ್ತನೆ : ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವ ಆದಾಯವನ್ನು ಮಾತ್ರ ಗಣನೆಗೆ ತೆಗೆದುಕೊಂಡು ಸಾಲ ಮಂಜೂರು ಮಾಡಲಾಗುತ್ತಿದೆ. ಮನೆ ಕಟ್ಟಲು ನೀಡುವ ಸಾಲಕ್ಕೆ ಮಾತ್ರ ನಿರೀಕ್ಷಿತ ಬಾಡಿಗೆಯ ಶೇ.50 ರಷ್ಟು ಆದಾಯವನ್ನು ಪರಿಗಣಿಸಲಾಗುತ್ತಿದೆ.**

ಆ) ಸ್ಥಿರಾಸ್ತಿ ಮಾರುಕಟ್ಟೆ ಮೌಲ್ಯಕ್ಕೆ ಶೇ.60 ರಷ್ಟನ್ನು ಬ್ಯಾಂಕು ಸಾಲ ಮಂಜೂರು ಮಾಡುವಾಗ ಗಣನೆಗೆ ತೆಗೆದುಕೊಂಡಿರುತ್ತದೆ, ನಮ್ಮ ಅಭಿಪ್ರಾಯದಲ್ಲಿ ಮಂಜೂರು ಮಾಡಬೇಕಾದ ಸಾಲದ ಮೊತ್ತವು ಸ್ಥಿರಾಸ್ತಿಯ ಮಾರ್ಗಸೂಚಿ ಮೌಲ್ಯಕ್ಕಿಂತ ಅಧಿಕವಾಗಿರದಂತೆ ನೋಡಿಕೊಳ್ಳುವುದು ಸೂಕ್ತ. ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯಕ್ಕೆ ಶೇ.60 ರಷ್ಟು ಅಥವಾ ಸ್ಥಿರಾಸ್ತಿಯ ಮಾರ್ಗಸೂಚಿ ಮೌಲ್ಯ ಇವುಗಳಲ್ಲಿ ಯಾವುದು ಕಡಿಮೆ ಇದೆಯೋ ಆ ಮೊತ್ತಕ್ಕೆ ಸಾಲ ಮಂಜೂರು ಮಾಡುವುದು ಸೂಕ್ತವಾಗಿರುತ್ತದೆ.

**ಅನುವರ್ತನೆ : ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.**

2. ಅಡಮಾನ ಸಾಲ ಪಡೆದ ಎಲ್ಲಾ ಸಾಲಗಾರರಿಂದ ಸಾಲ ಮುಕ್ತಾಯವಾಗುವವರೆಗೆ ಪ್ರತಿ ವರ್ಷ ಆಸ್ತಿ ತೆರಿಗೆ ಪಾವತಿಸಿದ ರಶೀದಿ ಮತ್ತು ಋಣಭಾರ ಪತ್ರ ಪಡೆಯಲು ಕ್ರಮವಿಡುವುದು ಅಗತ್ಯ ಹಾಗೆಯೇ ಆಸ್ತಿ ತೆರಿಗೆ ಪಾವತಿಸಿದ ರಶೀದಿಗಳಲ್ಲಿ ಸಂಬಂಧಪಟ್ಟ ಸಾಲಗಾರರ ಹೆಸರು ನಮೂದಾಗಿರುವುದನ್ನೂ ಮತ್ತು ಋಣಭಾರ ಪತ್ರಗಳಲ್ಲಿ ಯಾವುದೇ ವ್ಯತಿರಕ್ತ ವ್ಯವಹಾರ ನಡೆಯದೇ ಇರುವುದನ್ನೂ ಖಾತ್ರಿ ಮಾಡಿಕೊಳ್ಳಬೇಕಾಗಿರುವುದು ಅಷ್ಟೇ ಅಗತ್ಯ.

**ಅನುವರ್ತನೆ : ಋಣಭಾರ ಪತ್ರಗಳನ್ನು ಪಡೆಯಲಾಗುತ್ತಿದೆ. ಆಸ್ತಿ ತೆರಿಗೆ ಪಾವತಿಸಿದ ರಶೀದಿಗಳನ್ನು ಪಡೆಯಲು ಕ್ರಮಕೈಗೊಳ್ಳಲಾಗಿದೆ.**

3. ಬಾಡಿಗೆ ಆದಾಯಕ್ಕೆ ಪುರಾವೆಯಾಗಿ ಸಾಲಗಾರರು ಸಲ್ಲಿಸಿದ ಬಾಡಿಗೆ ಕರಾರು ಪತ್ರಗಳನ್ನು ಕಾಲಕಾಲಕ್ಕೆ ನವೀಕರಿಸಿರುವ ಬಗ್ಗೆ ಅಥವಾ ಹೊಸ ಬಾಡಿಗೆದಾರರೊಂದಿಗೆ ಹೊಸ ಬಾಡಿಗೆ ಕರಾರು ಪತ್ರಗಳನ್ನು ಮಾಡಿಕೊಂಡ ಬಗ್ಗೆ ಖಾತ್ರಿ ಮಾಡಿಕೊಳ್ಳಬೇಕಾಗಿರುವುದು ಅಗತ್ಯ.

**ಅನುವರ್ತನೆ : ಖಾತ್ರಿ ಪಡಿಸಿಕೊಳ್ಳಲಾಗುತ್ತಿದೆ.**

4. ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯನ್ವಯ ಆದ್ಯತಾ ವಲಯಕ್ಕೆ ನೀಡಿರುವ ಸಾಲ ಸರಿಯಾಗಿ ಉಪಯೋಗವಾಗಿದೆಯೇ ಎಂಬುದನ್ನು ಪರಿಶೀಲಿಸುವುದು.

**ಅನುವರ್ತನೆ : ಪರಿಶೀಲಿಸಲು ಕ್ರಮಕೈಗೊಳ್ಳಲಾಗಿದೆ.**

5. ಬ್ಯಾಂಕಿನ ಶಾಖೆಗಳಲ್ಲಿ ನಿಗದಿಪಡಿಸಿರುವ ಗರಿಷ್ಟ ಮಿತಿಗಿಂತ ಹೆಚ್ಚಿನ ನಗದು ಶಿಲ್ಕು ಇಟ್ಟಿರುವುದು ಗಮನಿಸಿದ್ದು ನಿಗದಿತ ಮಿತಿಯಲ್ಲಿಯೇ ನಗದು ಶಿಲ್ಕು ನಿರ್ವಹಿಸಲು ಶಾಖೆಗಳಿಗೆ ತಿಳಿಸುವುದು.

**ಅನುವರ್ತನೆ : ಶಾಖೆಯಲ್ಲಿ ಕೆಲವು ದಿನಗಳು ಸಂಜೆ ವೇಳೆ ಹೆಚ್ಚಿನ ನಗದು ಬಂದ ಸಂದರ್ಭದಲ್ಲಿ ಮಾತ್ರ ನಗದು ಮಿತಿಗಿಂತ ಹೆಚ್ಚಾಗಿರುತ್ತದೆ. ಮುಂದಿನ ದಿನ ಮಿತಿಯೊಳಗಿರುತ್ತದೆ.**

6. ನಮ್ಮ ಅಭಿಪ್ರಾಯದಲ್ಲಿ ಸಾಲದ ಅರ್ಜಿದಾರರು ತಮ್ಮ ಮರುಪಾವತಿ ಸಾಮರ್ಥ್ಯವನ್ನು ದೃಢೀಕರಿಸಲು ಸಲ್ಲಿಸುವ ಆದಾಯ ತೆರಿಗೆ ರಿಟರ್ನ್ಸ್‌ಗಳ ನೈಜತೆಯನ್ನು ಪರಿಶೀಲಿಸಿಕೊಳ್ಳಲು ಆದಾಯ ತೆರಿಗೆ ಇಲಾಖೆಯ ವೆಬ್‌ಸೈಟ್‌ನಿಂದ ಆದಾಯ ತೆರಿಗೆ ರಿಟರ್ನ್ಸ್‌ಗಳನ್ನು ಮತ್ತು ನಮೂನೆ 26AS ಗಳನ್ನು ಬ್ಯಾಂಕಿನಲ್ಲಿಯೇ ಬ್ಯಾಂಕಿನ ಅಧಿಕಾರಿಗಳ ಸಮಕ್ಷಮದಲ್ಲಿ ಅರ್ಜಿದಾರರಿಂದ ಡೌನ್‌ಲೋಡ್ ಮಾಡಿಸಿಕೊಳ್ಳುವುದು ಸೂಕ್ತ.

**ಅನುವರ್ತನೆ : ಕ್ರಮಕೈಗೊಳ್ಳಲಾಗುವುದು.**

7. ಕ್ರೆಡಿಟ್ ರೇಟಿಂಗ್‌ನಲ್ಲಿ ಹೈರಿಸ್ಕ್ /ವೆರಿ ಹೈರಿಸ್ಕ್ ಇದ್ದಾಗ ಅತಿಯಾದ ಮುಂಜಾಗೃತೆಯೊಂದಿಗೆ ನೈಜ ಕಾರಣಗಳನ್ನು ತಿಳಿದುಕೊಂಡು ಮತ್ತು ಆ ಕಾರಣಗಳಿಗೆ ಸೂಕ್ತ ದಾಖಲಾತಿಗಳನ್ನು ಪಡೆದು ಪರಿಶೀಲಿಸಿದ ನಂತರವೇ ಸಾಲ ಮಂಜೂರಾತಿ ಮಾಡುವ ಬಗ್ಗೆ ತೀರ್ಮಾನಿಸುವುದು ಅತ್ಯಗತ್ಯ.

**ಅನುವರ್ತನೆ : ಸೂಕ್ತ ದಾಖಲೆಗಳನ್ನು ಪಡೆದು ಪರಿಶೀಲಿಸಿದ ನಂತರವೇ ಸಾಲ ಮಂಜೂರು ಮಾಡಲಾಗುತ್ತಿದೆ.**

8. ಅನುತ್ಪಾದಕ ಆಸ್ತಿಗಳಿಗೆ ಸಂಬಂಧಿಸಿದಂತೆ ಸಾಲಗಾರರು ಭದ್ರತೆಯಾಗಿ ನೀಡಿರುವ ಆಸ್ತಿಗಳ ಮೌಲ್ಯವನ್ನು ಪ್ರತಿ 3 ವರ್ಷಗಳಿಗೊಮ್ಮೆ ಪುನರ್ ಮೌಲ್ಯೀಕರಿಸುವ ಕ್ರಮ ಅಗತ್ಯ.

**ಅನುವರ್ತನೆ : ಪುನರ್ ಮೌಲ್ಯೀಕರಿಸುವ ಪದ್ಧತಿ ಜಾರಿಯಲ್ಲಿದೆ.**

9. ಗೃಹ ನಿರ್ಮಾಣ ಸಾಲಗಳಲ್ಲಿ ಹಂತ ಹಂತವಾಗಿ ಸಾಲ ಬಿಡುಗಡೆ ಮಾಡುವಾಗ ಮೌಲ್ಯಮಾಪಕರ ಪ್ರಮಾಣ ಪತ್ರ ಪಡೆದು ಸಾಲ ವಿತರಿಸುವುದು ಸೂಕ್ತ.

**ಅನುವರ್ತನೆ : ಸಾಲ ಬಿಡುಗಡೆ ಸಂದರ್ಭದಲ್ಲಿ ಅಧಿಕಾರಿಗಳಿಂದ ವರದಿ ಪಡೆದ ನಂತರವೇ ಸಾಲ ಬಿಡುಗಡೆ ಮಾಡಲಾಗುತ್ತಿದೆ.**

10. ಬ್ಯಾಂಕಿನಿಂದ ವ್ಯಾಪಾರ ಉದ್ದೇಶಕ್ಕಾಗಿ ಸಾಲ ನೀಡಿದ ಪ್ರಕರಣಗಳಲ್ಲಿ ಸಾಲದ ಸದುಪಯೋಗದ ಬಗ್ಗೆ ವರದಿ ಪಡೆಯುವುದು ಅವಶ್ಯಕ.

**ಅನುವರ್ತನೆ : ಪಡೆಯಲಾಗುತ್ತಿದೆ.**

11. ಆರ್.ಬಿ.ಐ / ಶಾಸನಬದ್ದ ಲೆಕ್ಕಪರಿಶೋಧಕರು ಗಮನಿಸಿರುವ ಎನ್.ಪಿ.ಎ ಖಾತೆಗಳನ್ನು ಗಣಕಯಂತ್ರದಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕ.

**ಅನುವರ್ತನೆ : ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.**

12. ಐ.ಎಸ್ ಆಡಿಟ್‌ನ ಸಲಹೆ ಸೂಚನೆಗಳನ್ನು ಪಾಲಿಸುವುದು.

**ಅನುವರ್ತನೆ : ಪಾಲಿಸಲಾಗುತ್ತಿದೆ.**

13. ಸಾಲ ಮಂಜೂರಾದ ನಂತರ ಮೇಲ್ವಿಚಾರಣೆ ಮಾಡುವುದು.

**ಅನುವರ್ತನೆ : ಕ್ರಮಕೈಗೊಳ್ಳಲಾಗುವುದು.**

16. ಸಿಬಿಎಸ್‌ನಲ್ಲಿ IRAC ಮಾನದಂಡಗಳ ಗುರುತಿನ ಸಮಗ್ರೀಕರಣ ಮಾಡುವುದು.

**ಅನುವರ್ತನೆ : ಗುರುತಿಸಿ ಸಮಗ್ರಿಕರಣ ಮಾಡಲಾಗುತ್ತಿದೆ.**

17. ಸಾಲಗಳ ತ್ವರಿತ ವಿಫಲತೆಯನ್ನು ಹತ್ತಿಕ್ಕುವುದು.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

18. ಸಾಲಗಳಲ್ಲಿ ಕನಿಷ್ಠ ಶೇ.40ರಷ್ಟು ರೂ.25 ಲಕ್ಷಕ್ಕಿಂತ ಕಡಿಮೆ ಸಮಾನ ಮೌಲ್ಯದ ಸಾಲಗಳ ಗುರಿ ಸಾಧಿಸುವುದು.

**ಅನುವರ್ತನೆ : ಶೇ.31ರಷ್ಟಿದ್ದು ಶೇ.40ರ ಗುರಿಸಾಧಿಸಲು ಕ್ರಮಕೈಗೊಳ್ಳಲಾಗಿದೆ.**

19. ಸಿಬಿಎಸ್‌ನಲ್ಲಿ ಸ್ವಯಂಚಾಲಿತ ಎನ್.ಪಿ.ಎ ಗುರುತಿಸುವುಕೆಯನ್ನು ಕಾರ್ಯಗತಗೊಳಿಸುವುದು.

**ಅನುವರ್ತನೆ : ಸಿಬಿಎಸ್ ನಲ್ಲಿ ಸ್ವಯಂಚಾಲಿತವಾಗಿ ಎನ್.ಪಿ.ಎ ಖಾತೆಗಳನ್ನು ಗುರುತಿಸಲಾಗುತ್ತಿದೆ.**

20. ಸೈಬರ್ ಭದ್ರತಾ ಮೆಲಕು ರೂಪುರೇಷೆಯನ್ನು ಅನುಷ್ಠಾನಗೊಳುಸುವುದು.

**ಅನುವರ್ತನೆ : ಅನುಷ್ಠಾನಗೊಳಿಸಲಾಗಿದೆ.**

21. ಬ್ಯಾಂಕಿನ ದೀರ್ಘಕಾಲಿನ ದೃಷ್ಟಿಕೋನ ಅಥವಾ ಗುರಿಗಳನ್ನು ರೂಪಿಸುವುದು.

**ಅನುವರ್ತನೆ : ರೂಪಿಸಿಕೊಳ್ಳಲಾಗಿದೆ.**

22. "ಆಭರಣಗಳು ವೈಯಕ್ತಿಕ ಆಸ್ತಿ" ಎಂದು ಸಾಲಗಾರರಿಂದ ಘೋಷಣೆಯನ್ನು ಪಡೆಯುವುದು.

**ಅನುವರ್ತನೆ : ಪಡೆಯಲಾಗುತ್ತಿದೆ.**

23. ಬಂಗಾರದ ಮೌಲ್ಯಮಾಪನಕ್ಕಾಗಿ ಬಂಗಾರದ ಶುದ್ಧತೆ, ಲಭ್ಯತೆ ಮತ್ತು ಮೌಲ್ಯ ನಿಗದಿಗೆ ಅನುಸರಿಸಲಾದ ವಿಧಾನಗಳ ಬಗ್ಗೆ ಮೌಲ್ಯ ನಿರ್ಧಾರಕರಿಂದ ದೃಢೀಕರಣ ಪಡೆಯುವುದು.

**ಅನುವರ್ತನೆ : ಪಡೆಯಲಾಗುತ್ತಿದೆ.**

24. ನಿಷ್ಕ್ರಿಯ ಖಾತೆಗಳ ವಾರ್ಷಿಕ ವಿಮರ್ಶೆ ನಡೆಸುವುದು.

**ಅನುವರ್ತನೆ : ವಿಮರ್ಶೆ ಮಾಡಲಾಗುತ್ತಿದೆ.**

25. ಬ್ಯಾಂಕ್ ಚಟುವಟಿಕೆಗಳಿಗೆ ಸಿಬ್ಬಂದಿಯ ಪರಿವರ್ತನೆ (Rotation) ಪಾಲಿಸಬೇಕು.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

26. ಕೊಟ್ಟ ಸಾಲಗಳ ಅಂತಿಮ ಬಳಕೆಯನ್ನು ಖಚಿತಪಡಿಸುವುದು.

**ಅನುವರ್ತನೆ : ಖಚಿತಪಡಿಸಿಕೊಳ್ಳಲಾಗುತ್ತಿದೆ.**

27. ಹೊಸ ಸ್ಲಿಪೇಜುಗಳು ಮತ್ತು ಎನ್.ಪಿ.ಎ ಗಳ ಏರಿಕೆಯ ದೃಷ್ಟಿಯಿಂದ ಬ್ಯಾಂಕ್ ತನ್ನ ಕ್ರೆಡಿಟ್ ವಿಭಾಗದಲ್ಲಿ ಉದಯಿಸುತ್ತಿರುವ ಅಪಾಯಗಳನ್ನು ತಡೆಗಟ್ಟಲು ಸೂಕ್ತ ಯುಕ್ತ ತಂತ್ರಗಳನ್ನು ರೂಪಿಸಬೇಕು.

**ಅನುವರ್ತನೆ : ರೂಪಿಸಿಕೊಳ್ಳಲಾಗಿದೆ.**

28. ಸಿಬಿಎಸ್‌ನಲ್ಲಿ ನಿಯತಾಂಕ (Parameter) ಬದಲಾವಣೆಗಳಿಗೆ ಅನುಮೋಧನಾ ಪ್ರಕ್ರಿಯೆ (Maker- Cheker Authorization) ಜಾರಿಗೆ ತರಬೇಕು ಮತ್ತು ಸಿಬಿಎಸ್ ಸರ್ವರ್ ನಿಯತಾಂಕವನ್ನು ಸ್ಥಾಯಿ ಸಿಬ್ಬಂದಿಯ ಬದಲು ಕಾಂಟ್ರಾಂಕ್ಟ್ ಸಿಬ್ಬಂದಿಗೆ ನಿಯೋಜಿಸಲಾಗಿದೆ. ಈ ರೀತಿಯ ಅಂದಾಜು ಪದ್ಧತಿ ಸಿಬ್ಬಂದಿ ಜವಾಬ್ದಾರಿತನದ ಸಮಸ್ಯೆಗಳಿಗೆ ದಾರಿ ಮಾಡಿಕೊಡಬಹುದು. ಏಕೆಂದರೆ ಕಂಟ್ರಾಕ್ಟ್ ನೌಕರರು ಸ್ಥಾಯಿ ಸಿಬ್ಬಂದಿಗೆ ಅನ್ವಯವಾಗುವ ಅಂತರ್ಗತ ನಿಯಂತ್ರಣ ಮತ್ತು ಹೊಣೆಗಾರಿಕೆ ಮಟ್ಟಕ್ಕೆ ಒಳಪಡದೆ ಇರಬಹುದು.

**ಅನುವರ್ತನೆ : ಕಂಪ್ಯೂಟರ್ ವಿಭಾಗದ ಸಿಬ್ಬಂದಿಗಳು ವಯೋ ನಿವೃತ್ತಿ ಹೊಂದಿದ್ದು ಕಂಟ್ರಾಕ್ಟರ್ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಿದೆ. ಹೊಸ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.**

29. ಆರ್.ಬಿ.ಐ ಮಾರ್ಗ ಸೂಚಿ ಪ್ರಕಾರ ಆಭರಣ ರಿಜಿಸ್ಟರ್‌ನಲ್ಲಿ ಸಾಲಗಾರರ ಹೆಸರು, ವಿಳಾಸ ಮತ್ತು ಒತ್ತೆಯಿಟ್ಟ ಆಭರಣಗಳ ಮತ್ತು ತೂಕದ ವಿವರಗಳನ್ನು ದಾಖಲಿಸಬೇಕು.

**ಅನುವರ್ತನೆ : ಆಭರಣ ರಿಜಿಸ್ಟರ್‌ನಲ್ಲಿ ವಿವರಗಳನ್ನು ದಾಖಲಿಸಲಾಗುತ್ತಿದೆ.**

30. ನಿಷ್ಕ್ರಿಯ ಉಳಿತಾಯ/ ಚಾಲ್ತಿ ಖಾತೆಗಳ ಮೊತ್ತವನ್ನು CBS ನಲ್ಲಿ ಸ್ವಯಂಚಾಲಿತವಾಗಿ ವರ್ಗೀಕರಿಸಲು ಕ್ರಮಕೈಗೊಳ್ಳಬೇಕು.

**ಅನುವರ್ತನೆ : ಸ್ವಯಂಚಾಲಿತವಾಗಿ ವರ್ಗೀಕರಿಸಲಾಗುತ್ತಿದೆ.**

31. ನೆಟ್‌ವರ್ಕ್ ಇರುವ ಸ್ಥಳದಲ್ಲಿ ನೆಟ್‌ವರ್ಕ್‌ನ ಕೇಬಲ್ ಡ್ರಾಯಿಂಗ್ ಅಳವಡಿಸಲು ಕ್ರಮಕೈಗೊಳ್ಳಬೇಕು.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

32. ಕಂಪ್ಯೂಟರ್‌ಗಳಲ್ಲಿ ಅಗತ್ಯವಿಲ್ಲದ USB ಪೋರ್ಟ್‌ಗಳನ್ನು ನಿಷ್ಕ್ರಿಯಗೊಳಿಸುವುದು.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

33. EDP ವಿಭಾಗದ ಸಿಬ್ಬಂದಿಗಳು ನಿರ್ವಹಿಸಬೇಕಾದ ಕೆಲಸ ಮತ್ತು ಜವಾಬ್ದಾರಿಗಳನ್ನು ನಿಗಧಿ ಪಡಿಸಿರುವುದಿಲ್ಲ.

**ಅನುವರ್ತನೆ : ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ.**

34. ಬ್ಯಾಂಕಿನ ಸಿಬ್ಬಂದಿಗಳಿಗೆ ಮಾಹಿತಿ ಮತ್ತು ಸೈಬರ್ ಭದ್ರತೆ ಬಗ್ಗೆ ಹೆಚ್ಚಿನ ಅರಿವು ಮಂಡಿಸಲು RBI ಮತ್ತು IDRBT ಇವರು ನಡೆಸುವ ತರಭೇತಿ ಕಾರ್ಯಕ್ರಮಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸುವುದು.

**ಅನುವರ್ತನೆ : ತರಭೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗುತ್ತಿದೆ.**

35. ಶಾಖೆಗಳು ಸೈಬರ್ ಭದ್ರತಾ ಬೆದರಿಕೆಗಳಿಗೆ ನಿಗವಾಹಿಸತಕ್ಕದ್ದು.

**ಅನುವರ್ತನೆ : ನಿಗವಾಹಿಸಲಾಗುತ್ತಿದೆ.**

36. ಬ್ಯಾಂಕಿನ ಸಿಬ್ಬಂದಿಗಳಿಗೆ ಸೈಬರ್ ಭದ್ರತಾ ತರಭೇತಿ ನೀಡಬೇಕು ಮತ್ತು ಡೇಟಾ ಭದ್ರತೆಗೆ ಸಂಭಾವ್ಯ ಬೆದರಿಕೆಗಳ ಬಗ್ಗೆ ಶಿಕ್ಷಣ ನೀಡಬೇಕು.

**ಅನುವರ್ತನೆ : ತರಭೇತಿ ನೀಡಲಾಗಿದೆ.**

37. 10 ವರ್ಷಗಳ ಅವಧಿ ಮುಗಿದ ಠೇವಣಿಗಳನ್ನು ಆರ್.ಬಿ.ಐ ನ DEAF ಖಾತೆಗೆ ವರ್ಗಾಯಿಸುವರೆಗೆ ಕಾಯಿದೆ ಗ್ರಾಹಕರುಗಳನ್ನು ಪತ್ತೆಹಚ್ಚಿ ಮೊತ್ತವನ್ನು ವಿಲೇವಾರಿ ಮಾಡಬೇಕು.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

| 37) ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳು:– | | | |
|---|---|---|---|
| ಕ್ರ ಸಂ | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ | ನ್ಯೂನತೆಯ ಸಂಕ್ಷಿಪ್ತ ವಿವರ |
| 1 | 13 | 94 | ಸದಸ್ಯತ್ವದ ಕೆಲವೊಂದು ಅರ್ಜಿಗಳನ್ನು ಪರಿಶೀಲಿಸಲಾಗಿದೆ. ಕೆವೈಸಿ ನಿಯಮಗಳನ್ವಯ ಪಡೆಯಬೇಕಾದ ದಾಖಲಾತಿಗಳನ್ನು ಪಡೆದಿದ್ದು ಹಿಂದಿನ ಸಾಲಿನ ಕೆಲವೊಂದು ಸದಸ್ಯರಿಂದ ಕೆವೈಸಿ ದಾಖಲಾತಿಗಳನ್ನು ಪಡೆಯಲು ಬಾಕಿ ಇರುತ್ತದೆ.<br>**ಅನುವರ್ತನೆ : ಹೊಸ ಸದಸ್ಯರಿಂದ ಕೆವೈಸಿ ದಾಖಲೆಗಳನ್ನು ಪಡೆಯಲಾಗಿದೆ. ಪ್ರಾರಂಭದಲ್ಲಿ ಸದಸ್ಯತ್ವ ಪಡೆದ ಕೆಲವು ಸದಸ್ಯರಿಂದ ಕೆವೈಸಿ ದಾಖಲೆಗಳನ್ನು ಪಡೆಯಲು ಬಾಕಿ ಇದ್ದು ಪ್ರತಿ ವರ್ಷ ವಾರ್ಷಿಕ ಮಹಾ ಸಭೆಯ ಸೂಚನಾ ಪತ್ರ, ಎಸ್.ಎಂ.ಎಸ್.ಮೂಲಕ ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಕೆ.ವೈ.ಸಿ ದಾಖಲೆಗಳನ್ನು ಸಲ್ಲಿಸುವಂತೆ ಕೋರಲಾಗಿದೆ ಹಾಗೂ ಸಿಬ್ಬಂದಿಗಳ ಪ್ರತ್ಯೇಕ ತಂಡ ರಚಿಸಿ ಕೆ.ವೈ.ಸಿ ದಾಖಲೆಗಳನ್ನು ಸಂಗ್ರಹಿಸಲು ಕ್ರಮಕೈಗೊಳ್ಳಲಾಗಿದೆ.** |
| 2 | 24 ಎಫ್ | 116–121 | ಸಾಲದ ಖಾತೆಗಳಲ್ಲಿ ಕಂಡುಬಂದ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮ ಅಗತ್ಯ.<br>**ಅನುವರ್ತನೆ : ಕ್ರಮಕ್ಯಗೊಳ್ಳಲಾಗಿದೆ.** |
| 3 | 27 | 136 | 3 ವರ್ಷಕ್ಕೂ ಮೇಲ್ಪಟ್ಟ ಇತರೆ ಆಸ್ತಿಗಳಲ್ಲಿರುವ ಮೊತ್ತವನ್ನು ಗುರುತಿಸಿ ಆ ಮೊತ್ತಕ್ಕೆ ಅವಕಾಶ ಕಲ್ಪಿಸಲು ಕ್ರಮಕೈಗೊಳ್ಳಬೇಕು.<br>**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.** |
| 4 | 33(ಸಿ)(9) | 150–151 | ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಛಿಸುವ ಇತರೆ ವಿಷಯಗಳ ಬಗ್ಗೆ.<br>**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.** |
| 5 | 36 | 155–159 | ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು.<br>**ಅನುವರ್ತನೆ : ಸಲಹೆ ಹಾಗೂ ಸೂಚನೆಗಳು ಪಾಲಿಸಲಾಗುವುದು.** |

| 38) **ಕಡ್ಡಾಯ ಲಗತ್ತುಗಳು :** | | |
|---|---|---|
| 1 | ಜಮಾ ಖರ್ಚು ತಃಖ್ತೆ | ಲಗತ್ತಿಸಿದೆ |
| 2 | ವ್ಯಾಪಾರ ತಃಖ್ತೆ | ಅನ್ವಯವಾಗುವುದಿಲ್ಲ |
| 3 | ಲಾಭ–ಹಾನಿ ತಃಖ್ತೆ | ಲಗತ್ತಿಸಿದೆ |
| 4 | ಆಸ್ತಿ–ಜವಾಬ್ದಾರಿ ತಃಖ್ತೆ | ಲಗತ್ತಿಸಿದೆ |
| 5 | ಕುಳುವಾರು ಪಟ್ಟಿಗಳು, ದೃಢೀಕರಣಗಳು, ಬ್ಯಾಂಕ್ ಸಮನ್ವಯ ತಃಖ್ತೆ | ಲಗತ್ತಿಸಿದೆ |
| 6 | ಹಿಂದಿನ ಸಾಲಿನ ಆಸ್ತಿ–ಜವಾಬ್ದಾರಿ ತಃಖ್ತೆಯ ಛಾಯಾ ಪ್ರತಿಯನ್ನು ಲೆಕ್ಕಪರಿಶೋಧಕರು ದೃಢೀಕರಿಸಿ ಕಡ್ಡಾಯವಾಗಿ ವರದಿಗೆ ಲಗತ್ತಿಸತಕ್ಕದ್ದು. | ಲಗತ್ತಿಸಿದೆ |

ಮೆಃ ಗಿರೀಶ ವಿಜಯ್ ಅಂಡ್ ಅಸೋಸಿಯಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಸಂಸ್ಥೆ ನೊಂದಣಿ ಸಂಖ್ಯೆ: 014117S

ದಿನಾಂಕ: 25.06.2026
ಸ್ಥಳ : ಬೆಂಗಳೂರು

ಸಹಿ/–
(ಗಿರೀಶ ಟಿ.ಎಲ್)
ಪಾಲುದಾರರು
UDIN : 26230764RBUZTR9896

**ಅನುಬಂಧ–1**

**(ಕರ್ನಾಟಕ ರಾಜ್ಯ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಲೆಪಶಾ/ಸಸಬ್ಯಾ/3/2006–07 ದಿನಾಂಕ: 22–06–2006ಕ್ಕೆ ಅನುಬಂಧ)**

## <u>ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ</u>

## <u>ಲೆಕ್ಕಪರಿಶೋಧನಾ ವರದಿ ವಿಸ್ತೃತ ನಮೂನೆ (LFAR)</u>

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಜಯನಗರ ಬೆಂಗಳೂರು ಜಿಲ್ಲೆ
2021–2022ನೇ ಸಾಲಿನ

## ಲೆಕ್ಕಪರಿಶೋಧನಾ ವರದಿ

**ಭಾಗ–1**

| | | |
|---|---|---|
| **(ಹಣ ದುರುಪಯೋಗ ಹಾಗೂ ಇನ್ನಿತರ ಗಂಭೀರ ನ್ಯೂನತೆಗಳಿಗೆ ಕಂಡಿಕೆ ಸಂಖ್ಯೆ 28 ನೋಡುವುದು)** | | |
| 1 | ಎ) ಬ್ಯಾಂಕಿನ ಹೆಸರು | ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ. |
| | ತಾಲ್ಲೂಕು | ಬೆಂಗಳೂರು |
| | ಜಿಲ್ಲೆ | ಬೆಂಗಳೂರು |
| | ಶಾಖೆಗಳ ಸಂಖ್ಯೆ | 08 |
| 2 | ಎ) ನೋಂದಣಿ ಸಂಖ್ಯೆ ಮತ್ತು ದಿನಾಂಕ | ನೋಂದಣಿ ಸಂಖ್ಯೆ: ಸಿ4/ಆರ್‌ಸಿಎಸ್/2764/74–75<br>ದಿನಾಂಕ: 21.08.1974 |
| | ಬಿ) ಆರ್.ಬಿ.ಐ. ಯವರ ಲೈಸನ್ಸ್ ಸಂಖ್ಯೆ ಮತ್ತು ದಿನಾಂಕ | |
| | ಆಡಳಿತ ಕಛೇರಿ/ಜಯನಗರ ಶಾಖೆ | ಎ.ಸಿ.ಡಿ.ಎಮ್.ವೈ 50 ಪಿ ದಿನಾಂಕ : 03–01–1975 |
| | ಮತ್ತೀಕೆರೆ ಶಾಖೆ | ಯುಬಿಡಿ (ಬಿ ಎಲ್) 1987 ದಿನಾಂಕ : 27–11–1987 |
| | ವಿಜಯನಗರ ಶಾಖೆ | ಯುಬಿಡಿ (ಬಿ ಎಲ್) (6243) 07–01/95–96<br>ದಿನಾಂಕ : 25–06–1996 |
| | ಇಂದಿರಾನಗರ ಶಾಖೆ | ಯುಬಿಡಿ (ಬಿ ಎಲ್) (1452) 07–01–01/96–97<br>ದಿನಾಂಕ : 25–11–1996 |
| | ಕೆಂಗೇರಿ ಶಾಖೆ | ಯುಬಿಡಿ (ಬಿ ಎಲ್) 196 ದಿನಾಂಕ : 29–03–1997 |
| | ಯಲಹಂಕ ಶಾಖೆ | ಯುಬಿಡಿ (ಬಿ ಎಲ್) 3151 ಪಿ ಒ ಕೆ<br>ದಿನಾಂಕ : 09–02–1998 |
| | ಬಿ.ಇ.ಎಸ್. ಕಾಲೇಜು ಶಾಖೆ | ಯುಬಿಡಿ (ಬಿ ಎಲ್) 3556/07.02.013/2008–09<br>ದಿನಾಂಕ : 03–03–2009 |
| | ಬೇಗೂರು ಶಾಖೆ | ಡಿ.ಸಿ.ಬಿ.ಎಸ್. (ಬಿ ಎಲ್) (1414) 07–02–013/2017–18<br>ದಿನಾಂಕ : 07–12–2017 |

| | | |
|---|---|---|
| 3 | ಬ್ಯಾಂಕಿನ ಪದಾಧಿಕಾರಿಗಳ ಹೆಸರು | |
| | 1) ಅಧ್ಯಕ್ಷರು | ಶ್ರೀ ಕೆ.ಎಸ್.ಸುಧಾಕರ್ |
| | 2) ಉಪಾಧ್ಯಕ್ಷರು | ಶ್ರೀ ಜೆ.ಎಂ.ಜಯಪ್ರಕಾಶ್ |
| | ಮುಖ್ಯಕಾರ್ಯನಿರ್ವಾಹಣಾಧಿಕಾರಿ | ಶ್ರೀ ಜಿ.ವೆಂಕಟೇಶ್ (ಪ್ರಭಾರ) |
| 4 | ಹಿಂದಿನ ಸಾಲಿಗೆ ಬ್ಯಾಂಕಿನ ಲೆಕ್ಕ ಪರಿಶೋಧನೆ ಮಾಡಿದ ಅಧಿಕಾರಿಯ ಹೆಸರು, ಹುದ್ದೆ ಹಾಗೂ ಅವಧಿ | ಮೆ: ಗಿರೀಶ ವಿಜಯ್ ಅಂಡ್ ಕೋ.<br>ಚಾರ್ಟರ್ಡ್ ಅಕೌಂಟೆಂಟ್<br>ನಂ. 3072, 7ನೇ ಮಹಡಿ, ಹೈಪಾಯಿಂಟ್ 3, ಚಾಲುಕ್ಯ ಹೋಟೆಲ್ ಹತ್ತಿರ, ಬೆಂಗಳೂರು 560001.<br>2024–25 |
| 5 | ಎ) ಪ್ರಸಕ್ತ ಸಾಲಿಗೆ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿದ ಅಧಿಕಾರಿಯ ಹೆಸರು, ಹುದ್ದೆ ಹಾಗೂ ಅವಧಿ | ಮೆ: ಗಿರೀಶ ವಿಜಯ್ ಅಂಡ್ ಕೋ.<br>ಚಾರ್ಟರ್ಡ್ ಅಕೌಂಟೆಂಟ್<br>ನಂ.3072, 7ನೇ ಮಹಡಿ, ಹೈಪಾಯಿಂಟ್ 3, ಚಾಲುಕ್ಯ ಹೋಟೆಲ್ ಹತ್ತಿರ, ಬೆಂಗಳೂರು 560001<br>2025–26 |
| | ಬಿ) ಲೆಕ್ಕಪರಿಶೋಧನೆ ಮಾಡಲು ನೀಡಿದ ಆದೇಶ ಸಂಖ್ಯೆ ಮತ್ತು ದಿನಾಂಕ | ಬಿಸಿಬಿ/831/2025–26 ದಿನಾಂಕ:31.10.2025 |

**6 ಸಂಘದ ಲೆಕ್ಕಪುಸ್ತಕಗಳನ್ನು ಹಾಜರು ಪಡಿಸಿದವರ ಹೆಸರು ಮತ್ತು ಹುದ್ದೆ,**

| **ಹೆಸರು** | **ಹುದ್ದೆ** | **ಕಛೇರಿ** |
|---|---|---|
| 1. ಶ್ರೀ ಜಿ.ವೆಂಕಟೇಶ್ | ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ) | ಪ್ರಧಾನ ಕಛೇರಿ |
| 2. ಶ್ರೀ ಜಗದೀಶ್ ಚಂದ್ರಬಾಬು | ಶಾಖಾ ಹಿರಿಯ ವ್ಯವಸ್ಥಾಪಕರು (ಪ್ರಭಾರ) | ಪ್ರಧಾನ ಕಛೇರಿ |
| 3. ಶ್ರೀಮತಿ ಕೆ.ಆರ್.ಮಂಜುಳ | ಶಾಖೆ ವ್ಯವಸ್ಥಾಪಕರು (ಪ್ರಭಾರ) | ಮತ್ತೀಕೆರೆ ಶಾಖೆ |
| 4. ಶ್ರೀಮತಿ ಬಿ.ಎಲ್ ಜಾನಕಿ ದೇವಿ | ಶಾಖೆ ವ್ಯವಸ್ಥಾಪಕರು (ಪ್ರಭಾರ) | ವಿಜಯನಗರ ಶಾಖೆ |
| 5. ಶ್ರೀ ಕೆ.ಎಂ. ರೇಣುಕಾನಂದ | ಶಾಖೆ ವ್ಯವಸ್ಥಾಪಕರು (ಪ್ರಭಾರ) | ಇಂದಿರಾನಗರ ಶಾಖೆ |
| 6. ಶ್ರೀಮತಿ ಆರ್. ಜಯಲಕ್ಷ್ಮಿ | ಶಾಖೆ ವ್ಯವಸ್ಥಾಪಕರು (ಪ್ರಭಾರ) | ಕೆಂಗೇರಿ ಶಾಖೆ |
| 7. ಶ್ರೀ ಡಿ.ಎಸ್. ರವೀಂದ್ರ | ಶಾಖೆ ವ್ಯವಸ್ಥಾಪಕರು (ಪ್ರಭಾರ) | ಯಲಹಂಕ ಶಾಖೆ |
| 8. ಶ್ರೀಮತಿ ಕೆ.ಎಸ್. ವಿನುತ | ಶಾಖೆ ವ್ಯವಸ್ಥಾಪಕರು (ಪ್ರಭಾರ) | ಬಿ.ಇ.ಎಸ್.ಕಾಲೇಜು ಶಾಖೆ |
| 9. ಶ್ರೀ ಬಿ.ಆರ್.ಸೋಹನ್ ಕುಮಾರ್ | ಶಾಖೆ ವ್ಯವಸ್ಥಾಪಕರು (ಪ್ರಭಾರ) | ಬೇಗೂರು ಶಾಖೆ |

ಶಾಖೆಗಳಲ್ಲಿ ಶಾಖಾ ವ್ಯವಸ್ಥಾಪಕರು ಹಾಗೂ ಅವರ ಅಂದಿನ ಸಿಬ್ಬಂದಿ ವರ್ಗ ಲೆಕ್ಕಪರಿಶೋಧನೆಗೆ ದಾಖಲಾತಿಗಳನ್ನು ಒದಗಿಸಿರುತ್ತಾರೆ.

<table>
<tr><td>7</td><td>ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ಅವಧಿ<br>ಲೆಕ್ಕಪರಿಶೋಧನೆ ಪ್ರಾರಂಭಿಸಿದ ದಿನಾಂಕ<br>ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ದಿನಾಂಕ<br>ಲೆಕ್ಕಪರಿಶೋಧನೆಗೆ ತೆಗೆದುಕೊಂಡ ದಿನಗಳು</td><td>ಲೆಕ್ಕ ಪರಿಶೋಧನೆಯ ಆರಂಭದ ದಿನಾಂಕ : 21.05.2026<br>ಲೆಕ್ಕ ಪರಿಶೋಧನೆಯ ಮುಕ್ತಾಯದ ದಿನಾಂಕ : 25.06.2026<br>ಲೆ.ಪ.ಗೆ ತೆಗೆದುಕೊಂಡ (ಮಾನವ) ದಿನಗಳು : 60 ದಿನಗಳು</td></tr>
<tr><td>8</td><td>ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ</td><td></td></tr>
<tr><td></td><td>ಎ) ಹಿಂದಿನ ಸಾಲು/ಸಾಲುಗಳ ಲೆಕ್ಕ ಪರಿಶೋಧನೆಯಲ್ಲಿ ಕಾಣಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡ ಬಗ್ಗೆ ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿದೆಯೇ?</td><td>ಹಿಂದಿನ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಕಾಣಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡ ಬಗ್ಗೆ ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿದೆ.</td></tr>
<tr><td></td><td>ಬಿ) ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿ ಕೊಳ್ಳಲಾಗಿದೆಯೇ? (ಉಳಿದ ಪ್ರಮುಖ ನ್ಯೂನ್ಯತೆಗಳ ಬಗ್ಗೆ ವಿವರ ನೀಡುವುದು)</td><td>ಸರಿಪಡಿಸಿಕೊಳ್ಳದೇ ಮುಂದುವರೆದ ಪ್ರಮುಖ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲಾಗಿದ್ದು, ಗಂಭೀರ ಸ್ವರೂಪದ ಆಕ್ಷೇಪಣೆಗಳು ಇರುವುದಿಲ್ಲ.</td></tr>
<tr><td></td><td>ಸಿ) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.
<table>
<tr><td>ಕ್ರ ಸಂ</td><td>ವರದಿ ವರ್ಷ</td><td>ಪುಟ ಸಂಖ್ಯೆ</td><td>ಕಂಡಿಕೆ ಸಂಖ್ಯೆ</td><td>ನ್ಯೂನ್ಯತೆಗಳ ಸಂಕ್ಷಿಪ್ತ</td><td>ಷರಾ</td></tr>
<tr><td></td><td></td><td></td><td></td><td></td><td></td></tr>
</table></td><td></td></tr>
<tr><td>9</td><td>ಬ್ಯಾಂಕ್ ಅಧಿಕೃತ ಉಪನಿಯಮ, ಕಾಯಿದೆ, ನಿಯಮಗಳ ಪ್ರತಿಗಳನ್ನು ಹೊಂದಿದೆಯೇ? ಉಪನಿಯಮಗಳ ಅಥವಾ ಕಾಯಿದೆ ನಿಯಮಗಳ ಉಲ್ಲಂಘನೆಯಾಗಿದ್ದಲ್ಲಿ ಅವುಗಳ ವಿವರ ನೀಡುವುದು.</td><td>ಬ್ಯಾಂಕ್ ಅಧಿಕೃತ ಉಪನಿಯಮ ಕಾಯಿದೆ ನಿಯಮಗಳ ಪ್ರತಿಗಳನ್ನು ಹೊಂದಿದೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ ನಿಯಮಗಳ ಪಾಲನೆ ಒಟ್ಟಾರೆಯಾಗಿ ಸಮರ್ಪಕವಾಗಿರುತ್ತದೆ. ನಮಗೆ ಲೋಪಗಳೇನಾದರೂ ಕಂಡುಬಂದಿದ್ದಲ್ಲಿ ಅವುಗಳನ್ನು ಈ ವರದಿಯ ಆಯಾಯ ಕಂಡಿಕೆಯಲ್ಲಿ ವಿವರಿಸಲಾಗಿದೆ.</td></tr>
</table>

| | | |
|---|---|---|
| | ಆಂತರಿಕ ಲೆಕ್ಕಪರಿಶೋಧನೆ ಹಾಗೂ ಸದರಿ ವರದಿಯ ಪರಿಶೀಲನೆ ಹಾಗೂ ಅನುಸರಣೆ ಆಗಿದೆಯೇ? | ಸಮವರ್ತಿತ ಲೆಕ್ಕಪರಿಶೋಧಕರು ಶಾಖೆಗಳ ಲೆಕ್ಕಪರಿಶೋಧನೆಯನ್ನು ಪ್ರತಿ ಮಾಸಿಕವಾಗಿ ಮಾಡಿ ವರದಿಗಳನ್ನು ಸಲ್ಲಿಸಿರುತ್ತಾರೆ. ಸಮವರ್ತಿತ ಲೆಕ್ಕಪರಿಶೋಧನಾ ವರದಿಯಲ್ಲಿ ಗಂಭೀರ ಸ್ವರೂಪದ ನ್ಯೂನ್ಯತೆಗಳು ಇರುವುದಿಲ್ಲ. |

**ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಪ್ರಮುಖ ಪುಸ್ತಕಗಳ ವಿವರ**

**ಭಾಗ – 2**

| | | |
|---|---|---|
| 10 | ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಪ್ರಮುಖ ಪುಸ್ತಕಗಳ ವಿವರ | ಗಣಕಯಂತ್ರದಲ್ಲಿ ನಗದು ಪುಸ್ತಕ ಮತ್ತು ಇತರೆ ಬ್ಯಾಂಕಿನ ಹಾಗೂ ಗ್ರಾಹಕರ ಖಾತೆಗಳನ್ನು ಪರೀಕ್ಷಾರ್ಥ ಆಧಾರದ ಮೇಲೆ ಸಂಬಂಧಪಟ್ಟ ದಾಖಲಾತಿ ಮತ್ತು ವೋಚರ್‌ಗಳೊಂದಿಗೆ ಪರಿಶೀಲಿಸಲಾಗಿದೆ. |
| 11 | ಸದಸ್ಯತ್ವ: | |
| | ಎ) ವರ್ಷದ ಪ್ರಾರಂಭದಲ್ಲಿದ್ದ ಸದಸ್ಯರು | 38685 |
| | ಬಿ) ವರದಿ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು | 245 |
| | ಸಿ) ವರದಿ ಸಾಲಿನಲ್ಲಿ ಸದಸ್ಯತ್ವ ಹಿಂದಕ್ಕೆ ಪಡೆದವರು | 434 |
| | ಡಿ) ವರದಿ ಸಾಲಿನ ಆಖೈರಿಗೆ ಇರತಕ್ಕ ಸದಸ್ಯರು | 38496 |

(ಹಿಂದಿನ ಎರಡು ಸಾಲುಗಳು ಹೋಲಿಕೆಯ ವಿವರಗಳನ್ನು ನೀಡುವುದು)

| ಸದಸ್ಯತ್ವ | 31.03.2024ರ ಅಂತ್ಯಕ್ಕೆ | 31.03.2025ರ ಅಂತ್ಯಕ್ಕೆ | 31.03.2026ರ ಅಂತ್ಯಕ್ಕೆ |
|---|---|---|---|
| ವರ್ಷದ ಪ್ರಾರಂಭದಲ್ಲಿದ್ದ ಸದಸ್ಯರು | 45238 | 46581 | 38685 |
| ವರದಿ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು | 2194 | 293 | 245 |
| ವರದಿ ಸಾಲಿನಲ್ಲಿ ಸದಸ್ಯತ್ವ ಹಿಂದಕ್ಕೆ ಪಡೆದವರು | 851 | 8189 | 434 |
| ವರದಿ ಸಾಲಿನ ಆಖೈರಿಗೆ ಇರತಕ್ಕ ಸದಸ್ಯರು | 46581 | 38685 | 38496 |

| | | |
|---|---|---|
| 12 | ಸದಸ್ಯತ್ವದ ಬಗ್ಗೆ ವಿಮರ್ಶೆ | 2024–25ನೇ ಸಾಲಿನ ಅಂತ್ಯಕ್ಕೆ ಹೋಲಿಸಿದಾಗ 2025–26ನೇ ಸಾಲಿನಲ್ಲಿ ಒಟ್ಟು ಸದಸ್ಯರ ಸಂಖ್ಯೆಯಲ್ಲಿ : 189 ಕಡಿಮೆಯಾಗಿರುತ್ತದೆ. |

| | | |
|---|---|---|
| 13 | **ಷೇರು ಬಂಡವಾಳ:** | |
| | ದಿನಾಂಕ 31–03–2026ರ ಅಂತ್ಯಕ್ಕೆ ಪಾವತಿಯಾದ ಷೇರು ಬಂಡವಾಳ | 1. ಅಧಿಕೃತ ಷೇರು ಬಂಡವಾಳವು ರೂ.500 ಮುಖ ಬೆಲೆಯ ಮೂರು ಲಕ್ಷ ಷೇರುಗಳ ಒಟ್ಟು ಮೊಬಲಗು ರೂ.15 ಕೋಟಿಗಳಾಗಿರುತ್ತದೆ. ದಿನಾಂಕ 31.03.2026ರ ಅಂತ್ಯಕ್ಕೆ ಸಂದಾಯವಾದ ಷೇರು ಬಂಡವಾಳವು ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿರುತ್ತದೆ.<br><br>2. ಬ್ಯಾಂಕಿನ ಉಪನಿಯಮ 10ರನ್ವಯ ಪ್ರತಿ ಷೇರಿನ ಮುಖಬೆಲೆಯು 500 ರೂಪಾಯಿ ಇರುತ್ತದೆ. 6878 ಸದಸ್ಯರು ರೂ.500ಕ್ಕಿಂತ ಕಡಿಮೆ ಷೇರು ಮೊಬಲಗನ್ನು ಹೊಂದಿರುತ್ತಾರೆ. |

| ಷೇರು ಬಂಡವಾಳ | 31.03.2024ರ ಅಂತ್ಯಕ್ಕೆ (ರೂ.ಲಕ್ಷಗಳಲ್ಲಿ) | 31.03.2025ರ ಅಂತ್ಯಕ್ಕೆ (ರೂ. ಲಕ್ಷಗಳಲ್ಲಿ) | 31.03.2026ರ ಅಂತ್ಯಕ್ಕೆ (ರೂ. ಲಕ್ಷಗಳಲ್ಲಿ) |
|---|---|---|---|
| ವರ್ಷಾರಂಭದಲ್ಲಿದ್ದಂತೆ | 1019.80 | 978.16 | 928.00 |
| ಪ್ರಸಕ್ತ ಸಾಲಿನಲ್ಲಿನ ಜಮಾ | 78.71 | 78.06 | 137.35 |
| ಪ್ರಸಕ್ತ ಸಾಲಿನಲ್ಲಿನ ಖರ್ಚು | 120.35 | 128.22 | 96.43 |
| ಸಾಲಾಖೈರಿಗೆ ಇದ್ದಂತೆ | 978.16 | 928.00 | 968.92 |

(ಹಿಂದಿನ ಎರಡು ಸಾಲುಗಳ ಹೋಲಿಕೆಯ ವಿವರಗಳನ್ನು ನೀಡುವುದು)

| 2023–24ಕ್ಕೆ | 2024–25ಕ್ಕೆ | 2025–26ಕ್ಕೆ |
|---|---|---|
| 9,78,16,425 | 9,28,00,150 | 9,68,91,525 |

| | | |
|---|---|---|
| 14 | ಷೇರು ಬಂಡವಾಳದ ಮೇಲೆ ವಿಮರ್ಶೆ | 1. ಬ್ಯಾಂಕಿನಲ್ಲಿ ಅಧಿಕೃತ ಷೇರು ಬಂಡವಾಳದ ಮಿತಿ 15 ಕೋಟಿಗಳು ನಿಗದಿಯಾಗಿರುತ್ತದೆ.<br>2. ಬ್ಯಾಂಕಿನ ಪ್ರತಿ ಷೇರಿನ ಮುಖ ಬೆಲೆ ರೂ.500/–<br>3. 2024–25ನೇ ಸಾಲಿಗೆ ಹೋಲಿಸಿದಾಗ ವರದಿ ಸಾಲಿನಲ್ಲಿ ಸದಸ್ಯರಿಂದ ಪಾವತಿಯಾದ ಷೇರು ಬಂಡವಾಳದಲ್ಲಿ ರೂ. 4091375/– (ಶೇ.4.41) ಹೆಚ್ಚಾಗಿರುತ್ತದೆ. |

| | | |
|---|---|---|
| 15 | ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಿರುವ ಷೇರು ಬಂಡವಾಳವು ಬ್ಯಾಂಕು ನಿರ್ವಹಿಸಿರುವ ಷೇರು ಖಾತೆಗಳಲ್ಲಿನ ಪ್ರತಿಯೊಬ್ಬ ಸದಸ್ಯರ ಷೇರು ಬಂಡವಾಳದ ಮೊತ್ತಕ್ಕೆ ತಾಳೆ ಇರುವುದೇ? | ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಿರುವ ಷೇರು ಬಂಡವಾಳವು ಬ್ಯಾಂಕು ನಿರ್ವಹಿಸಿರುವ ಷೇರು ಖಾತೆಗಳಲ್ಲಿನ ಪ್ರತಿಯೊಬ್ಬ ಸದಸ್ಯರ ಷೇರು ಬಂಡವಾಳದ ಮೊತ್ತಕ್ಕೆ ತಾಳೆ ಇರುತ್ತದೆ. |
| 16 | ಹೊರಗಿನಿಂದ ಪಡೆದ ಸಾಲಗಳು:<br>ಅವುಗಳ ಬಗ್ಗೆ ವಿಮರ್ಶೆ | ದಿನಾಂಕ 31.03.2026ರ ಅಂತ್ಯಕ್ಕೆ ಬ್ಯಾಂಕು ಹೊರಗಿನಿಂದ ಪಡೆದ ಸಾಲದ ಬಾಕಿ ಯಾವುದೂ ಇರುವುದಿಲ್ಲ. |
| 17 | **ಠೇವಣಿಗಳು :**<br>ಬ್ಯಾಂಕ್ ಪಡೆದ ವಿವಿಧ ರೀತಿಯ ಠೇವಣಿಗಳ ಬಗ್ಗೆ ವಿವರಗಳು | |

| **ಠೇವಣಿ ವಿವರಗಳು** | **ಆರಂಭ ಬಾಕಿ** | **ಪ್ರಸಕ್ತ ಸಾಲಿನ ಜಮಾ** | **ಪ್ರಸಕ್ತ ಸಾಲಿನ ಖರ್ಚು** | **ವರ್ಷಾಂತ್ಯಕ್ಕೆ ಬಾಕಿ** | **ಯಾದಿಯ ಮೊತ್ತ** | **ಅಂತರ** |
|---|---|---|---|---|---|---|
| ನಿಶ್ಚಿತ ಠೇವಣಿ | 11623.60 | 15577.03 | 15303.10 | 11897.53 | 11897.53 | – |
| ಉದಯ ಭಾರತಿ ಠೇವಣಿ | 9951.67 | 11523.03 | 11170.33 | 10304.37 | 10304.37 | – |
| ಉಳಿತಾಯ ಠೇವಣಿ | 8905.53 | 57581.18 | 56348.32 | 10138.39 | 10138.39 | – |
| ಚಾಲ್ತಿ ಠೇವಣಿ | 468.09 | 5752.31 | 5479.13 | 741.27 | 741.27 | – |
| ಸಂಚಿತ ಠೇವಣಿ | 217.50 | 336.49 | 317.06 | 236.93 | 236.93 | – |
| ನಿಷ್ಕ್ರಿಯ ಉಳಿತಾಯ ಖಾತೆಗಳ ಮೊತ್ತ | – | 90.78 | 71.94 | 18.84 | 18.84 | – |
| ಅವಧಿ ಮುಗಿದ ಠೇವಣಿ | 183.66 | 118.36 | 44.02 | 258.00 | 258.00 | – |
| ಭಾರತಿ ನಿತ್ಯ ಠೇವಣಿ | 191.38 | 228.27 | 239.30 | 180.35 | 180.35 | – |
| ಸಿಬ್ಬಂದಿ ಭದ್ರತಾ ಠೇವಣಿ | 7.53 | 4.20 | 4.33 | 7.40 | 7.40 | – |
| ಒಟ್ಟು ಮೊತ್ತ | **31548.96** | **91211.65** | **88977.53** | **33783.08** | **33783.08** | – |

| | | |
|---|---|---|
| 18 | ಉಳಿತಾಯ ತೇವಣಿ ಮತ್ತು ಇತರೆ ತೇವಣಿಗಳ ಬಗ್ಗೆ ವಿಮರ್ಶೆ | ಬ್ಯಾಂಕಿನಲ್ಲಿ ಸದಸ್ಯರಲ್ಲದವರಿಂದಲೂ ತೇವಣಿ ಸ್ವೀಕರಿಸಲಾಗಿದೆ.<br>ಒಟ್ಟು 6851 ಖಾತೆಗಳು ಸದಸ್ಯರಲ್ಲದ ವ್ಯಕ್ತಿಗಳಿಂದ ಒಟ್ಟು ರೂ.145.02 ಕೋಟಿ ಮೊತ್ತದ ತೇವಣಿ ಪಡೆಯಲಾಗಿದೆ.<br>ಬ್ಯಾಂಕ್ ಹೊಂದಿರುವ ತೇವಣಿಗಳ ಮೇಲೆ ಬಡ್ಡಿಯ ದರಗಳನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಪರಿಷ್ಕರಿಸಿ ನಿಗದಿ ಮಾಡದಂತೆ ಪಾವತಿಸಲಾಗುತ್ತಿದೆ. ಪರಿಷ್ಕರಣೆಯಾದ ಬಡ್ಡಿಯ ದರಗಳನ್ನು ಅನ್ವಯವಾಗುವ ದಿನಾಂಕದೊಳಗೆ ಕಂಪ್ಯೂಟರಿನಲ್ಲಿ ನಿಯತಾಂಕ ಗಳನ್ನು ಪ್ರಧಾನ ಕಛೇರಿಯಲ್ಲಿ ನಿಗಧಿ ಮಾಡಲಾಗುತ್ತಿದೆ.<br>2025-2026ನೇ ಸಾಲಿನಲ್ಲಿ ಬ್ಯಾಂಕ್ ಹೊಂದಿರುವ ವಿವಿಧ ತೇವಣಿಗಳ ಮೇಲೆ ಒಟ್ಟು ರೂ.190343642.04 ಬಡ್ಡಿ ಪಾವತಿಸಲಾಗಿದೆ. ತೇವಣಿಯ ಮೇಲಿನ ಸರಾಸರಿ ವೆಚ್ಚ ಶೇ.5.97 ಇರುತ್ತದೆ. |
| 19 | ಆಸ್ತಿ-ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಿ ರುವ ತೇವಣಿಗಳ ಮತ್ತು ಹೊರಗಿನಿಂದ ಪಡೆದ ಸಾಲಗಳ ಬಾಕಿಯು ನಿರ್ವಹಿಸಿ ರುವ ತೇವಣಿ ಮತ್ತು ಸಾಲಗಳ ಖಾತೆ ಗಳಲ್ಲಿರುವ ಒಟ್ಟು ಮೊತ್ತಗಳಿಗೆ ತಾಳೆ ಇರುತ್ತವೆಯೇ? | ದಿನಾಂಕ 31.03.2026ರ ಅಂತ್ಯಕ್ಕೆ ಬ್ಯಾಂಕು ಹೊರಗಿನಿಂದ ಪಡೆದ ಸಾಲದ ಬಾಕಿ ಯಾವುದೂ ಇರುವುದಿಲ್ಲ ಮತ್ತು ನಿರ್ವಹಿಸಿರುವ ತೇವಣಿಗಳಿಗೆ ಸಂಬಂಧ ಪಟ್ಟಂತೆ ಪ್ರತ್ಯೇಕ ಕುಳುವಾರು ಪಟ್ಟಿಗಳನ್ನು ಹಾಜರುಪಡಿಸಿದ್ದು ಎಲ್ಲಾ ಖಾತೆಗಳ ಕುಳುವಾರು ಪಟ್ಟಿಗಳು ಆಸ್ತಿ-ಜವಾಬ್ದಾರಿ ತಃಖ್ತೆಗೆ ತಾಳೆ ಇರುತ್ತದೆ. |
| 20 | ಸರ್ಕಾರದ ಅನುದಾನಗಳು ಮತ್ತು ಸಾಲಗಳು | ಸರ್ಕಾರದ ಅನುದಾನಗಳು ಮತ್ತು ಸಾಲಗಳು ಇರುವುದಿಲ್ಲ |
| 21 | ಅನಿಶ್ಚಿತ (ಕಂಟಿಂಜೆಂಟ್) ಜವಾಬ್ದಾರಿಗಳು | ಅನಿಶ್ಚಿತ (ಕಂಟಿಂಜೆಂಟ್) ಜವಾಬ್ದಾರಿಗಳು ಇರುವುದಿಲ್ಲ. 2025-26ನೇ ಸಾಲಿನಲ್ಲಿ DEAF ಖಾತೆಯಲ್ಲಿರುವ ಮೊತ್ತ ರೂ.42073120.40 |

| | | |
|---|---|---|
| 22 | ದ್ರವ್ಯಾಸ್ತಿಗಳ (ಫ್ಲೂಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ S L R/CRR ಗಳ ನಿರ್ವಹಣೆ-ಶಾಖೆಗಳ ವಾರದ ಡಿಟಿಎಲ್ ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಟೈಂ ಲಯಾಬಿಲಿಟೀಸ್) ಅನುಪಾಲನಾ ವರದಿಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ? | ಅನುಪಾಲನಾ ವರದಿಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆ. ಬ್ಯಾಂಕಿಂಗ್ ರೆಗ್ಯೂಲೇಶನ್ ಅಧಿನಿಯಮ 1949ರ ಕಲಂ 18 ಮತ್ತು 24ರ ಪ್ರಕಾರ ಮೀಸಲಿರಿಸಿದ ನಗದು ಮತ್ತು ದ್ರವ್ಯಾಸ್ತಿ (Cash Reserve & Liquid Asset) ರಿಜಿಸ್ಟರನ್ನು ಬ್ಯಾಂಕ್ ನಿರ್ವಹಿಸಿರುತ್ತದೆ. ವರ್ಷದ ಎಲ್ಲಾ ದಿನಗಳಲ್ಲಿ ಸಿ.ಆರ್.ಆರ್ ಮತ್ತು ಎಸ್.ಎಲ್.ಆರ್ ಮೊತ್ತಗಳು ಕನಿಷ್ಠ ಮಿತಿಗಿಂತ ಹೆಚ್ಚು ಇರುತ್ತದೆ. |
| 23 | ನಗದು<br>i) ಶಾಖೆಗಳಲ್ಲಿ ನಗದು ನಿರ್ವಹಣೆ ಮತ್ತು ಮೇಲ್ವಿಚಾರಣೆ ಬಗ್ಗೆ ಇರುವ ವ್ಯವಸ್ಥೆ | ಬ್ಯಾಂಕಿನ ಉಪನಿಯಮದ ಪ್ರಕಾರ ನಗದು ಶಿಲ್ಕು ಜವಾಬ್ದಾರಿ ಮತ್ತು ನಗದು ಮಿತಿಯನ್ನು ನಿಗದಿ ಪಡಿಸಲಾಗಿದೆ. ಬ್ಯಾಂಕಿನ ನಗದು ಶಿಲ್ಕನ್ನು ಕಾಲಕಾಲಕ್ಕೆ ಬ್ಯಾಂಕಿನ ಸಮವರ್ತಿತ ಲೆಕ್ಕ ಪರಿಶೋಧಕರು ಹಾಗೂ ಕಾರ್ಯದರ್ಶಿಯವರು ಪರಿಶೀಲಿಸಿದ್ದಾರೆ. |
| | ii) ನಗದು ಶಿಲ್ಕಿಗೆ ವಿಮಾ ಸೌಲಭ್ಯ ಒದಗಿಸುವ ಬಗ್ಗೆ. (ಚಲಿಸುತ್ತಿರುವ ನಗದನ್ನು ಒಳಗೊಂಡು) | ವರದಿ ಸಾಲಿಗೆ ಸಂಬಂಧಿಸಿದಂತೆ ಬ್ಲಾಂಕೆಟ್ ವಿಮೆ ಅಡಿಯಲ್ಲಿ ರೂ. 6.80 ಕೋಟಿಗಳಿಗೆ ವಿಮೆಯನ್ನು ಪಡೆಯಲಾಗಿರುತ್ತದೆ. |
| | iii) ನಗದು ಶಿಲ್ಕಿನ ಭೌತಿಕ ಸ್ವಾಧೀನ ನಗದು ಯಾರ ವಶದಲ್ಲಿರಬೇಕು ಎಂಬ ಬಗ್ಗೆ ರೂಪಿಸಲಾದ ನಿಯಮ. | ಜಂಟಿ ಅಭಿರಕ್ಷೆಯಲ್ಲಿ ನಗದು ಶಿಲ್ಕು ಇರುವಂತೆ ನಿಯಮವಿದ್ದು ಆ ಪ್ರಕಾರ ನಗದು ಶಿಲ್ಕು ವ್ಯವಸ್ಥಾಪಕರು ಮತ್ತು ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲ್ಲಿ ಇರುತ್ತದೆ. |
| 24 | ನಗದು<br>Call money operations<br>ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿನ ನಡುವೆ ಕರೆ ಠೇವಣಿ ವ್ಯವಹಾರಗಳ ಬಗ್ಗೆ ಜಾರಿಯಲ್ಲಿರುವ ವ್ಯವಸ್ಥೆ. | ಸಾಮಾನ್ಯವಾಗಿ ಸಾಲ ಪತ್ರ / ಸರ್ಕಾರಿ ಭದ್ರತಾ ಪತ್ರಗಳಲ್ಲಿನ ಹೂಡಿಕೆಗಳನ್ನು ಮುಕ್ತಾಯ ಮಾಡಿದಾಗ ಬೇರೆ ಸಾಲಪತ್ರ/ಸರ್ಕಾರಿ ಭದ್ರತಾ ಪತ್ರಗಳನ್ನು ಖರೀದಿಸಲು ಅಥವಾ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲು ಸಾಧ್ಯವಾಗದೇ ಇರುವ ಸಂದರ್ಭಗಳಲ್ಲಿ ಕರೆ ಠೇವಣಿಗಳ ವ್ಯವಹಾರಗಳನ್ನು ಮಾಡುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಕರೆ ಠೇವಣಿಯಲ್ಲಿ ಹೂಡಿಕೆ ಮಾಡಿರುವುದಿಲ್ಲ. |

| | | |
|---|---|---|
| 25 | ಮೀಸಲು ನಿಧಿ ಮತ್ತು ಹೂಡಿಕೆಗಳು [ಫಂಡ್ಸ್ ಮ್ಯಾನೇಜ್‌ಮೆಂಟ್] | |
| | ಎ) ನಿಧಿಗಳ ವಿವರಗಳು | ಬ್ಯಾಂಕಿನಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23ರಂತೆ ಪ್ರತ್ಯೇಕವಾಗಿ ಗುಂತಾಯಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದ ರೀತಿಯಲ್ಲಿ ಮೀಸಲು ನಿಧಿಯನ್ನು ಸರ್ಕಾರಿ ಸಾಲಪತ್ರಗಳಲ್ಲಿ ವಿನಿಯೋಗಿಸಲಾಗಿದೆ. ಇತರೆ ನಿಧಿಗಳನ್ನು ಉಪನಿಯಮಗಳ ಪ್ರಕಾರ ನಿರ್ವಹಿಸಲಾಗಿದೆ. |
| | **ಬಿ) ಹೂಡಿಕೆಗಳು** | |
| | 1) ಆರ್.ಬಿ.ಐ ಮಾರ್ಗಸೂಚಿಗಳಂತೆ ಬ್ಯಾಂಕಿನ ವಿವಿಧ ಹೂಡಿಕೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮ ಮತ್ತು ಅವುಗಳ ಪಾಲನೆ ಕುರಿತು. | ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಅನುಸಾರ ಸರ್ಕಾರಿ ಭದ್ರತಾ ಪತ್ರಗಳಲ್ಲಿ ಹೂಡಿಕೆಯಲ್ಲಿನ ಮೊತ್ತ ಹಿಂದಿನ 2ನೇ ಪಾಕ್ಷಿಕದ ಕೊನೆಯ ಶುಕ್ರವಾರದ ಎನ್.ಡಿ.ಟಿ.ಎಲ್ ನ ಕನಿಷ್ಟ ಶೇ.18 (ದಿನಾಂಕ: 31.03.2026ಕ್ಕೆ ಅನ್ವಯಿಸಿದಂತೆ) ಇರಬೇಕಾಗಿದ್ದು ಇದು ಶೇ.29.41 ಇರುತ್ತದೆ. ಹಾಗೆಯೇ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಅನುಸಾರ ಹೆಚ್.ಟಿ.ಎಂ ವರ್ಗದಲ್ಲಿನ ಎಸ್.ಎಲ್.ಆರ್ ಹೂಡಿಕೆಗಳು ಹಿಂದಿನ 2ನೇ ಪಾಕ್ಷಿಕದ ಕೊನೆಯ ಶುಕ್ರವಾರದ ಎನ್.ಡಿ.ಟಿ.ಎಲ್‌ನ ಶೇ.25ಕ್ಕೆ ಮೀರಿರಬಾರದು. ವರದಿ ಸಾಲಿನ ಅಂತ್ಯಕ್ಕೆ ಹೆಚ್‌ಟಿಎಂ ಅಡಿಯಲ್ಲಿರುವ ಎಲ್ಲಾ ಎಸ್ ಎಲ್ ಆರ್ ಹೂಡಿಕೆಗಳು ಶೇ.21.54 ರಷ್ಟಿದ್ದು, ಇದು ರಿಸರ್ವ್ ಬ್ಯಾಂಕು ನಿಗದಿಪಡಿಸಿದ ಮಿತಿ ಮೀರಿರುವುದಿಲ್ಲ.<br><br>ಆರ್.ಬಿ.ಐನ ಮಾರ್ಗಸೂಚಿಗಳ ಪ್ರಕಾರ Non-SLR ಹೂಡಿಕೆಗಳು ಕಳೆದ ಸಾಲಿನ ಅಂತ್ಯಗೊಂಡ ದಿನದ ಒಟ್ಟು ಠೇವಣಿಯ ಶೇ.10 ಕ್ಕೆ ಮೀರದಂತೆ ಮತ್ತು ಕಳೆದ ಸಾಲಿನ |

| | | |
|---|---|---|
| | | ಅಂತ್ಯಗೊಂಡ ದಿನದ ಬಂಡವಾಳ ನಿಧಿಯ ಶೇ.5 ಕ್ಕೆ ಮೀರದಂತೆ ಏಕ ಸಂಸ್ಥೆಯಲ್ಲಿ ಇರಬಹುದಾಗಿದ್ದು ಬ್ಯಾಂಕಿನ ವರ್ಷಾಂತ್ಯದ Non-SLR ಹೂಡಿಕೆಗಳು ಕಳೆದ ಸಾಲಿನ ಅಂತ್ಯಗೊಂಡ ದಿನದ ಒಟ್ಟು ಠೇವಣಿಯ ಶೇ.8.87 ಇರುವುದನ್ನು ಗಮನಿಸಲಾಗಿದೆ. 2019–20ನೇ ಸಾಲಿನಲ್ಲಿ ಕಾರ್ವಿ ಸ್ಟಾಕ್ ಹೋಲ್ಡಿಂಗ್ ಲಿಮಿಟೆಡ್‌ನ ಕಮರ್ಷಿಯಲ್ ಪೇಪರ್ಸ್‌ನಲ್ಲಿ ರೂ.2788.48 ಲಕ್ಷಗಳಷ್ಟನ್ನು ಹೂಡಿಕೆ ಮಾಡಲಾಗಿದ್ದು ಈ ಕಮರ್ಷಿಯಲ್ ಪೇಪರ್ಸ್‌ಗಳ ಮೇಲೆ ನವೆಂಬರ್ 2019ರಿಂದ ಬಡ್ಡಿ ಮತ್ತು ಹೂಡಿಕೆ ಮೊತ್ತ ಬರದೇ ಇರುವುದರಿಂದ ಇದು ಅನುತ್ಪಾದಕ Non-SLR ಹೂಡಿಕೆಯಾಗಿರುತ್ತದೆ. |
| | 2) ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿ ಮಾಡುವ ಕುರಿತು. | ಆಡಳಿತ ಮಂಡಳಿಯು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಹೂಡಿಕೆಗಳ ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ವ್ಯವಹರಿಸಲು ಅಧಿಕಾರ ನೀಡಿರುತ್ತದೆ. ಮಾರಾಟ ಮತ್ತು ಖರೀದಿ ವ್ಯವಹಾರಗಳನ್ನು ಆಡಳಿತ ಮಂಡಳಿಯಲ್ಲಿ ದೃಡೀಕರಿಸುವ ಪದ್ಧತಿ ಜಾರಿಯಲ್ಲಿರುತ್ತದೆ. |
| | 3) ಹೂಡಿಕೆಗಳ ಬಗ್ಗೆ ಹತೋಟಿ ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ. | ಪ್ರತಿ ತ್ರೈಮಾಸಿಕ ಅಂತ್ಯಕ್ಕೆ ಎಸ್.ಬಿ.ಐ, ಡಿ.ಎಫ್.ಹೆಚ್.ಐ. ಮುಂಬೈ ಇವರು ನೀಡಲ್ಪಟ್ಟ ದೃಢೀಕರಣ ಪತ್ರ ಆಧರಿಸಿ ಸರ್ಕಾರಿ ಭದ್ರತಾ ಪತ್ರಗಳಲ್ಲಿನ ಹೂಡಿಕೆಗಳನ್ನು ತಾಳೆ ಮಾಡಿಕೊಳ್ಳಲಾಗುತ್ತಿದೆ. ಅದಲ್ಲದೇ ಇತರೆ ಬ್ಯಾಂಕಿನಲ್ಲಿರುವ ಠೇವಣಿ ರಶೀದಿಗಳನ್ನು ಭೌತಿಕವಾಗಿ ಕಾಲಕಾಲಕ್ಕೆ ಪರಿಶೀಲಿಸಲಾಗುತ್ತಿದೆ. |

| | | |
|---|---|---|
| | 4) ಮೌಲ್ಯಮಾಪನ ಮಾದರಿ ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯಮಾಪನದಲ್ಲಿ ಆಗಿರುವ ಬದಲಾವಣೆ ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ. | ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದ ಮಾದರಿಯಲ್ಲಿ ಯಾವುದೇ ಬದಲಾವಣೆ ಕಂಡುಬಂದಿರುವುದಿಲ್ಲ. ವರದಿ ಸಾಲಿನ ಅಂತ್ಯಕ್ಕೆ ಇದ್ದ ಎಲ್ಲಾ ಎಸ್ ಎಲ್ ಆರ್ ಹೂಡಿಕೆಗಳು ಹೆಚ್ ಟಿ ಎಂ ಮತ್ತು ಎ ಎಫ್ ಎಸ್ ವರ್ಗದಲ್ಲಿರುವ ಹೂಡಿಕೆಗಳಾಗಿದ್ದು ಅವುಗಳಿಗೆ ಸಂಬಂಧಿಸಿದಂತೆ ಮುಖಬೆಲೆಗಿಂತ ಹೆಚ್ಚು ಬೆಲೆ ಇರುವ ಸರ್ಕಾರಿ ಭದ್ರತಾ ಪತ್ರಗಳಿಗೆ ಅಮಾರ್ಟೈಸೇಷನ್ ಮಾಡಲಾಗಿರುತ್ತದೆ. ಎ.ಎಫ್.ಎಸ್ ಹೂಡಿಕೆಗಳಿಗೆ ಸಂಬಂಧಿಸಿದಂತೆ ಮುಖಬೆಲೆ ಮಾರುಕಟ್ಟೆ ಬೆಲೆಗಿಂತ ಹೆಚ್ಚಾಗಿರುವುದರಿಂದ ಅವಕಾಶ ಕಲ್ಪಿಸುವ ಅಗತ್ಯ ಇರುವುದಿಲ್ಲ. ವರದಿ ಸಾಲಿನ ಅಂತ್ಯಕ್ಕೆ ಇದ್ದ ನಾನ್ ಎಸ್ ಎಲ್ ಆರ್ ಹೂಡಿಕೆಗಳು ಈ ಕೆಳಗಿನಂತಿರುತ್ತವೆ. ಅಪೆಕ್ಸ್ ಬ್ಯಾಂಕಿನ ಷೇರುಗಳು ರೂ.1000000/–.<br>2019–20ನೇ ಸಾಲಿನಲ್ಲಿ ಕಾರ್ವಿ ಸ್ಟಾಕ್ ಹೋಲ್ಡಿಂಗ್ ಲಿಮಿಟೆಡ್‌ನ ಕಮರ್ಷಿಯಲ್ ಪೇಪರ್ಸ್‌ನಲ್ಲಿ ರೂ.278848125/– ಹೂಡಿಕೆ ಮಾಡಿದ್ದು ಕಮರ್ಷಿಯಲ್ ಪೇಪರ್ಸ್‌ನ ಹೂಡಿಕೆಗಳ ಮೇಲೆ ಸೆಪ್ಟೆಂಬರ್ 2019 ರಿಂದ ಬಡ್ಡಿ ಮತ್ತು ಹೂಡಿಕೆ ಮೊತ್ತ ಬರದೇ ಇರುವುದರಿಂದ ಇದು Non-SLR ಅನುತ್ಪಾದಕ ಹೂಡಿಕೆಯಾಗಿರುತ್ತದೆ. |
| | 5) ಆರ್.ಬಿ.ಐ ಮಾರ್ಗಸೂಚಿಗಳನ್ವಯ Investment Portfolio ರಚಿಸಿರುವ ಬಗ್ಗೆ ಮತ್ತು ಹೂಡಿಕೆಗಳ ಏರಿಳಿತಗಳ ಮೇಲೆ ಸವಕಳಿ ಅವಕಾಶ ಕಲ್ಪಿಸಿರುವ ಬಗ್ಗೆ. | ಎಸ್ ಎಲ್ ಆರ್ ಹೂಡಿಕೆಗಳನ್ನು ಹೆಚ್ ಟಿ ಎಂ ಗಳೆಂದು ಪ್ರತ್ಯೇಕಿಸಲಾಗಿದೆ. ವರದಿ ಸಾಲಿನ ಅಂತ್ಯಕ್ಕೆ ಇದ್ದ ಎಲ್ಲಾ ಎಸ್ ಎಲ್ ಆರ್ ಹೂಡಿಕೆಗಳು ಹೆಚ್‌ಟಿಎಂ ಮತ್ತು ಎಎಫ್‌ಎಸ್ ವರ್ಗದಲ್ಲಿರುವ ಹೂಡಿಕೆಗಳಾಗಿದ್ದು ಅವುಗಳಿಗೆ ಸಂಬಂಧಿಸಿದಂತೆ ಮುಖಬೆಲೆಗಿಂತ ಹೆಚ್ಚು ಬೆಲೆ ಇರುವ ಸರ್ಕಾರಿ ಭದ್ರತಾ ಪತ್ರಗಳಿಗೆ ಅಮಾರ್ಟೈಸೇಷನ್ ಮಾಡಲಾಗಿರುತ್ತದೆ. |

| | | |
|---|---|---|
| | | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗ ಸೂಚಿಯ ಪ್ರಕಾರ ಹೂಡಿಕೆಗಳ ಮಾರಾಟದಿಂದ ಬಂದ ಲಾಭದಿಂದ ಎ ಎಫ್ ಎಸ್ ಮತ್ತು ಹೆಚ್ ಎಫ್ ಟಿ ಗಳಲ್ಲಿರುವ ಹೂಡಿಕೆಗಳ ಕನಿಷ್ಠ ಶೇ.5 ರಷ್ಟನ್ನು ಹೂಡಿಕೆಗಳ ಏರಿಳಿತ ಮೀಸಲು ನಿಧಿಯಲ್ಲಿ ನಿರ್ವಹಿಸಬೇಕಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ರೂ.4306521/– ಗಳಷ್ಟು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ಹೊಂದಿರುತ್ತದೆ. ಹೂಡಿಕೆಗಳ ಏರಿಳಿತ ಮೀಸಲು ನಿಧಿ ಶೇ.1.56 ರಷ್ಟಿರುತ್ತದೆ. |
| | 6) Investment Portfolio ದಲ್ಲಿ ಉಲ್ಲೇಖಿಸದೇ ಇರುವ ಹೂಡಿಕೆಗಳು ಮತ್ತು ಅವುಗಳ ನಗಧೀಕರಣದ ಬಗ್ಗೆ. | ಸಾಮಾನ್ಯವಾಗಿ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿರುವ ಮೊತ್ತಗಳನ್ನು ಕಾಲ ಕಾಲಕ್ಕೆ ನವೀಕರಣಗೊಳಿಸುವ ಅಥವಾ ಅವಧಿ ಮುಗಿದ ದಿನದಂತೆ ನಗದೀಕರಣಗೊಳಿಸಿಕೊಳ್ಳುವ ಪದ್ಧತಿಯು ಜಾರಿಯಲ್ಲಿರುತ್ತದೆ. |
| | 7) SGL/BRs ಪದ್ದತಿ ಸಾಲಾಂತ್ಯಕ್ಕೆ ಇರುವ SGL/BRS ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ | ಬ್ಯಾಂಕರ್ಸ್ ರಿಸೀಟ್ಸ್ ಅಡಿಯಲ್ಲಿ ಯಾವುದೇ ವ್ಯವಹಾರ ನಡೆದಿರುವುದು ಕಂಡು ಬಂದಿಲ್ಲ. ಸರ್ಕಾರಿ ಭದ್ರತೆಗಳು ಡಿಮ್ಯಾಟ್ ರೂಪದಲ್ಲಿ ಇರುತ್ತವೆ. ದೃಢೀಕರಣ ಪತ್ರದ ಪ್ರಕಾರ ಭದ್ರತೆಗಳ ಹೂಡಿಕೆ ಮುಖ ಬೆಲೆಗೆ ತಾಳೆ ಇರುತ್ತದೆ. |
| | 8) ಹೂಡಿಕೆಗಳ ನಿರ್ವಹಣೆ ಬಗ್ಗೆ ಬ್ಯಾಂಕಿನವರು ನಿಯತಕಾಲಿಕವಾಗಿ ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆ ನಡೆಸುತ್ತಿರುವ ಬಗ್ಗೆ. | ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗ ಸೂಚಿಗಳ ಪ್ರಕಾರ ಬ್ಯಾಂಕಿನ ಸಮವರ್ತಿ ಲೆಕ್ಕಪರಿಶೋಧಕರಿಂದ ಹೂಡಿಕೆಗಳ ನಿರ್ವಹಣೆ ಬಗ್ಗೆ ತ್ರೈಮಾಸಿಕ ವರದಿ ಪಡೆಯಬೇಕಾಗಿದ್ದು ಆ ಪ್ರಕಾರವಾಗಿ ಸಮವರ್ತಿ ಲೆಕ್ಕಪರಿಶೋಧಕರಿಂದ ಹೂಡಿಕೆಗಳ ನಿರ್ವಹಣೆ ಬಗ್ಗೆ ಮಾಸಿಕ ಆಧಾರದ ಮೇಲೆ ವರದಿಗಳನ್ನು ಪಡೆದಿರುತ್ತಾರೆ. |

| | | |
|---|---|---|
| | 9) ಹೂಡಿಕೆಗಳ ಮೇಲಿನ ಆದಾಯವನ್ನು ಲೆಕ್ಕಪತ್ರಗಳಲ್ಲಿ ದಾಖಲಿಸುವ ಬಗ್ಗೆ ಬ್ಯಾಂಕ್ ಅನುಸರಿಸುತ್ತಿರುವ ನಿಯಮಗಳು | ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗ ಸೂಚಿಗಳ ಪ್ರಕಾರ ಅನುತ್ಪಾದಕ ಹೂಡಿಕೆಗಳ ಮೇಲಿನ ಆದಾಯವನ್ನು ಸ್ವೀಕೃತಿಯ ಆಧಾರದ ಮೇಲೆ ಬಡ್ಡಿಯ ದರ ನಿಗದಿಯಾದ ಮತ್ತು ಬಡ್ಡಿಯನ್ನು ಕಾಲಕಾಲಕ್ಕೆ ನೀಡುವ ಸರ್ಕಾರಿ ಸಾಲಪತ್ರ / ಸರ್ಕಾರಿ ಭದ್ರತಾ ಪತ್ರ ಇತ್ಯಾದಿಗಳ ಮೇಲಿನ ಬಡ್ಡಿಯನ್ನು ಅಕ್ರುಯಲ್ ಆಧಾರದ ಮೇಲೆ ಪರಿಗಣಿಸಲಾಗಿರುತ್ತದೆ. |
| | 10) ಹೂಡಿಕೆಗಳ ಮೇಲೆ ಪ್ರಾಪ್ತವಾದ ಆದರೆ ಸ್ವೀಕೃತಿಯಾಗದೆ ಇರುವ ಆದಾಯವನ್ನು ಪರಿಗಣಿಸುವ ಬಗ್ಗೆ ಬ್ಯಾಂಕ್ ಅನುಸರಿಸುತ್ತಿರುವ ನಿಯಮ. | ಈ ಮೇಲೆ ವಿವರಿಸಿದ ಪದ್ಧತಿಯನ್ನು ಅನುಸರಿಸಲಾಗಿರುತ್ತದೆ. |
| | 11) ಅವಧಿ ಪೂರ್ಣ ಹೂಡಿಕೆಗಳು ಮತ್ತು ಅವುಗಳನ್ನು ಸಕಾಲದಲ್ಲಿ ನಗದೀಕರಿಸುವ ಬಗ್ಗೆ | ಅವಧಿ ಪೂರ್ಣಗೊಂಡ ಹೂಡಿಕೆಗಳನ್ನು ಸಕಾಲದಲ್ಲಿ ನಗದೀಕರಿಕೊಳ್ಳುವ ಪದ್ಧತಿಯು ಜಾರಿಯಲ್ಲಿರುತ್ತದೆ. |
| | 12) ಹೂಡಿಕೆಗಳ ಮೇಲೆ ಸರಾಸರಿ ಆದಾಯ | ಬ್ಯಾಂಕಿನ ಹೂಡಿಕೆಗಳ ಮೇಲಿನ ಸರಾಸರಿ ಆದಾಯ ಶೇ.5.84 ಆಗಿರುತ್ತದೆ. |
| | 13) REPO ಗಳ ಮೇಲೆ ಅನುಸರಿಸು ತ್ತಿರುವ ನಿಯಮಗಳು | ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗ ಸೂಚಿಗಳ ಪ್ರಕಾರ ಬ್ಯಾಂಕು ಎಸ್.ಎಲ್.ಆರ್ ಮತ್ತು ನಾನ್ ಎಸ್ ಎಲ್ ಆರ್ ಹೂಡಿಕೆಗಳನ್ನು ಮಾಡುತ್ತಿದ್ದು ರಿಪೋ ವ್ಯವಹಾರಗಳನ್ನು ಕೈಗೊಂಡಿರುವುದಿಲ್ಲ. |
| **26** | **ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:** | |
| | 1. ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ | ಕಲಂ 58ರ ಪ್ರಕಾರ ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದ ರೀತಿಯಲ್ಲಿ ಮೀಸಲು ನಿಧಿಯನ್ನು ಸರ್ಕಾರಿ ಸಾಲಪತ್ರಗಳಲ್ಲಿ ವಿನಿಯೋಗಿಸಲಾಗಿರುತ್ತದೆ. ಹಾಗೆಯೇ ಬ್ಯಾಂಕು ಉಳಿದ ನಿಧಿಗಳನ್ನು ಬ್ಯಾಂಕಿನ ಉಪ ನಿಯಮಗಳ ಪ್ರಕಾರ ನಿರ್ವಹಿಸಿರುವುದನ್ನು ಗಮನಿಸಲಾಗಿದೆ. |

| | | |
|---|---|---|
| | 2. ಎಸ್ ಎಲ್ ಆರ್ ಹೂಡಿಕೆಗಳನ್ನು ಎ ಎಫ್ ಎಸ್ ಹೆಚ್ ಟಿ ಎಂ ಮತ್ತು ಹೆಚ್ ಎಫ್ ಟಿ ಗಳೆಂದು ಪ್ರತ್ಯೇಕಿಸಲಾಗಿದೆಯೇ? | ಎಸ್ ಎಲ್ ಆರ್ ಹೂಡಿಕೆಗಳನ್ನು ಎಎಸ್‌ಎಫ್ ಮತ್ತು ಹೆಚ್ ಟಿ ಎಂ ಗಳೆಂದು ಪ್ರತ್ಯೇಕಿಸಲಾಗಿದೆ. ವರದಿ ಸಾಲಿನ ಅಂತ್ಯಕ್ಕೆ ಎಲ್ಲಾ ಎಸ್ ಎಲ್ ಆರ್ ಹೂಡಿಕೆಗಳು ಹೆಚ್ ಟಿ ಎಂ & ಎ ಎಫ್ ಎಸ್ ವರ್ಗದಲ್ಲಿರುವ ಹೂಡಿಕೆಗಳಾಗಿದ್ದು ಅವುಗಳಿಗೆ ಸಂಬಂಧಿಸಿ ದಂತೆ ಮುಖಬೆಲೆಗಿಂತ ಹೆಚ್ಚು ಬೆಲೆ ಇರುವ ಸರ್ಕಾರಿ ಭದ್ರತಾ ಪತ್ರಗಳಿಗೆ ಅಮಾರ್ಟೈಸೇಷನ್ ಮಾಡಲಾಗಿರುತ್ತದೆ. |
| | 3. ರೂ.100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿ ದೆಯೇ? | ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗ ಸೂಚಿಗಳ ಪ್ರಕಾರ ಹೂಡಿಕೆಗಳ ಮಾರಾಟದಿಂದ ಬಂದ ಲಾಭದಿಂದ ಎ ಎಫ್ ಎಸ್ ಮತ್ತು ಹೆಚ್ ಎಫ್ ಟಿ ಗಳಲ್ಲಿರುವ ಹೂಡಿಕೆಗಳ ಕನಿಷ್ಠ ಶೇ.5 ರಷ್ಟನ್ನು ಹೂಡಿಕೆಗಳ ಏರಿಳಿತ ಮೀಸಲು ನಿಧಿಯಲ್ಲಿ ನಿರ್ವಹಿಸಬೇಕಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ರೂ.4306521/– ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ಹೊಂದಿರುತ್ತದೆ. ಬ್ಯಾಂಕು ಹೊಂದಿರುವ ಹೂಡಿಕೆಗಳ ಏರಿಳಿತ ಮೀಸಲು ನಿಧಿ ಶೇ.1.56 ರಷ್ಟಿರುತ್ತದೆ. |
| **27** | **ಸಾಲ ಮತ್ತು ಮುಂಗಡಗಳು:** | |
| | ಮುಂಗಡಗಳು: | |
| | ಎ) ಸಾಲ ವಿತರಣೆ ನಿಯಮ:<br>ಸಾಲ ವಿತರಣೆ ಬಗ್ಗೆ ಬ್ಯಾಂಕಿನಲ್ಲಿ ಅಸ್ತಿತ್ವದಲ್ಲಿರುವ ಮತ್ತು ಅನುಸರಣೆ ಯಲ್ಲಿರುವ ನಿಯಮಗಳು–ವಿವೇಕಪೂರ್ಣ ಮಾನದಂಡಗಳು ಕೈಗಾರಿಕಾ ವಲಯಕ್ಕೆ ನಿಗದಿಪಡಿಸಿದ ಸಾಲದ ಮಿತಿ ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸುವ ಬಗ್ಗೆ ಹತೋಟಿ ಮತ್ತು ಅನುಪಾಲನೆ ಬಗ್ಗೆ. | ಉಪನಿಯಮಗಳ ಪ್ರಕಾರ ಸದಸ್ಯರಿಗೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುತ್ತಿದ್ದು, ವೈಯಕ್ತಿಕ ಸಾಲಗಳ ಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಗಳ ಪ್ರಕಾರ ಗರಿಷ್ಠ ಮಿತಿಯನ್ನು ಮೀರದಂತೆ ನಿಗದಿ ಪಡಿಸಲಾಗಿರುತ್ತದೆ. ನಿಗದಿಗೊಳಿಸಿದ ಸಾಲದ ಮಿತಿ ಮತ್ತು ಸಾಲದ ಅವಧಿಯ ವಿವರಗಳನ್ನು ಗಣಕಯಂತ್ರದಲ್ಲಿ ನಿರ್ವಹಿಸಲಾಗಿರುತ್ತದೆ. |

| | | |
|---|---|---|
| | ಬಿ) ಸಾಲಗಳ ಮೌಲ್ಯಾಂಕನ: (Credit appraisal) ಸಾಲಗಳ ಮೌಲ್ಯಾಂಕನಕ್ಕಾಗಿ ಉತ್ತಮ ಪದ್ಧತಿಯನ್ನು ಹೊಂದಲಾಗಿದೆಯೇ? ಹಾಗೂ ಸಾಲಗಾರರು ಸಾಲ ಪಡೆಯುವ ಅರ್ಹತೆಯನ್ನು ಹೊಂದಿರುವುದನ್ನು ನಿರ್ಧರಿಸುವುದಕ್ಕೆ ಸಾಕಷ್ಟು ಅಂಕಿ ಅಂಶಗಳನ್ನು /ಮಾಹಿತಿಗಳನ್ನು ಹೊಂದಲಾಗಿದೆಯೇ ಮತ್ತು ಅವುಗಳನ್ನು ಪಾಲಿಸಲಾಗುತ್ತಿದೆಯೇ? | ಸಾಲದ ನಿಯಮಾವಳಿಗಳ ಪ್ರಕಾರ ಸದಸ್ಯರಿಗೆ ಅಲ್ಪಾವಧಿ, ಮಧ್ಯಮಾವದಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುತ್ತಿದ್ದು ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗ ಸೂಚಿಗಳ ಪ್ರಕಾರ ಏಕ ಸಾಲಗಾರನಿಗೆ ಮತ್ತು ಗುಂಪು ಸಾಲಗಾರರಿಗೆ ಅನುಕ್ರಮವಾಗಿ ಹಿಂದಿನ ಆರ್ಥಿಕ ವರ್ಷದ ಟೈರ್ 1 ಬಂಡವಾಳದ ಶೇ.15 ಮತ್ತು ಶೇ.25 ಮೀರದಂತೆ ನಿಗದಿಪಡಿಸಲಾಗಿ ರುತ್ತದೆ. ಸಾಲಗಳ ಮೌಲ್ಯಾಂಕನದಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ಮುಖ್ಯ ವರದಿಯ ಕಂಡಿಕೆ "ಎಫ್" ದಲ್ಲಿ ವಿವರಿಸಿಲಾಗಿದೆ. |
| | ಸಿ) ಸಾಲ ಮಂಜೂರಾತಿ/ವಿತರಣೆ ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (Authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ? | ಠೇವಣಿಗಳ ಮೇಲಿನ ಮತ್ತು ಆಭರಣಗಳ ಮೇಲಿನ ಸಾಲಗಳನ್ನು ನೀಡಲು ಶಾಖೆಗಳ ವ್ಯವಸ್ಥಾಪಕರುಗಳಿಗೆ ಅಧಿಕಾರ ನೀಡಲಾಗಿದ್ದು ತದ ನಂತರ ಶಾಖೆಗಳು ಮಂಜೂರು ಮಾಡಿದ ಸಾಲಗಳನ್ನು ಆಡಳಿತ ಮಂಡಳಿಯಲ್ಲಿ ದೃಢೀಕರಿಸಲಾಗುತ್ತದೆ. ಉಳಿದ ಸಾಲಗಳನ್ನು ಸಾಲದ ಉಪಸಮಿತಿ ಮತ್ತು ಆಡಳಿತ ಮಂಡಳಿಯು ಮಂಜೂರು ಮಾಡಿರುತ್ತದೆ. |
| | ಡಿ) ದಾಖಲೀಕರಣ ಸಂಗ್ರಹಣೆ (Documentation) ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳವುದು ದಾಖಲೆಗಳ ಸ್ವರೂಪ ಈ ಸಂಬಂಧ ಲೆಕ್ಕಪರಿಶೋಧನೆ ಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು, ಜಂಟಿ/ಸಹಕಾರಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ (Documentation of consortium advances) | ಸಾಮಾನ್ಯವಾಗಿ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರವಷ್ಟೇ ಸಾಲವನ್ನು ವಿತರಿಸಲಾಗಿರುತ್ತದೆ. ನಮಗೆ ಕಂಡು ಬಂದ ನ್ಯೂನ್ಯತೆಗಳನ್ನು ಮುಖ್ಯ ವರದಿಯ ಕಂಡಿಕೆ "ಎಫ್" ದಲ್ಲಿ ವಿವರಿಸಲಾಗಿದೆ. ಜಂಟಿ/ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ (Documentation of consortium advances) ಈ ಶೀರ್ಷಿಕೆ ಯಡಿಯಲ್ಲಿ ಯಾವುದೇ ಪ್ರಕರಣ ಗಳಿರುವುದಿಲ್ಲ. |

| | | |
|---|---|---|
| | ಇ) ನವೀಕರಣ/ ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ:<br>1) ಸಾಲಗಳ ಬಾಕಿಗಳ ನಿಯತಕಾಲಿಕ ದೃಡೀಕರಣ ಹಾಗೂ ಅವುಗಳ ಒಪ್ಪಿ ಕೊಳ್ಳುವಿಕೆ. | ಕೆಲವು ಸಾಲಗಳ ಬಾಕಿ ಶಿಲ್ಕನ್ನು ವಾರ್ಷಿಕ ಆಧಾರದ ಮೇಲೆ ಪಡೆಯಲಾಗುತ್ತಿರುತ್ತದೆ. |
| | 2) ಸಾಲಗಾರರಿಂದ ದಾಸ್ತಾವಿನ ಬಗ್ಗೆ ನಿಯುತ ಮಾಹಿತಿ ಅವರ ಆಸ್ತಿ ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿ ಯಾಗುತ್ತಿರುವ ಬಗ್ಗೆ. | ದಾಸ್ತಾನು ಆಧಾರದ ಮೇಲೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. ಆದ್ದರಿಂದ ಈ ಶೀರ್ಷಿಕೆ ಅನ್ವಯಿಸುವುದಿಲ್ಲ. |
| | 3) ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆ ಯಾದ ಲೆಕ್ಕಗಳನ್ನು ಪಡೆದಿರುವ ಬಗ್ಗೆ. | ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು ಪಡೆದಿರುವುದಿಲ್ಲ. ಆದರೆ ತನ್ನ ಸಾಲದ ನಿಯಮಾವಳಿಗಳ ಪ್ರಕಾರ ರೂ.20 ಲಕ್ಷಗಳ ಮೇಲ್ಪಟ್ಟ ಸಾಲಗಾರರಿಂದ ಲೆಕ್ಕ ಪರಿಶೋಧನೆಯಾದ ಲೆಕ್ಕ ಪತ್ರಗಳನ್ನು ಪಡೆಯುವ ನಿಯುಮವನ್ನು ಬ್ಯಾಂಕು ಹೊಂದಿರುತ್ತದೆ. ಕಂಡುಬಂದ ನ್ಯೂನ್ಯತೆಗಳನ್ನು ಕಂಡಿಕೆ ಎಫ್ ನಲ್ಲಿ ವಿವರಿಸಲಾಗಿರುತ್ತದೆ. |
| | 4) ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (follow-up) ಮತ್ತು ಸಂರಕ್ಷಣೆ ಬಗ್ಗೆ. | ದಾಖಲೆಗಳ ನವೀಕರಣ/ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ / ಮೇಲ್ವಿಚಾರಣೆ ನಡೆದಿರುತ್ತದೆ. ಮತ್ತು ಅವಧಿ ಮೀರಿದ ಸಾಲ ವಸೂಲಾತಿಯ ಬಗ್ಗೆ ನೋಟೀಸ್ ನೀಡಿ ಮೊಕದ್ದಮೆ ದಾಖಲು ಮಾಡುತ್ತಿದೆ. |
| | 5) ದಾಸ್ತಾನು ಉಪಕರಣಗಳು ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ. | ಸಾಲವನ್ನು ವಿತರಿಸುವ ಮೊದಲು ಬ್ಯಾಂಕಿಗೆ ಕೊಟ್ಟ ಸ್ಥಿರಾಸ್ತಿ ಭದ್ರತೆಗಳನ್ನು ಭೌತಿಕ ಪರಿಶೀಲನೆ ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ. ಆದರೆ ಸಾಲವನ್ನು ವಿತರಿಸಿದ ನಂತರ ಬ್ಯಾಂಕಿಗೆ ಕೊಟ್ಟ ಭದ್ರತೆಗಳನ್ನು ಕಾಲಕಾಲಕ್ಕೆ ಭೌತಿಕ ಪರಿಶೀಲನೆ ಮಾಡುವ ಪದ್ಧತಿ ಜಾರಿಯಲ್ಲಿರುವುದಿಲ್ಲ. ಹಾಗೆಯೇ ವಾಹನ ಸಾಲಗಳಿಗೆ ಸಂಬಂಧಿಸಿ ದಂತೆ ವಾಹನವನ್ನು ಭೌತಿಕವಾಗಿ |

| | | |
|---|---|---|
| | | ಪರಿಶೀಲಿಸುವ ಪದ್ಧತಿ ಜಾರಿಯಲ್ಲಿರುವುದಿಲ್ಲ. ಈ ಬಗ್ಗೆ ಕ್ರಮ ಅಗತ್ಯ.<br>**ಅನುವರ್ತನೆ : ವಸೂಲಾತಿ ಸಿಬ್ಬಂದಿಗಳು ಸಾಲಗಾರರು ಭದ್ರತೆಗಾಗಿ ನೀಡಿರುವ ಸ್ವತ್ತಿನ ಸ್ಥಳಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಭೌತಿಕವಾಗಿ ಪರಿಶೀಲಿಸುತ್ತಿದ್ದಾರೆ. ವಾಹನವನ್ನು ಭೌತಿಕವಾಗಿ ಪರಿಶೀಲಿಸಲು ಕ್ರಮಕೈಗೊಳ್ಳಲಾಗಿದೆ.** |
| | 6) ನಿಯತಕಾಲಿಕವಾಗಿ ದಾಸ್ತಾನು ಪರಿಶೋಧನೆ ನಿರ್ವಹಿಸುತ್ತಿರುವ ಬಗ್ಗೆ. | ದಾಸ್ತಾನು ಆಧಾರದ ಮೇಲೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. ಆದ್ದರಿಂದ ಈ ಶೀರ್ಷಿಕೆ ಅನ್ವಯಿಸುವುದಿಲ್ಲ. |
| | 7) ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ | ದಾಸ್ತಾನು ಆಧಾರದ ಮೇಲೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. ಆದ್ದರಿಂದ ಈ ಶೀರ್ಷಿಕೆ ಅನ್ವಯಿಸುವುದಿಲ್ಲ. |
| | 8) ಕ್ರೆಡಿಟ್ ರೇಟಿಂಗ್ ನೀಡುವಾಗ ಪಾಲಿಸುತ್ತಿರುವ ಮಾನದಂಡಗಳು | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗ ಸೂಚಿಯ ಅನುಸಾರ ಬ್ಯಾಂಕು ಎಲ್ಲಾ ನಾಲ್ಕು ಕ್ರೆಡಿಟ್ ಇನ್‌ಫರ್‌ಮೇಷನ್ ಕಂಪನಿಗಳ. ಸದಸ್ಯತ್ವವನ್ನು ಪಡೆದಿದ್ದು ಆ ಕ್ರೆಡಿಟ್ ಇನ್‌ಫರ್‌ಮೇಷನ್ ವರದಿಗಳಲ್ಲಿನ ಅಂಕಗಳ ಆಧಾರದ ಮೇಲೆ ಸಾಲಗಾರನ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಲಾಗುತ್ತಿದೆ. ಬ್ಯಾಂಕು ಪ್ರತ್ಯೇಕವಾಗಿ ಕ್ರೆಡಿಟ್ ರೇಟಿಂಗ್ ಕೊಡುವ ವ್ಯವಸ್ಥೆ ಇರುವುದಿಲ್ಲ. ನಮಗೆ ಕಂಡು ಬಂದ ನ್ಯೂನ್ಯತೆಗಳನ್ನು ಕಂಡಿಕೆ "ಎಫ್" ದಲ್ಲಿ ವಿವರಿಸಲಾಗಿದೆ. |
| | 9) ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI) | ಸಾಲದ ಖಾತೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಎನ್.ಪಿ.ಎ ಮಾರ್ಗಸೂಚಿಗಳನ್ವಯ ವರ್ಗೀಕರಣಗೊಳಿಸಲಾಗುತ್ತಿದೆಯಾದ್ದರಿಂದ ಈ ಶೀರ್ಷಿಕೆ ಅನ್ವಯಿಸುವುದಿಲ್ಲ. |

| | | |
|---|---|---|
| | 10) ಲೀಸಿಂಗ್ ಹೈಯರ್ ಪರ್ಚೇಸ್ ಮತ್ತು ಕ್ರೆಡಿಟ್‌ಕಾರ್ಡ್ ವ್ಯವಹಾರಗಳ ಸುಸ್ತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಜಾರಿಯಲ್ಲಿರುವ ನಿಯಮಗಳು ಮತ್ತು ಮೇಲ್ವಿಚಾರಣೆ ವ್ಯವಸ್ಥೆ. | ಲೀಸಿಂಗ್ ಹೈಯರ್ ಪರ್ಚೇಸ್ ಮತ್ತು ಕ್ರೆಡಿಟ್‌ಕಾರ್ಡ್ ವ್ಯವಹಾರಗಳು ಇರುವುದಿಲ್ಲ. |
| | 11) ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ. | ಯಾವುದೆ ಸಾಲ ಗರಿಷ್ಟ ಮಿತಿಯನ್ನು ಮೀರಿರುವುದಿಲ್ಲ. |
| | 12) ಸೌಲಭ್ಯಗಳ ನವೀಕರಣ | ಯಾವುದೆ ಸಾಲಗಳನ್ನು ನವೀಕರಿಸಿರುವುದಿಲ್ಲ. |
| | 13) ಕೈಗಾರಿಕೆಗಳನ್ವಯ ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ನು ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ | ಸಾಲದ ಸ್ವರೂಪ ಮತ್ತು ಸಾಲದ ಗರಿಷ್ಟ ಮಿತಿಯನ್ನು ಬ್ಯಾಂಕಿನ ಉಪ ನಿಯಮಗಳಲ್ಲಿ ಅಳವಡಿಸಿಕೊಂಡಿದ್ದು ಆ ಪ್ರಕಾರವೇ ಸದಸ್ಯರಿಗೆ ಸಾಲ ನೀಡಲಾಗುತ್ತಿದೆ. |
| ಎಫ್ | **ಕರಡು ಮತ್ತು ಸಂಶಯಾಸ್ಪದ ಸಾಲಗಳು:**<br>i) ಸಾಲ ವಸೂಲಾತಿಗೆ ಸಂಬಂದಿಸಿದಂತೆ ಬ್ಯಾಂಕಿನಲ್ಲಿರುವ ವ್ಯವಸ್ಥೆಗಳು ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸಿ ಅನುಸರಿಸುತ್ತಿರುವ ಬಗ್ಗೆ ಹಾಗೂ ಈ ಕುರಿತು ಆರ್.ಬಿ.ಐ ಮಾರ್ಗಸೂಚಿಗಳ ಪಾಲನೆ ಬಗ್ಗೆ. | ಸುಸ್ತಿ ಸಾಲದ ಮಾಹಿತಿಯ ಆಧಾರದ ಮೇಲೆ ಶಾಖೆಗಳು ಸಾಲಗಾರರಿಂದ ವಸೂಲಾತಿಗೆ ಕ್ರಮವಿಟ್ಟಿರುತ್ತದೆ ಮತ್ತು ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಎಲ್ಲಾ ಶಾಖೆಗಳು ಕೈಗೊಂಡ ಕ್ರಮದ ಬಗ್ಗೆ ಉಪಸಮಿತಿಯಲ್ಲಿ ಚರ್ಚಿಸಲಾಗುತ್ತಿದೆ. |
| | ii) ಬ್ಯಾಂಕ್ ವಿತರಿಸಿದ ಕ್ರೆಡಿಟ್ ಕಾರ್ಡ್‌ಗಳಲ್ಲಿ ಕ್ರೆಡಿಟ್‌ಕಾರ್ಡ್ ಸಾಲ ವಸೂಲಾತಿ ಬಗ್ಗೆ. | ಕ್ರೆಡಿಟ್‌ಕಾರ್ಡ್ ಸಾಲದ ವ್ಯವಹಾರಗಳು ಇರುವುದಿಲ್ಲ. |
| | iii) ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ. | ಬ್ಯಾಂಕಿನ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲು ಗಣಕಯಂತ್ರದ ತಂತ್ರಾಂಶವನ್ನು ಬಳಸಿಕೊಳ್ಳಲಾಗುತ್ತಿದೆ. ವರದಿ ಸಾಲಿನಲ್ಲಿ ಅಂತ್ಯಕ್ಕೆ ಬ್ಯಾಂಕಿನಲ್ಲಿ ರೂ.1524.61 ಲಕ್ಷಗಳನ್ನು ಕರಡು ಸಾಲದ ನಿಧಿಗೆ ಕಾದಿರಿಸಲಾಗಿದೆ. ಕರಡು |

| | | |
|---|---|---|
| | | ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು ಆ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ.<br>ಆರ್.ಬಿ.ಐ/ಶಾಸನಬದ್ಧ ಲೆಕ್ಕಪರಿಶೋಧಕರು ಗಮನಿಸಿರುವ ಎನ್.ಪಿ.ಎ ಖಾತೆಗಳನ್ನು ಗಣಕ ಯಂತ್ರದಲ್ಲಿ ಸರಿಪಡಿಸಿಕೊಂಡಿರುವುದಿಲ್ಲ.<br>**ಅನುವರ್ತನೆ : ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.** |
| | iv) ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತುಸುವಿಕೆ ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ | ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು ಆ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ. ಅನುತ್ಪಾದಕ ಆಸ್ತಿಗಳ ಪ್ರಮಾಣ ಮತ್ತು ಕಲ್ಪಿಸಿದ ಅವಕಾಶಗಳ ವಿವರಗಳ ಪಟ್ಟಿಯನ್ನು ಈ ವರದಿಗೆ ಲಗತಿಸಲಾಗಿರುತ್ತದೆ.<br>ಎನ್.ಪಿ.ಎ ಯಾಗಿ ವರ್ಗೀಕರಣಗೊಂಡ ಅಡವಾನ ಸಾಲದ ಸ್ವತ್ತುಗಳನ್ನು 3 ವರ್ಷಗಳಿಗೊಮ್ಮೆ ಮರುಮೌಲ್ಯಮಾಪನ ಮಾಡಿಸಬೇಕಾಗುತ್ತದೆ.<br>**ಅನುವರ್ತನೆ : ಪುನರ್ ಮೌಲ್ಯೀಕರಿಸುವ ಪದ್ಧತಿ ಜಾರಿಯಲ್ಲಿದೆ.** |
| | v) ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ. | ವರದಿ ಸಾಲಿನಲ್ಲಿ ಲೆಕ್ಕಪರಿಶೋಧನಾ ವೇಳೆಯಲ್ಲಿ ಗಮನಿಸಿದಂತೆ ಯಾವುದೇ ಸಾಲಗಳ ಮೇಲಿನ ಬಡ್ಡಿಯನ್ನು ಸಾಲದ ಆಸಲಿಗೆ ಸೇರಿಸಿದ ಯಾವುದೇ ಪ್ರಕರಣಗಳಿರುವುದಿಲ್ಲ. |
| | vi) ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಡಿಐಸಿಜಿಸಿ / ಇಸಿಜಿಸಿಯನ್ನೊಳಗೊಂಡಂತೆ | ಬ್ಯಾಂಕಿನಲ್ಲಿ ಸಾಲ ಮಂಜೂರು ಮಾಡುವ ಮುನ್ನ ಬ್ಯಾಂಕಿನ ಅಭಿಯಂತರರಿಂದ ಆಸ್ತಿಯ ಮೌಲ್ಯಮಾಪನ ಮಾಡಿಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. ವರದಿ ಸಾಲಿನಲ್ಲಿ ಯಾವುದೇ ಪುನಃ ಸ್ಪಷ್ಟೀಕರಣದ ಪ್ರಕರಣಗಳು |

| | | |
|---|---|---|
| | | ಇರುವುದಿಲ್ಲವೆಂದೂ ಹಾಗೂ ಯಾವುದೇ ಸಾಲಗಳು ಡಿಐಸಿಜಿಸಿ/ ಇಸಿಜಿಸಿ ಅಡಿಯಲ್ಲಿ ಇರುವುದಿಲ್ಲವೆಂದು ಬ್ಯಾಂಕಿನವರು ತಿಳಿಸಿರುತ್ತಾರೆ. |
| | vii) ಪುನಃಸ್ಪಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯ ಮಾಪನ | ಪುನಃ ಸ್ಪಷ್ಟೀಕರಣದ (Rehabilitation) ಕಾರ್ಯಕ್ರಮ ಇರುವುದಿಲ್ಲ. |
| | viii) ಸಾಲ ವಸೂಲಾತಿ ಮೊಬಲಗನ್ನು ಸಾಲದ ಆಸಲಿಗೆ ಬಡ್ಡಿಗೆ ಹೊಂದಾಣಿಕೆ ಮಾಡುವ ಬಗ್ಗೆ ಇರುವ ವ್ಯವಸ್ಥೆ. | ಸಾಮಾನ್ಯವಾಗಿ ಸಾಲ ವಸೂಲಾತಿ ಮೊಬಲಗನ್ನು ಮೊದಲು ಸಾಲದ ಬಡ್ಡಿಗೆ ನಂತರ ಉಳಿದ ಮೊಬಲಗನ್ನು ಆಸಲಿಗೆ ಹೊಂದಾಣಿಕೆ ಮಾಡುವ ವ್ಯವಸ್ಥೆ ಇರುತ್ತದೆ. |
| | ix) ರಾಜಿ ಸಂಧಾನದ ಮೂಲಕ ಏಕಕಾಲದಲ್ಲಿ ಸಾಲಗಳನ್ನು ಇತ್ಯರ್ಥ ಗೊಳಿಸಿರುವ ಪ್ರಕರಣಗಳು ರೂ.ಕೋಟಿಗೂ ಮೀರಿದ ಇಂತಹ ಪ್ರಕರಣಗಳು ಮತ್ತು ಆರ್.ಬಿ.ಐ ನಿಗದಿಗೊಳಿಸಿರುವ ಮಿತಿಗಿಂತ ಹೆಚ್ಚಿನ ಮೊಬಲಗು ವಿನಾಯಿತಿ ನೀಡಿರುವ ಪ್ರಕರಣಗಳ ಬಗ್ಗೆ. | ವರದಿ ಸಾಲಿನಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ. |
| | x) ಸಕ್ಷಮ ಪ್ರಾಧಿಕಾರದಡಿ ಮಾಡುವ ಮನ್ನಾ/ಕಲ್ಪಿಸಲಾದ ಅವಕಾಶಗಳು | ಯಾವುದೂ ಇರುವುದಿಲ್ಲ |
| | xi) ಸಾಲ ವಸೂಲಾತಿಯ ಕಾರ್ಯವಿಧಾನ ದಾವಾ ಹಾಗೂ ಡಿಕ್ರಿ ಪ್ರಕರಣಗಳ ನ್ನೊಳಗೊಂಡಂತೆ | ಪ್ರತಿ ಮಾಹೆ ಸಾಲ ವಸೂಲಾತಿ ಉಪ ಸಮಿತಿಯಲ್ಲಿ ಹಮ್ಮಿಕೊಂಡ ಯೋಜನೆ ಮತ್ತು ವಿಧಿವಿಧಾನಗಳನುಸಾರ ಸಾಧಿಸಲ್ಪಟ್ಟ ಪ್ರಗತಿ ಯನ್ನು ಆಡಳಿತ ಮಂಡಳಿಯಲ್ಲಿ ವಿಮರ್ಶಿಸಲಾ ಗುತ್ತಿದೆ.<br>ದಾವಾ ಪ್ರಕರಣಗಳ ಸಂಖ್ಯೆ : 19<br>ದಾವಾ ಮೊತ್ತ ರೂ.529.96 ಲಕ್ಷಗಳು<br>ಮುಂದುವರೆದು ನಮ್ಮ ಅಭಿಪ್ರಾಯದಲ್ಲಿ ಸಂಶಯಾತ್ಮಕ ಆಸ್ತಿಗಳಾಗಿ ವರ್ಗೀಕರಿಸಲ್ಪಟ್ಟ ಸಾಲದ ಖಾತೆಗಳಿಗೆ ಸಂಬಂಧಪಟ್ಟಂತೆ ಸಾಲಗಾರರು ನೀಡಿದ ದಾಖಲಾತಿಗಳ |

| | | |
|---|---|---|
| | | ನೈಜತೆಯನ್ನು ಪುನರ್ ಪರಿಶೀಲಿಸುವ ಮತ್ತು ಆ ಖಾತೆಗಳು ವಂಚನೆ ಪ್ರಕರಣಗಳಾಗಿರದೆ ಇರುವುದನ್ನು ಖಚಿತ ಪಡಿಸಿಕೊಳ್ಳುವ ವ್ಯವಸ್ಥೆ ಜಾರಿಗೊಳಿಸುವುದು ಕೂಡ ಅವಶ್ಯಕ.<br>**ಅನುವರ್ತನೆ : ಖಚಿತಪಡಿಸಿಕೊಳ್ಳಲಾಗುತ್ತಿದೆ.** |
| | xii) ಉದ್ದೇಶಪೂರ್ವಕ ಸುಸ್ತಿದಾರರನ್ನು ಗುರುತಿಸುವ ಬಗ್ಗೆ ಮತ್ತು ಇಂತಹ ಪ್ರಕರಣಗಳನ್ನು ವರದಿ ಮಾಡುವ ಬಗ್ಗೆ ಬ್ಯಾಂಕಿನ ನಿಯಮಗಳು | ಉದ್ದೇಶಪೂರ್ವಕ ನಿಯಮಾವಳಿಗಳನ್ನು ರಚಿಸಿಕೊಂಡಿರುತ್ತಾರೆ. |
| | **ಜಿ) ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:** ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯಬಹುದಾದ ಮಹತ್ವದ ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ. | |

**ಅಡಮಾನ ಸಾಲಗಳ ನ್ಯೂನ್ಯತೆಗಳು**

**1. ಜಯನಗರ ಶಾಖೆ :**

(1) ಖಾತೆ ಸಂಖ್ಯೆ : 02536000008 ರೂ.1,95,00,000/–

ಸಾಲ ನಿಯಮಾವಳಿಗಳ ಪ್ರಕಾರ ಮೌಲ್ಯಮಾಪಕರು ನಿಗಧಿ ಪಡಿಸಿದ ಸ್ವತ್ತಿನ ಮೌಲ್ಯದ ಶೇ.60 ರಷ್ಟು ಸಾಲ ನೀಡಬೇಕಾಗಿದ್ದು ಶೇ.85 ರಷ್ಟು ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಇವರ ತಂದೆ ಬ್ಯಾಂಕಿಗೆ ಅಡಮಾನ ಮಾಡಿರುವ ಸ್ವತ್ತಿನ ಮೌಲ್ಯ ಎರಡನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(2) ಖಾತೆ ಸಂಖ್ಯೆ : 02536000003 ರೂ,1,95,00,000/–

ಸಾಲಗಾರರ ಮಾಸಿಕ ಆದಾಯ ರೂ.6.96 ಲಕ್ಷಗಳಿದ್ದು, ಪಾವತಿಸ ಬೇಕಾದ EMI ಮಾಸಿಕ ಮೊತ್ತ ರೂ.9.75 ಲಕ್ಷಗಳಾಗಿರುತ್ತವೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ, ಸಾಲಗಾರರ ಮರುಪಾವತಿ ಸಾಮರ್ಥ್ಯ ಮತ್ತು ಕುಟುಂಬದ ಸದಸ್ಯರ ಆದಾಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(3) ಖಾತೆ ಸಂಖ್ಯೆ : 02531000001 ರೂ.60,00,000/–

ಅ) ಸಾಲಗಾರರಿಗೆ ಮನೆ ಖರೀದಿಗೆ ಸಾಲ ನೀಡಿದ್ದು ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.54 ಲಕ್ಷಗಳ ಸಾಲವನ್ನು ನೀಡಬಹುದಾಗಿದ್ದು ರೂ.60 ಲಕ್ಷಗಳ ಸಾಲವನ್ನು ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

ಆ) ಕಾನೂನು ವರದಿಯಲ್ಲಿ ಬಿ.ಡಿ.ಎ ಯಿಂದ ಸ್ವತ್ತನ್ನು ನೊಂದಾವಣಿ ಮಾಡಿಕೊಳ್ಳುವ ದಿನಾಂಕ ಮತ್ತು ಸ್ವತ್ತು ಹಂಚಿಕೆ ದಿನಾಂಕದ 90 ದಿನಗಳು ಮುಕ್ತಾಯವಾಗಿದ್ದು ಮತ್ತೆ ವಿಸ್ತರಿಸಲಾದ ದಿನಾಂಕದ ಪತ್ರವನ್ನು ಪಡೆಯಲು ತಿಳಿಸಿದ್ದು ಪಡೆದಿರುವುದಿಲ್ಲ.

**ಅನುವರ್ತನೆ : ವಿಸ್ತರಿಸಿದ ದಿನಾಂಕದ ಪತ್ರವನ್ನು ಪಡೆಯಲಾಗುವುದು.**

ಇ) ಮಂಜೂರಾದ ಸಾಲದ ಮೊತ್ತವನ್ನು 2025 ರಲ್ಲಿ ಬಿ.ಡಿ.ಎ.ಗೆ ಪಾವತಿಸಿದ್ದು ಇಲ್ಲಿಯವರೆವಿಗೂ ಸ್ವತ್ತನ್ನು ಬ್ಯಾಂಕಿನ ಹೆಸರಿಗೆ ನೋಂದಾಯಿಸಿಕೊಂಡಿರುವುದಿಲ್ಲ.

**ಅನುವರ್ತನೆ : ಸ್ವತ್ತು ಬ್ಯಾಂಕಿನ ಹೆಸರಿಗೆ ನೊಂದಾವಣೆಯಾಗುವವರೆಗೆ ಬ್ಯಾಂಕಿನಲ್ಲಿ ಅಡಮಾನ ಸಾಲ ಪಡೆದ ಸದಸ್ಯರಿಂದ ಜಾಮೀನು ಪಡೆಯಲಾಗಿದೆ. ಸ್ವತ್ತನ್ನು ಬ್ಯಾಂಕಿನ ಹೆಸರಿಗೆ ನೋಂದಾವಣೆ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.**

(4) ಖಾತೆ ಸಂಖ್ಯೆ : 02536000007 ರೂ.1,95,00,000/–

ಇ–ಖಾತಾದಲ್ಲಿ ಸ್ವತ್ತಿನ ಅಳತೆಯಲ್ಲಿ ವ್ಯತ್ಯಾಸವಿರುತ್ತದೆ.

**ಅನುವರ್ತನೆ : ವ್ಯತ್ಯಾಸವನ್ನು ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

**2. ಮತ್ತೀಕೆರೆ ಶಾಖೆ :**

(1) ಖಾತೆ ಸಂಖ್ಯೆ : 03403016254 ರೂ.85,00,000/–

ಸಾಲಗಾರರು 2021–22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಾಗಿದ್ದು ವೇತನ ಪಡೆಯುತ್ತಿದ್ದು ಮತ್ತು 2022–23ನೇ ಸಾಲಿನಾ ಆರ್ಥಿಕ ವರ್ಷದಲ್ಲಿ ವಯೋನಿವೃತ್ತಿ ಹೊಂದಿ ಪಿಂಚಣಿ ಮೊತ್ತವನ್ನು ಪಡೆಯುತ್ತಿದ್ದರು ಆಯಾ ವರ್ಷದ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವುದಿಲ್ಲ.

**ಅನುವರ್ತನೆ : ಸಾಲಗಾರರ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿನ ಆದಾಯ ಮತ್ತು ಪಿಂಚಣಿ ಮೊತ್ತವನ್ನು ಗಣನೆಗೆ ತೆಗೆದುಕೊಂಡು ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(2) ಖಾತೆ ಸಂಖ್ಯೆ : 03533000001 ರೂ.54,00,000/–

ಸಾಲಗಾರರಿಗೆ ನಿವೇಶನ ಕೊಳ್ಳಲು ಸಾಲ ನೀಡಲಾಗಿದೆ. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.52.65 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.54 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

**3. ವಿಜಯನಗರ ಶಾಖೆ :**

(1) ಖಾತೆ ಸಂಖ್ಯೆ : 04403006923 ರೂ.65,00,000/–

ಅ) ಸಾಲಗಾರರಿಗೆ ಮನೆ ಕೊಳ್ಳಲು ಸಾಲ ನೀಡಲಾಗಿದೆ. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.49.20 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.65 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

ಆ) ಪಾವತಿಸಿದ ಮೊತ್ತ ರೂ.1.18 ಲಕ್ಷಗಳ ವಿವರವನ್ನು ಮಾರಾಟ ಪತ್ರದಲ್ಲಿ ನಮೂದಿಸಿರುವುದಿಲ್ಲ.

ಇ) ಮಾರಾಟ ಕರಾರು ಪತ್ರದಲ್ಲಿ ರೂ.4.15 ಲಕ್ಷಗಳ ನಗದು ವಿವರವನ್ನು ನಮೂದಿಸಿದ್ದು ಮಾರಾಟ ಪತ್ರದಲ್ಲಿ ನಮೂದಿಸಿರುವುದಿಲ್ಲ.

**ಅನುವರ್ತನೆ : ಕರಾರು ಪತ್ರದಲ್ಲಿ ನಮೂದಿಸಿದ ಹಾಗೂ ಪಾವತಿಸಿದ ಮೊತ್ತಗಳನ್ನು ಮಾರಾಟ ಪತ್ರದಲ್ಲಿ ಪ್ರತ್ಯೇಕವಾಗಿ ನಮೂದಿಸುವ ಬದಲು ಒಟ್ಟುಗೊಡಿಸಿ ನಮೂದಿಸಿರುತ್ತಾರೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(2) ಖಾತೆ ಸಂಖ್ಯೆ : 04403006924 ರೂ.20,00,000/–

ಅ) ಸಾಲಗಾರರಿಗೆ ನಿವೇಶನ ಕೊಳ್ಳಲು ಸಾಲ ನೀಡಿದ್ದು. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.14.40 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.20 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

ಆ) ಮಾರಾಟ ಒಪ್ಪಂದದ ಕರಾರು ಪತ್ರದಲ್ಲಿ ರೂ.28.50 ಲಕ್ಷಗಳನ್ನು ನಮೂದಿಸಿದ್ದು, ಮಾರಾಟ ಪತ್ರದಲ್ಲಿ ರೂ.24 ಲಕ್ಷಗಳನ್ನು ನಮೂದಿಸಲಾಗಿರುತ್ತದೆ.

**ಅನುವರ್ತನೆ : ಕರ್ನಾಟಕ ರಾಜ್ಯ ಮುಂದ್ರಾಕ ಇಲಾಖೆಯ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವ ಮೊತ್ತವನ್ನು ನಮೂದಿಸಿರುತ್ತಾರೆ.**

**4. ಯಲಹಂಕ ಶಾಖೆ:**

(1) ಖಾತೆ ಸಂಖ್ಯೆ : 06403005754 – ರೂ.40,00,000/–

ಸಾಲಗಾರರಿಗೆ ಮನೆ ಕೊಳ್ಳಲು ಸಾಲ ನೀಡಿದ್ದು. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.27 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.40 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ಧವಾಗಿ ಮರುಪಾವತಿಸುತ್ತಿದ್ದಾರೆ.**

**5. ಬಿ.ಇ.ಎಸ್ ಕಾಲೇಜು ಶಾಖೆ :**

(1) ಖಾತೆ ಸಂಖ್ಯೆ : 08403000464 ರೂ.1,40,00,000/–

ಅ) ಸಾಲವನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ Take Over ಮಾಡಿಕೊಂಡು ಮನೆ ಕಟ್ಟುವ ಉದ್ದೇಶಕ್ಕೆ ಸಾಲ ನೀಡಲಾಗಿದೆ.

ಆ) ಅಭಿಯಂತರರ ಮೌಲ್ಯದ ಮೇಲೆ ಸಾಲದ ನಿಯಮಾವಳಿಗಳ ಪ್ರಕಾರ ರೂ.103.61 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.140 ಲಕ್ಷ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ, ಮನೆ ಕಟ್ಟಲು ತಗಲುವ ಅಂದಾಜು ವೆಚ್ಚದ ದರಪಟ್ಟಿಯ ಮೊತ್ತ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ಧವಾಗಿ ಮರುಪಾವತಿಸುತ್ತಿದ್ದಾರೆ.**

(2) ಖಾತೆ ಸಂಖ್ಯೆ : 08403000461 ರೂ.1,40,00,000/–

ಸಾಲಗಾರರ ವಾರ್ಷಿಕ ಒಟ್ಟು ವ್ಯವಹಾರ ರೂ.10 ಕೋಟಿಗಳಿಗಿಂತ ಮೀರಿದ್ದು ಆರ್ಥಿಕ ಲೆಕ್ಕ ಪರಿಶೋಧನಾ ತಃಖ್ತೆಗಳನ್ನು ಪಡೆಯಬೇಕಾಗಿದ್ದು, ಪಡೆದಿರುವುದಿಲ್ಲ.

**ಅನುವರ್ತನೆ : ಪಡೆಯಲು ಕ್ರಮಕೈಗೊಳ್ಳಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ಧವಾಗಿ ಮರುಪಾವತಿಸುತ್ತಿದ್ದಾರೆ.**

**6. ಬೇಗೂರು ಶಾಖೆ :**

(1) ಖಾತೆ ಸಂಖ್ಯೆ: 09536000002 ರೂ.1,95,00,000/–

ಅ) Cearsai ವರದಿಯಲ್ಲಿ ಹಣಕಾಸು ನೇರವು ನೀಡಿದ ಸಂಸ್ಥೆಯ ಕಲಂ ನಲ್ಲಿ ಬಹು ಹಣಕಾಸು ಸಂಸ್ಥೆಗಳು ಎಂದಿದ್ದು ಈ ನ್ಯೂನ್ಯತೆಯನ್ನು ಸರಿಪಡಿಸಿಕೊಳ್ಳಲು ಕ್ರಮ ಆಗತ್ಯ.

**ಅನುವರ್ತನೆ: ಸರಿಪಡಿಸಿಕೊಳ್ಳಲಾಗುವುದು.**

ಆ) ವಿಮೆ ಪಾಲಿಸಿಯ ಪ್ರತಿ ಲಭ್ಯವಿರುವುದಿಲ್ಲ.

**ಅನುವರ್ತನೆ : ಪಡೆಯಲಾಗಿದೆ.**

(2) ಖಾತೆ ಸಂಖ್ಯೆ: 09403000051 ರೂ.46,00,000/–

ಸಾಲಗಾರರಿಗೆ ಪ್ಲಾಟ್ ಕೊಳ್ಳಲು ಸಾಲ ನೀಡಿದ್ದು. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.36.73 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.46 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

(3) ಖಾತೆ ಸಂಖ್ಯೆ: 09403000053 ರೂ.97,00,000/–

ಅ) ಸಾಲಗಾರರಿಗೆ ಮನೆ ಕೊಳ್ಳಲು ಸಾಲ ನೀಡಿದ್ದು. ಮಾರಾಟ ಒಪ್ಪಂದದ ಕರಾರಿನ ಮೊತ್ತದ ಮೇಲೆ ಸಾಲ ನಿಯಮಾವಳಿಗಳ ಪ್ರಕಾರ ರೂ.64.86 ಲಕ್ಷಗಳ ಸಾಲ ನೀಡಬಹುದಾಗಿದ್ದು ರೂ.97 ಲಕ್ಷಗಳ ಸಾಲ ನೀಡಲಾಗಿದೆ.

**ಅನುವರ್ತನೆ : ಮೌಲ್ಯಮಾಪಕರು ನಿಗಧಿಪಡಿಸಿದ ಮೌಲ್ಯ ಮತ್ತು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ. ಸಾಲದ ಮೊತ್ತವನ್ನು ಕ್ರಮಬದ್ದವಾಗಿ ಮರುಪಾವತಿಸುತ್ತಿದ್ದಾರೆ.**

ಆ) ಮಾರಾಟ ಒಪ್ಪಂದದ ಕರಾರು ಪತ್ರದಲ್ಲಿ ರೂ.152 ಲಕ್ಷಗಳನ್ನು ನಮೂದಿಸಿದ್ದು, ಮಾರಾಟ ಪತ್ರದಲ್ಲಿ ರೂ.108.10 ಲಕ್ಷಗಳನ್ನು ನಮೂದಿಸಲಾಗಿರುತ್ತದೆ.

**ಅನುವರ್ತನೆ : ಕರ್ನಾಟಕ ರಾಜ್ಯ ಮುಂದ್ರಾಕ ಇಲಾಖೆಯ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವ ಮೊತ್ತವನ್ನು ನಮೂದಿಸಿರುತ್ತಾರೆ.**

ಇ) ಮೂಲ ಮಾರಾಟ ಒಪ್ಪಂದದ ಪತ್ರ ಲಭ್ಯವಿರುವುದಿಲ್ಲ.

**ಅನುವರ್ತನೆ : ಪಡೆಯಲಾಗಿದೆ.**

ಈ) ಕಾನೂನು ಸಲಹೆಗಾರರ ವರದಿಯಲ್ಲಿ ಮನೆ ಬದಲಿಗೆ ಖಾಲಿ ನಿವೇಶನವೆಂದು ಉಲ್ಲೇಖಿಸಲಾಗಿದೆ.

**ಅನುವರ್ತನೆ : ಸರಿಪಡಿಸಿದ ವರದಿಯನ್ನು ಪಡೆಯಲಾಗಿದೆ.**

ಉ) ಕಾನೂನು ಸಲಹೆಗಾರರ ವರದಿಯಲ್ಲಿ ಮಾರಾಟ ಒಪ್ಪಂದದ ಪತ್ರಕ್ಕೆ ಕರ್ನಾಟಕ ಮುದ್ರಾಂಕ ಶುಲ್ಕ ಕಾಯಿದೆ ಪ್ರಕಾರ ನಿಗಧಿಪಡಿಸಿದ ಶುಲ್ಕವನ್ನು ಪಾವತಿಸಬೇಕೆಂದು ತಿಳಿಸಿದರು ಪಾವತಿಸಿರುವುದಿಲ್ಲ.

**ಅನುವರ್ತನೆ : ನಿಗಧಿತ ಶುಲ್ಕವನ್ನು ಮುಂದ್ರಾಕ ಇಲಾಖೆಗೆ ಪಾವತಿಸಿ ಮಾರಾಟ (ಕ್ರಯ) ಪತ್ರವನ್ನು ನೋಂದಾವಣಿ ಮಾಡಿಕೊಂಡಿರುತ್ತಾರೆ.**

ಊ) ವಿಮೆ ಪಾಲಿಸಿಯ ಪ್ರತಿ ಲಭ್ಯವಿರುವುದಿಲ್ಲ.

**ಅನುವರ್ತನೆ : ಪಡೆಯಲಾಗಿದೆ.**

**7. ಸಿಬ್ಬಂದಿ ಅಡಮಾನ ಸಾಲ :**

1. ಖಾತೆ ಸಂಖ್ಯೆ : 01504001024 – ರೂ.43,00,000/–

ಅ) ಮಾರಾಟ ಪತ್ರದಲ್ಲಿ ಬ್ಯಾಂಕು ನೀಡಿರುವ ಸಾಲದ ಮೊತ್ತ ಮತ್ತು ಮಾರಾಟಗಾರರಿಗೆ ಪಾವತಿಸಿದ್ದ ಮೊತ್ತದ ವಿವರವನ್ನು ಉಲ್ಲೇಖಿಸಿರುವುದಿಲ್ಲ.

**ಅನುವರ್ತನೆ : ತಿದ್ದುಪಡಿ ಪತ್ರ ಪಡೆಯಲು ಕ್ರಮಕೈಗೊಳ್ಳಲಾಗಿದೆ.**

ಆ) ಸಿಬ್ಬಂದಿ ಸಾಲ ನಿಯಮಾವಳಿಗಳ ಪ್ರಕಾರ ಒಟ್ಟು ಕಡಿತಗಳು ಶೇ.50ಕಿಂತ ಕಡಿಮೆ ಇರಬೇಕಾಗಿದ್ದು ಶೇ.50ರ ಮಿತಿಗಿಂತ ಹೆಚ್ಚಾಗಿರುತ್ತದೆ.

**ಅನುವರ್ತನೆ : ಸಿಬ್ಬಂದಿಯ ವೇತನ ಮತ್ತು ಬಾಡಿಗೆ ಆದಾಯವನ್ನು ಪರಿಗಣಿಸಿ ಸಾಲ ಮಂಜೂರು ಮಾಡಲಾಗಿದೆ.**

ಇ) ಸಾಲದ ಅವಧಿಯು ಸಿಬ್ಬಂದಿಯ ಉಳಿದ ಸೇವಾ ಅವಧಿಗಿಂತ ಹೆಚ್ಚಾಗಿರುತ್ತದೆ.

**ಅನುವರ್ತನೆ : ಸಿಬ್ಬಂದಿ ವಯೋನಿವೃತ್ತಿ ಸೌಲಭ್ಯದ ಮೊತ್ತದಲ್ಲಿ ಸಾಲದ ಖಾತೆಯನ್ನು ಮುಕ್ತಾಯ ಮಾಡುವುದಾಗಿ ಒಪ್ಪಿಗೆ ಪತ್ರ ನೀಡಿರುತ್ತಾರೆ.**

**8. ಇತರೆ ನ್ಯೂನ್ಯತೆಗಳು**

1. ಈ ಕೆಳಕಂಡ ಅಡಮಾನ ಸಾಲದ ಖಾತೆಗಳಲ್ಲಿ ಬಿಡುಗಡೆಯಾದ ಸಾಲದ ಮೊತ್ತದಲ್ಲಿ ಹೆಚ್ಚಿನ ಮೊತ್ತವನ್ನು ಉಳಿತಾಯ/ ಠೇವಣಿಗಳಲ್ಲಿ ಹೂಡಿಕೆ ಮಾಡಿರುತ್ತಾರೆ.

1) 02536000005
2) 04403006928
3) 05403003534
4) 05403003539
5) 09536000002
6) 09536000001
7) 09403000049

**ಅನುವರ್ತನೆ : ಖಾತೆ ಸಂಖ್ಯೆ : 04403006928, 05403003534, 09536000001 ಮತ್ತು 09403000049 ಈ ಖಾತೆಗಳಲ್ಲಿನ ಠೇವಣಿ ಮೊತ್ತವನ್ನು ಹಿಂಪಡೆದಿರುತ್ತಾರೆ.**

**ಉಳಿದ ಠೇವಣಿ ಖಾತೆಗಳಲ್ಲಿ ಹೂಡಿಕೆ ಮಾಡಿರುವ ಅಡಮಾನ ಸಾಲದ ಮೊತ್ತವನ್ನು ಸಾಲ ಪಡೆದ ಉದ್ದೇಶಕ್ಕೆ ಬಳಸಿಕೊಳ್ಳುವಂತೆ ಸಾಲಗಾರರಿಗೆ ತಿಳಿಸಲಾಗಿದೆ.**

2. ಈ ಕೆಳಕಂಡ ಅಡಮಾನ ಸಾಲದ ಖಾತೆಗಳಲ್ಲಿ ಬಿಡುಗಡೆಯಾದ ಸಾಲದ ಮೊತ್ತ ಉಳಿತಾಯ ಖಾತೆಗೆ ಜಮೆಯಾಗಿದ್ದು ಉಳಿತಾಯ ಖಾತೆಯಲ್ಲಿ ಬಾಕಿ ಇರುವ ಸಾಲದ ಮೊತ್ತದಲ್ಲಿ ಪ್ರತಿ ತಿಂಗಳು ಸಾಲದ ಕಂತು ಸಾಲದ ಖಾತೆಗೆ ಜಮೆಯಾಗುತ್ತಿದೆ.

1) 02536000006
2) 02536000003
3) 05403003537
4) 05403003536
5) 08403000465
6) 09403000050

**ಅನುವರ್ತನೆ : ಖಾತೆ ಸಂಖ್ಯೆ : 02536000003 – IMPS ಮೂಲಕ ವರ್ಗಾವಣೆಯಾದ ಮೊತ್ತದಲ್ಲಿ ಸಾಲದ ಕಂತುಗಳ ಮೊತ್ತವನ್ನು ಪಡೆಯಲಾಗುತ್ತಿದೆ.**

**ಖಾತೆ ಸಂಖ್ಯೆ : 08403000465 ಇವರ ಉಳಿತಾಯ ಖಾತೆಯಲ್ಲಿ ಸಾಲ ಪಡೆಯುವುದಕ್ಕೆ ಮೊದಲೆ ಬಾಕಿ ಇದ್ದ ಮೊತ್ತದಲ್ಲಿ ಸಾಲದ ಕಂತುಗಳ ಮೊತ್ತವನ್ನು ಪಡೆಯಲಾಗುತ್ತಿದೆ.**

**ಖಾತೆ ಸಂಖ್ಯೆ : 09403000050 – ಪ್ರಸ್ತುತ ನಗದು ಮೂಲಕ ಸಾಲದ ಕಂತುಗಳನ್ನು ಪಾವತಿಸುತ್ತಿದ್ದಾರೆ. ಉಳಿದ ಖಾತೆಗಳಲ್ಲಿ ಬಿಡುಗಡೆಯಾದ ಸಾಲದ ಮೊತ್ತದಲ್ಲಿ ಸಾಲದ ಕಂತುಗಳು ಸಾಲದ ಖಾತೆಗೆ ಜಮೆಯಾಗದಂತೆ ಕ್ರಮವಹಿಸಲಾಗಿದೆ.**

3. ಮತ್ತೀಕೆರೆ ಮತ್ತು ವಿಜಯನಗರ ಶಾಖೆಗಳಲ್ಲಿ ಕೆಲವು ಆಭರಣ ಸಾಲಗಾರರು ಪೂರ್ತಿಮೊತ್ತವನ್ನು ಪಾವತಿಸಿದ ನಂತರ ಸಾಲದ ಖಾತೆಯನ್ನು ಮುಕ್ತಾಯ ಮಾಡಿ ಅದೇ ಸಾಲಗಾರರಿಗೆ ಅದೇ ದಿವಸ ಮತ್ತೆ ಆಭರಣ ಸಾಲಗಳನ್ನು ನೀಡಲಾಗಿದೆ.

**ಅನುವರ್ತನೆ : ಆಭರಣ ಸಾಲದ ಖಾತೆಯನ್ನು ಮುಕ್ತಾಯ ಮಾಡಿದ ನಂತರದ ದಿನಗಳಲ್ಲಿ ಸಾಲ ನೀಡಲು ಕ್ರಮಕೈಗೊಳ್ಳಲಾಗಿದೆ.**

**ದಿನಾಂಕ : 31.03.2026ಕ್ಕೆ ಅಂತ್ಯಕ್ಕೆ ಬಾಕಿ ಬರಬೇಕಾದ ಸಾಲ ಮತ್ತು ಮುಂಗಡಗಳು**

(ರೂ. ಲಕ್ಷಗಳಲ್ಲಿ)

| ಸಾಲಗಳ ಸ್ವರೂಪ | ಆರಂಭದ ಬಾಕಿ | ಪ್ರಸಕ್ತ ಸಾಲಿನಲ್ಲಿ ಹಂಚಿದ ಸಾಲ | ಪ್ರಸಕ್ತ ಸಾಲಿನಲ್ಲಿ ವಸೂಲಿಸಿದ ಸಾಲ | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ |
|---|---|---|---|---|---|---|
| ಆಭರಣ ಸಾಲಗಳು | 61.30 | 188.56 | 135.63 | 114.23 | 114.23 | – |
| ಓವರ್ ಡ್ರಾಫ್ಟ್ | 236.06 | – | – | 236.06 | 236.06 | – |
| ಆಧಾರವಿಲ್ಲದ ಸಾಲಗಳು | 256.81 | 36.58 | 116.34 | 177.05 | 177.05 | – |
| ವಾಹನ ಸಾಲಗಳು | 153.10 | 142.77 | 52.93 | 242.94 | 242.94 | – |
| ಸ್ಥಿರಾಸ್ತಿ ಮೇಲಿನ ಸಾಲಗಳು | 14984.28 | 5786.67 | 4666.12 | 16104.83 | 16104.83 | – |
| ಠೇವಣಿ ಮೇಲಿನ ಸಾಲಗಳು | 205.44 | 432.56 | 452.79 | 185.21 | 185.21 | – |

| | | | | | | |
|---|---|---|---|---|---|---|
| ಸಿಬ್ಬಂದಿ ಮುಂಗಡ | 1139.41 | 207.45 | 299.42 | 1047.44 | 1047.44 | – |
| ಠೇವಣಿ ಮೇಲಿನ ಓವರ್ ಡ್ರಾಫ್ಟ್ | 17.67 | 266.65 | 284.30 | 0.02 | 0.02 | – |
| Restructured ಸಾಲಗಳು | 483.95 | – | 161.01 | 322.94 | 322.94 | – |
| **ಒಟ್ಟು ರೂ** | **17538.02** | **7061.24** | **6168.54** | **18430.72** | **18430.72** | – |

| | | |
|---|---|---|
| **28** | ಸುಸ್ತಿ ಸಾಲಗಳ ವಿವರ | ವರದಿ ಸಾಲಿನ ಅಂತ್ಯಕ್ಕೆ ಸುಸ್ತಿ ಸಾಲದ ಮೊತ್ತ ರೂ. 902.23ಲಕ್ಷಗಳು ಇರುತ್ತದೆ. |
| | 1) ಶೇಕಡವಾರು ಸುಸ್ತಿ ಸಾಲಗಳ ಬಗ್ಗೆ ವಿಮರ್ಶೆ.<br>ದಿನಾಂಕ 31.03.2026ಕ್ಕೆ ಇದ್ದಂತೆ ಸುಸ್ತಿ ಸಾಲಗಳ ವರ್ಗೀಕರಣ. | ಸುಸ್ತಿ ಸಾಲವು ಒಟ್ಟು ಸಾಲದ ಶೇ.4.90 ರಷ್ಟಿರುತ್ತದೆ. |

**2) ದಿನಾಂಕ 31.03.2026ಕ್ಕೆ ಇದ್ದಂತೆ ಸುಸ್ತಿ ಸಾಲಗಳ ವರ್ಗೀಕರಣ**

| ಕ್ರ. ಸಂ | ಅವಧಿ | ಅಡಮಾನ ಸಾಲ | ಆಧಾರ ರಹಿತ ಸಾಲ | ಸಂಬಳಾ ಧಾರಿತ ಸಾಲ | ಠೇವಣಿ ಮೇಲಿನ ಸಾಲ | ಚಿನ್ನಾಭರಣಗಳ ಸಾಲ | ಓ.ಡಿ. ಸಾಲ | ವಾಹ ಸಾಲ | Restructured ಸಾಲ | ಒಟ್ಟು |
|---|---|---|---|---|---|---|---|---|---|---|
| | ಒಂದು ವರ್ಷದೊಳಗೆ | 23.96 | 4.30 | 0 | 0 | 0.54 | 0 | 0.31 | 0.19 | 29.30 |
| | 1 ರಿಂದ 2 ವರ್ಷದೊಳಗೆ | 8.84 | 4.66 | 0 | 0 | 0 | 96.06 | 0 | 0 | 109.56 |
| | 2 ರಿಂದ 3 ವರ್ಷದೊಳಗೆ | 5.87 | 1.65 | 0 | 0 | 0 | 0 | 0 | 0 | 7.52 |
| | 3 ರಿಂದ 4 ವರ್ಷದೊಳಗೆ | 0 | 2.24 | 0 | 0 | 0 | 0 | 0 | 0 | 2.24 |
| | 4 ರಿಂದ 5 ವರ್ಷದೊಳಗೆ | 0 | 1.71 | 0 | 0 | 0 | 0 | 0 | 0 | 1.71 |
| | 5 ರಿಂದ 6 ವರ್ಷದೊಳಗೆ | 24.11 | 0 | 0 | 0 | 0 | 140.00 | 0 | 0 | 164.11 |
| | 6 ವರ್ಷ ಮೇಲ್ಪಟ್ಟು | 566.90 | 19.44 | 1.45 | 0 | 0 | 0 | 0 | 0 | 587.79 |
| | ಒಟ್ಟು | **629.68** | **34** | **1.45** | **0** | **0.54** | **236.06** | **0.31** | **0.19** | **902.23** |

| | | |
|---|---|---|
| | 3) ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತಃಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು) | ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತಃಖ್ತೆಯನ್ನು ದೃಢೀಕರಿಸಿ. ಲಗತ್ತಿಸಿದೆ. ಈ ತಃಖ್ತೆಯ ಅನುಸಾರ 31.03.2026ಕ್ಕೆ ಒಟ್ಟು ಅನುತ್ಪಾದಕ ಆಸ್ತಿಯು ರೂ.1700.20 ಲಕ್ಷಗಳಾಗಿದ್ದು ಅದು ಒಟ್ಟು ಸಾಲ ಮತ್ತು ಮುಂಗಡ ಮೊತ್ತಕ್ಕೆ ಶೇ.9.22 ರಷ್ಟಿರುತ್ತದೆ. ದಿ.31.03.2026ಕ್ಕೆ ನಿವ್ವಳ ಅನುತ್ಪಾದಕ ಆಸ್ತಿಯು ವರ್ಷಾಂತ್ಯಕ್ಕೆ ಶೇ.1.04 ರಷ್ಟಿರುತ್ತದೆ ದಿ: 31.03.2026ಕ್ಕೆ ಅನುತ್ಪಾದಕ ಸಾಲಗಳಿಗೆ ಕಲ್ಪಿಸಬೇಕಾದ ಅವಕಾಶದ ಮೊತ್ತ ರೂ.1445.06 ಲಕ್ಷಗಳಾಗಿದ್ದು ವರ್ಷಾಂತ್ಯಕ್ಕೆ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿಯಲ್ಲಿ ರೂ.1524.61 ಲಕ್ಷಗಳು ಇರುತ್ತದೆ. ಆದ್ದರಿಂದ ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಇರುವ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ.<br>ಆರ್.ಬಿ.ಐ/ಶಾಸನಬದ್ದ ಲೆಕ್ಕಪರಿಶೋಧಕರು ಗಮನಿಸಿರುವ ಎನ್.ಪಿ.ಎ ಖಾತೆಗಳನ್ನು ಗಣಕಯಂತ್ರದಲ್ಲಿ ಸರಿಪಡಿಸಿಕೊಂಡಿರುವುದಿಲ್ಲ.<br>**ಅನುವರ್ತನೆ : ಸರಿಪಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.** |
| 29 | ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಿರುವ ಸಾಲಗಳ ಬಾಕಿ ಮೊತ್ತಗಳು ಬ್ಯಾಂಕಿನಲ್ಲಿ ನಿರ್ವಹಿಸಿರುವ ಸದಸ್ಯರ ಸಾಲಗಳ ರಿಜಿಸ್ಟರ್‌ಗಳಲ್ಲಿನ ಮೊತ್ತಗಳಿಗೆ ತಾಳೆ ಹೊಂದಿದೆಯೇ? | ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಿರುವ ಸಾಲಗಳ ಬಾಕಿ ಮೊತ್ತಗಳು ಬ್ಯಾಂಕಿನಲ್ಲಿ ನಿರ್ವಹಿಸಿರುವ ಸದಸ್ಯರ ಸಾಲಗಳ ರಿಜಿಸ್ಟರ್‌ಗಳಲ್ಲಿನ ಮೊತ್ತಗಳಿಗೆ ತಾಳೆ ಹೊಂದಿರುತ್ತದೆ. |
| 30 | ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ ಕೆಳಕಂಡಂತೆ ವಿವರಗಳನ್ನು ನೀಡುವುದು. | ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲವೆಂದು ಕಾರ್ಯದರ್ಶಿಯವರು ಭಾರತೀಯ ರಿಸರ್ವ್ ಬ್ಯಾಂಕಿಗೆ ನಿಗದಿತ ನಮೂನೆಯಲ್ಲಿ ಸಲ್ಲಿಸಿರುತ್ತಾರೆ. |

| ಕ್ರ.ಸಂ | ನಿರ್ದೇಶಕರ ಹೆಸರು | ಬಾಕಿ ಸಾಲದ ಮೊತ್ತ (ಅಸಲು) | ಸುಸ್ತಿ ಸಾಲದ ಬಗ್ಗೆ | | ಯಾವ ದಿನಾಂಕದಿಂದ ಸುಸ್ತಿಯಾಗಿದೆ | ಷರಾ |
|---|---|---|---|---|---|---|
| | | | ಅಸಲು | ಬಡ್ಡಿ | | |
| | | | ಅನ್ವಯಿಸುವುದಿಲ್ಲ | | | |

| | | |
|---|---|---|
| 31 | a) i) ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ | ಆದ್ಯತಾ ವಲಯದ ಬಾಕಿ ಸಾಲದ ಮೊತ್ತ ರೂ.1694.65 ಲಕ್ಷಗಳಿದ್ದು, ಐ.ಡಿ.ಬಿ.ಐ ಬ್ಯಾಂಕಿನಿಂದ ರೂ.17000 ಲಕ್ಷಗಳ PSL Certificate ಖರೀದಿಸಿದ್ದು, ಒಟ್ಟು ಆದ್ಯತಾ ವಲಯುದ ವೊತ್ತ ರೂ.18694.65 ಲಕ್ಷಗಳಾಗಿರುತ್ತದೆ. |
| | ii) ಸಾಲಾಖೈರಿಗೆ ನೀಡಿರುವ ಒಟ್ಟು ಮುಂಗಡದ ಶೇಕಡಾವಾರು ಪ್ರಮಾಣ | ಕಳೆದ ವರ್ಷದ ಸಾಲದ ಬಾಕಿ ಮತ್ತು PSL Certificate ಸೇರಿ ರೂ. 40788.03 ಲಕ್ಷಗಳಾಗಿರುತ್ತದೆ. ಇದು ಪ್ರಸಕ್ತ ಸಾಲಿನಲ್ಲಿ ಆದ್ಯತಾ ವಲಯದ ಸರಾಸರಿ ಶೇ.64.20 ರಷ್ಟಿರುತ್ತದೆ. |
| | iii) ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ. | ವರ್ಷಾಂತ್ಯಕ್ಕೆ ದುರ್ಬಲ ವರ್ಗದವರಿಗೆ ನೀಡಿರುವ ಬಾಕಿ ಸಾಲದ ಪ್ರಮಾಣವು ರೂ.176.75 ಲಕ್ಷಗಳಾಗಿರುತ್ತದೆ. |
| | iv) ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ | ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರವಾಣವು ಶೇ.1.32 ಆಗಿರುತ್ತದೆ. |

ಬಿ) ಎಲ್ಲಾ ತರಹದ ಸಾಲ, ಮುಂಗಡ, ಕ್ಯಾಷ್ ಕ್ರೆಡಿಟ್, ಓವರ್ ಡ್ರಾಫ್ಟ್ ಇತ್ಯಾದಿಗಳ ಮೇಲೆ [ವ್ಯಾಖ್ಯಾನ] ವಿವರಣೆ

| ಕ್ರ ಸಂ | ಸಾದ ಸ್ವರೂಪ | ಸಾಲಗಳ ಅವಧಿ | ಸಾಲದ ಮಿತಿ 2025–26 |
|---|---|---|---|
| 1 | ಚಿನ್ನಾಭರಣ ಸಾಲ | 12 | ರೂ.10 ಲಕ್ಷಗಳು |
| 2 | ವಾಹನ ಸಾಲ | 60 | ರೂ.40 ಲಕ್ಷಗಳು |
| | | ಅಡಮಾನ ಸಾಲಗಳು | |
| 3 | ವ್ಯಾಪಾರ ಅಭಿವೃದ್ಧಿ ಸಾಲ | 120 | ರೂ.195 ಲಕ್ಷಗಳು |
| 4 | ಮನೆ ಕಟ್ಟಲು/ಕೊಳ್ಳಲು | 180 | ರೂ.140 ಲಕ್ಷಗಳು |
| 5 | ನಿವೇಶನ ಕೊಳ್ಳಲು | 180 | ರೂ.60 ಲಕ್ಷಗಳು |
| 6 | ನಿವೇಶನ ಕೊಳ್ಳಲು ಜೊತೆಗೆ ಕಟ್ಟಡ ಕಟ್ಟಲು | 180 | ರೂ.140 ಲಕ್ಷಗಳು |
| 7 | ಸಾಲ ತೀರಿಸಲು | 180 | ರೂ.195 ಲಕ್ಷಗಳು |
| 8 | ಮದುವೆ ಉದ್ದೇಶಕ್ಕೆ | 180 | ರೂ.25 ಲಕ್ಷಗಳು |
| 9 | ಮನೆ ರಿಪೇರಿ/ನವೀಕರಣ | 180 | ರೂ.30 ಲಕ್ಷಗಳು |
| 10 | ವಿದ್ಯಾಭ್ಯಾಸಕ್ಕೆ | 180 | ರೂ.25 ಲಕ್ಷಗಳು |
| 11 | ಬಾಡಿಗೆ ರಿಯಾಯಿತಿ | 120 | ರೂ.150 ಲಕ್ಷಗಳು |

ವರದಿ ಸಾಲಿನಲ್ಲಿ ಸಾಲದ ಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಏಕ ಸಾಲಗಾರನಿಗೆ ಮತ್ತು ಗುಂಪು ಸಾಲಗಾರರಿಗೆ ಅನುಕ್ರಮವಾಗಿ ಹಿಂದಿನ ಆರ್ಥಿಕ ವರ್ಷದ Tier 1 ಬಂಡವಾಳ ನಿಧಿಯ (ಶೇ.15 ಮತ್ತು ಶೇ.25) ಮೀರದಂತೆ ಸಾಲಗಳನ್ನು ಮಂಜೂರು ಮಾಡಬಹುದಾಗಿರುತ್ತದೆ.

Audited tier 1 capital (in crores)

| Particulars | Amount in Rs. |
|---|---|
| Net paid up capital | -2.27 |
| Total Reserves & Surplus | 15.50 |
| Total | 13.23 |
| Single Exposure Limit 15% of Tier 1 Capital | 1.98 |
| Group Exposure Limit 25% of Tier 1 Capita | 3.30 |

ನಮಗೆ ಕಂಡು ಬಂದ ನ್ಯೂನ್ಯತೆಗಳನ್ನು ಕಂಡಿಕೆ "ಎಫ್"ದಲ್ಲಿ ವಿವರಿಸಲಾಗಿದೆ.

| | | |
|---|---|---|
| 32 | **ನಾನ್ ಬ್ಯಾಂಕಿಂಗ್ ಆಸ್ತಿಗಳು:**<br>ಬ್ಯಾಂಕೇತರ ಆಸ್ತಿಗಳು (Non Banking Asset) | |

| ಜಮೀನು ಆಸ್ತಿಯ ವಿವರ | ವಿ.ಪಿ.ಸಿ/ ಸಿ.ಟಿ.ಎಸ್ ನಂ | ಖರೀದಿಯ ಮೌಲ್ಯ |
|---|---|---|
| ನಂ.3, 3ನೇ ಬಿ ಕ್ರಾಸ್, ಜೆ.ಸಿ.ನಗರ, ಬೆಂಗಳೂರು–86 ಒಟ್ಟು 1200 ಚದರ ಅಡಿಗಳಲ್ಲಿ 3 ಅಂತಸ್ತಿನ ಕಟ್ಟಡವಿರುತ್ತದೆ. | PID No. 13-61-3 | 1,37,90,915/– |

ಬ್ಯಾಂಕೇತರ ಆಸ್ತಿಯನ್ನು ದಿನಾಂಕ: 18.03.2026ರಂದು ಬಹಿರಂಗ ಹರಾಜಿನ ಮೂಲಕ ರೂ.1,70,00,000/–ಗಳಿಗೆ ಮಾರಟ ಮಾಡಲಾಗಿದೆ. ದಿನಾಂಕ:31.03.2026ರಂದು ರೂ. 1,37,90,915/–ಗಳನ್ನು ಬ್ಯಾಂಕೇತರ ಆಸ್ತಿಗೆ ಜಮಾ ತೆಗೆದುಕೊಂಡು ಬಾಕಿ ಉಳಿದ ಮೊತ್ತ ರೂ.32,09,085/–ಗಳನ್ನು ಆದಾಯದ ಖಾತೆಗೆ ಜಮಾ ತೆಗೆದುಕೊಳ್ಳಲಾಗಿದೆ.

| | | |
|---|---|---|
| 33 | **ಆಸ್ತಿ ಜವಾಬ್ದಾರಿ ನಿರ್ವಹಣೆ**<br>I) ಈ ಸಂಬಂಧ ಜಾರಿಯಲ್ಲಿರುವ ಕಾರ್ಯನೀತಿ ಮತ್ತು ಆರ್.ಬಿ.ಐ ಮಾರ್ಗಸೂಚಿಗಳನ್ನು ಪಾಲಿಸುತ್ತಿರುವ ಬಗ್ಗೆ | ಆಸ್ತಿ ಜವಾಬ್ದಾರಿ ನಿರ್ವಹಣೆಯನ್ನು ಗಣಕೀಕೃತಗೊಳಿಸಲಾಗಿರುತ್ತದೆ. ಸಾಮಾನ್ಯವಾಗಿ ಆರ್.ಬಿ.ಐ ಮಾರ್ಗಸೂಚಿಗಳನ್ನು ಪಾಲಿಸಲಾಗಿರುತ್ತದೆ. |
| | ii) ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿಯ ಕಾರ್ಯಚಟುವಟಿಕೆ ಕುರಿತು ನಿಯತಕಾಲಿಕವಾಗಿ ದ್ರವ್ಯಾಸ್ಥಿ ನಿರ್ವಹಣೆ ಯಾಗುತ್ತಿರುವ ಬಗ್ಗೆ. | ಪ್ರತ್ಯೇಕ ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿ ಇರುತ್ತದೆ. ಪ್ರತಿ ತ್ರೈಮಾಸಿಕ ಆಧಾರದ ಮೇಲೆ ಸಭೆ ಕರೆದು ದ್ರವ್ಯಾಸ್ತಿ ನಿರ್ವಹಣೆಯಾಗುತ್ತಿರುವ ಬಗ್ಗೆ ಚರ್ಚಿಸಲಾಗಿರುತ್ತದೆ. |
| 34 | **ಡೆಡ್ ಸ್ಟಾಕು : ವಿವರಣೆ** | ವರದಿ ವರ್ಷದಲ್ಲಿ ಯಾವುದೇ ಆಸ್ತಿಯನ್ನು ಡೆಡ್ ಸ್ಟಾಕ್ ಎಂದು ವರ್ಗೀಕರಿಸಿರುವುದಿಲ್ಲ. |
| 35 | **ಕಟ್ಟಡ ವಿವರಣೆ** | ಬ್ಯಾಂಕಿನ ಕೇಂದ್ರ ಕಛೇರಿ, ಮತ್ತೀಕೆರೆ ಮತ್ತು ಯಲಹಂಕ ಶಾಖೆ ಇವುಗಳ ಕಟ್ಟಡ ಬ್ಯಾಂಕಿನ ಸ್ವಂತ ಕಟ್ಟಡಗಳಾಗಿರುತ್ತವೆ. |

| | | |
|---|---|---|
| 36 | ಬಿಲ್ಸ್ ಡಿಸ್ಕೌಂಟ್ ಕ್ಲಿಯರಿಂಗ್ ಡ್ರಾಫ್ಟ್ ಇತ್ಯಾದಿಗಳು | ಬ್ಯಾಂಕಿನಲ್ಲಿ ಚೆಕ್ ಅಥವಾ ಬಿಲ್ ಡಿಸ್ಕೌಂಟ್ ವ್ಯವಹಾರ ಮಾಡುತ್ತಿಲ್ಲ. |
| 37 | ಬಡ್ಡಿ ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು | ಸಾಲ ಮತ್ತು ಠೇವಣಿಗಳ ಮೇಲೆ ಬಡ್ಡಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಆಧಾರ ದನ್ವಯ ಮತ್ತು ಆಡಳಿತ ಮಂಡಳಿಯ ತೀರ್ಮಾನದಂತೆ ಮಾಡಲಾಗುತ್ತಿದೆ. |
| 38 | ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳ ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ? | ಶಾಖೆಗಳ ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ವಿವರಗಳನ್ನು ಪರಿಶೀಲಿಸಿದಾಗ ವರದಿ ವರ್ಷಾಂತ್ಯಕ್ಕೆ ಕೇಂದ್ರ ಕಛೇರಿ ಮತ್ತು ಶಾಖೆಗಳ ಹೊಂದಾಣಿಕೆ ಖಾತೆಗಳ ಮಧ್ಯೆ ವ್ಯತ್ಯಾಸ ಕಂಡುಬಂದಿರುವುದಿಲ್ಲ. |
| 39 | ಆಂತರಿಕ ಹತೋಟಿ<br>a) ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗಸೂಚಿಗಳು / ಆದೇಶ/ಕೈಪಿಡಿಗಳ ಬಗ್ಗೆ<br><br>b) ಲೆಕ್ಕಪತ್ರಗಳ ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ / ಸಮನ್ವಯ ಉಪ ಪುಸ್ತಕಗಳ ಮೇಲೆ ಹತೋಟಿ<br><br>i) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ / ಹತೋಟಿಗಳು ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ. | ಲೆಕ್ಕಪತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅವಶ್ಯವಿದ್ದ ಮಾರ್ಗಸೂಚಿಗಳನ್ನು ಕೇಂದ್ರ ಕಛೇರಿಯು ಎಲ್ಲಾ ಶಾಖೆಗಳಿಗೆ ಸುತ್ತೋಲೆಯ ಮುಖಾಂತರ ಕಳುಹಿಸಿಕೊಡುವ ಪದ್ಧತಿಯು ಜಾರಿಯಲ್ಲಿರುತ್ತದೆ.<br><br>ಎಲ್ಲಾ ಶಾಖೆಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲಾಗಿದ್ದು ಲೆಕ್ಕ ಪತ್ರಗಳ ಸರಿದೂಗಿಸುವಿಕೆಯನ್ನು ಕಾಲಕಾಲಕ್ಕೆ ಪರಾ ವಿಮರ್ಶಿಸಲಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಎಲ್ಲಾ ಲೆಕ್ಕ ಪತ್ರಗಳನ್ನು ಸರಿದೂಗಿಸಲಾಗಿದೆ. |
| | ii) ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ | ಸಾಮಾನ್ಯವಾಗಿ ಲೆಕ್ಕ ಪತ್ರಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿರುವುದಿಲ್ಲ. ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅವುಗಳಿಗೆ ಸಂಬಂಧಿಸಿದಂತೆ ಸಮನ್ವಯ ಪಟ್ಟಿಯನ್ನು ತಯಾರಿಸುವ ಪದ್ಧತಿಯು ಜಾರಿಯಲ್ಲಿರುತ್ತದೆ. |

| | | |
|---|---|---|
| | c) ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ<br>i) ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ. ಕ್ರಮದ ಬಗ್ಗೆ ವಿವರಣೆ | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿರುತ್ತದೆ. |
| | ii) ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಾಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು. | ಲೆಕ್ಕ ಪರಿಶೋಧನೆ ಸಂದರ್ಭದಲ್ಲಿ ಪರೀಕ್ಷಾರ್ಥವಾಗಿ ಪರಿಶೀಲಿಸಿದಾಗ ಯಾವುದೇ ಅಸಾಮಾನ್ಯ ಎಂಟ್ರಿಗಳನ್ನು ಹಾಕಿರುವುದು ಕಂಡು ಬಂದಿರುವುದಿಲ್ಲ. |
| | iii) ಹೆಚ್ಚಿನ ಮೊತ್ತದ ಹಾಗೂ ದೀರ್ಘ ಕಾಲದ ಬಾಕಿಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು ಪ್ರಧಾನ ಕಛೇರಿಯಲ್ಲಿ ಕಾಲಕಾಲಕ್ಕೆ ಸಮನ್ವಯ ಮಾಡಿಕೊಳ್ಳಲಾಗುತ್ತಿರುತ್ತದೆ. |
| | iv) ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು ಸಮನ್ವಯಗಳನ್ನು ತಹಲ್‌ವರೆಗೆ ಮಾಡಿರುತ್ತಾರೆ. |
| | v) ಹಳೆಯ ಬಾಕಿಯಿರುವ ನಮೂದುಗಳ ಬಗ್ಗೆ ಆರ್.ಬಿ.ಐ ಸೂಚನೆಗಳನ್ನು ಪಾಲಿಸುತ್ತಿರುವ ಬಗ್ಗೆ. | ಹಳೆಯ ಬಾಕಿಯಲ್ಲಿರುವ ನಮೂದುಗಳು ಕಂಡುಬಂದಿರುವುದಿಲ್ಲ. |
| | d) ಶಾಖೆಗಳ ಪರಿವೀಕ್ಷಣೆ:<br>i) ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ ಬಗ್ಗೆ / ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖೆ (ಪರಿವೀಕ್ಷಣೆ) ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್ ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ | ಚಾರ್ಟರ್ಡ್ ಅಕೌಂಟೆಂಟ್‌ರವರನ್ನು ಲೆಕ್ಕ ಪರಿಶೋಧಕರನ್ನಾಗಿ ನೇಮಿಸುವುದರ ಮುಖಾಂತರ ಬ್ಯಾಂಕಿನ ವ್ಯವಹಾರಕ್ಕೆ ಅನುಗುಣವಾಗಿ ಸಮವರ್ತಿತ ಲೆಕ್ಕ ಪರಿಶೋಧನೆಗೆ ಕ್ರಮವಿಡಲಾಗಿದೆ. ಸಮವರ್ತಿತ ಲೆಕ್ಕಪರಿಶೋಧನಾ ವರದಿಗಳನ್ನು ಕಾಲಕಾಲಕ್ಕೆ ಸಲ್ಲಿಸಿರುವುದನ್ನು ಗಮನಿಸಲಾಗಿದೆ. |
| | ii) ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ | ಕೇಂದ್ರ ಕಛೇರಿಯು ಶಾಖೆಗಳಿಂದ ಅನುಪಾಲನಾ ವರದಿಯನ್ನು ಪಡೆದಿರುತ್ತದೆ. |

| | | |
|---|---|---|
| | e)ಜಾಗರೂಕತೆ<br>i) ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ | ವರದಿ ಸಾಲಿನಲ್ಲಿ ಬ್ಯಾಂಕಿನಲ್ಲಿ ಯಾವುದೇ ಮೋಸ, ವಂಚನೆ, ಹಣ ದುರುಪಯೋಗ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ. |
| | ii) ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ | ವರದಿ ಸಾಲಿನಲ್ಲಿ ಯಾವುದೇ ಜಾಗ್ರತಾ ವರದಿಗಳು ಇರದೇ ಇರುವುದರಿಂದ ಅವುಗಳ ಮೇಲೆ ಕೈಗೊಳ್ಳಬೇಕಾದ ಅನುಸರಣಾ ಕ್ರಮ ಅನ್ವಯಿಸುವುದಿಲ್ಲ. |
| | iii) ಅಮಾನತ್ ಲೆಕ್ಕಗಳು ಸಂಡ್ರಿ ಡಿಪಾಜಿಟ್‌ಗಳು ಇತ್ಯಾದಿಗಳ ಬಗ್ಗೆ | ಈ ಖಾತೆಗಳಿಗೆ ಸಂಬಂಧಪಟ್ಟಂತೆ ಕುಳುವಾರು ಪಟ್ಟಿಯನ್ನು ತಯಾರಿಸಲಾಗಿದೆ. ಇತರೆ ಜವಾಬ್ದಾರಿಗಳು ಮತ್ತು ಇತರೆ ಆಸ್ತಿಗಳು ಶೀರ್ಷಿಕೆಯಡಿಯಲ್ಲಿ ಇವುಗಳ ಬಗ್ಗೆ ವಿವರಿಸಲಾಗಿದೆ. |
| | iv) ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಾಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು. | ಸಾಮಾನ್ಯವಾಗಿ ಈ ಖಾತೆಗಳಲ್ಲಿನ ಜಮಾ-ಖರ್ಚುಗಳನ್ನು ಪರಿಶೀಲಿಸಿ ತೀರುವಳಿ ಮಾಡಿರುತ್ತಾರೆ. ನಮ್ಮ ಪರೀಕ್ಷಾರ್ಥ ಪರಿಶೀಲನೆಯಲ್ಲಿ ಅಸಾಮಾನ್ಯವಾದ ನಮೂದುಗಳು ಕಂಡುಬಂದಿರುವುದಿಲ್ಲ. |
| **40** | ಆಡಳಿತ/ ಸಿಬ್ಬಂದಿ | **ಆಡಳಿತ :**<br>ದಿ.31.03.2026ಕ್ಕೆ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಒಟ್ಟು 19 ಜನ ನಿರ್ದೇಶಕರು ಇರುತ್ತಾರೆ.<br>ಬ್ಯಾಂಕಿಗೆ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ: 134<br>ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ: 70 |
| **41** | ಆಕಸ್ಮಿಕ ವೆಚ್ಚಗಳು | ವರದಿ ಸಾಲಿನಲ್ಲಿ ಯಾವುದೇ ಆಕಸ್ಮಿಕ ವೆಚ್ಚಗಳು ಇರುವುದಿಲ್ಲ. |
| **42** | ಬೋನಸ್ಸು / ಎಕ್ಸ್ ಗ್ರೇಷಿಯಾ ಇತ್ಯಾದಿ | ಬೋನಸ್ ಕಾಯಿದೆ ಅನ್ವಯಿಸುವುದಿಲ್ಲ. ಆದರೆ ಎಕ್ಸ್ ಗ್ರೇಷಿಯಾ ನೀಡಲು ರೂ.750891/- ಗಳ ಅವಕಾಶವನ್ನು ಕಲ್ಪಿಸಿಕೊಂಡಿರುತ್ತಾರೆ. |

| | | |
|---|---|---|
| 43 | ಲಾಭ ವಿಲೇವಾರಿ | 2024-25ನೇ ಸಾಲಿನಲ್ಲಿ ಬ್ಯಾಂಕು ಮುಂದುವರೆದ ನಷ್ಟದಲ್ಲಿರುವುದರಿಂದ ಲಾಭ ವಿಲೇವಾರಿ ಅನ್ವಯಿಸುವುದಿಲ್ಲ. |
| 44 | ಡಿವಿಡೆಂಡ್:<br>ಬ್ಯಾಂಕಿನ ಆರ್ಥಿಕ ಸ್ಥಿತಿಗನುಗುಣವಾಗಿ ಶೇಕಡಾವಾರು ಡಿವಿಡೆಂಡ್‌ನ್ನು ಘೋಷಿಸಲಾಗಿದೆಯೇ? | 2024-25ನೇ ಸಾಲಿನಲ್ಲಿ ಬ್ಯಾಂಕು ಮುಂದುವರೆದ ನಷ್ಟದಲ್ಲಿರುವುದರಿಂದ ಡಿವಿಡೆಂಡ್ ನೀಡಲಾಗಿರುವುದಿಲ್ಲ. |
| 45 | ಸಭೆಗಳು<br>a) ಕೊನೆಯ ಸರ್ವ ಸದಸ್ಯರ ಮಹಾಸಭೆ ನಡೆದ ದಿನಾಂಕ ಹಾಗೂ ಅದು ಯಾವ ಸಾಲಿಗೆ ಸಂಬಂದಿಸಿದ್ದು ಎಂಬುದರ ಬಗ್ಗೆ | 14.09.2025 (2024-25ನೇ ಸಾಲಿಗೆ ಸಂಬಂಧಿಸಿದ್ದು) |

b) ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಸಭೆಗಳು ವ್ಯವಸ್ಥಾಪನಾ ಮಂಡಳಿ ಸಭೆಗಳು ಮತ್ತು ಉಪಸಮಿತಿಗಳು ನಡೆಸಿದ ಸಭೆಗಳ ಸಂಖ್ಯೆ

**ವರದಿ ಸಾಲಿನಲ್ಲಿ ನಡೆದ ಮಂಡಳಿಯ/ಸಮಿತಿಗಳ ವಿವರ ಈ ಕೆಳಗಿನಂತಿರುತ್ತದೆ.**

1. ಆಡಳಿತ ಮಂಡಳಿಯ ಸಭೆಗಳು – 18
2. ವ್ಯವಸ್ಥಾಪನಾ ಮಂಡಳಿ ಸಭೆಗಳು – 14
3. ಅಭಿವೃದ್ಧಿ ರಿಸೋರ್ಸಸ್ ಮತ್ತು ಮೆಂಬರ್‌ಶಿಪ್ ಉಪಸಮಿತಿ ಸಭೆಗಳು – 12
4. ಸಾಲದ ಉಪಸಮಿತಿ ಸಭೆಗಳು – 20
5. ಲೆಕ್ಕಪರಿಶೋಧನಾ ಉಪಸಮಿತಿ ಸಭೆಗಳು – 19
6. ಹೂಡಿಕೆ ಉಪಸಮಿತಿ ಸಭೆಗಳು – 12
7. ವಸೂಲಾತಿ ಉಪಸಮಿತಿ ಮತ್ತು ವಂಚನೆ ಪ್ರಕರಣಗಳ ಮೇಲುಸ್ತುವಾರಿ ಸಮಿತಿ ಸಭೆಗಳು – 26
8. ಶಾಖಾ ಉಪಸಮಿತಿ ಸಭೆಗಳು – 12
9. ದೂರು ಮತ್ತು ಕುಂದುಕೊರತೆ ಸಭೆಗಳು – 4
10. ಆಡಳಿತ ಮಂಡಳಿಯ ಉನ್ನತ ಆಡಿಟ್ ಸಮಿತಿ – 4
11. ಅಪಾಯ ನಿರ್ವಹಣೆ ಮತ್ತು ಸ್ವತ್ತುಗಳು ಹಾಗೂ ಹೊಣೆಗಾರಿಕೆಗಳ ಉಪಸಮಿತಿ 4
12. ಸೈಬರ್ ಸೆಕ್ಯುರಿಟಿ ಸಮಿತಿ ಸಭೆಗಳು – 8
13. ಸಿಬ್ಬಂದಿ ನೇಮಕಾತಿ ಸಮಿತಿ ಸಭೆಗಳು – 9

| | | |
|---|---|---|
| | c) ಆಡಳಿತ ಮಂಡಳಿ ಮತ್ತು ಪ್ರಧಾನ ಕಾರ್ಯನಿರ್ವಹಣಾಧಿಕಾರಿಯ ಕಾರ್ಯ ಕ್ಷಮತೆಯ ಬಗ್ಗೆ ಸಮಗ್ರ ವಿವರಣೆ | ಸಾಮಾನ್ಯವಾಗಿ ಬ್ಯಾಂಕಿನ ಆಡಳಿತ ಮಂಡಳಿಯವರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಉಪನಿಯಮ ಹಾಗೂ ಕಾನೂನು ಅನ್ವಯ ಕಾರ್ಯ ನಿರ್ವಹಿಸಿದ್ದು ಆಡಳಿತ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಕಾರ್ಯ ಕ್ಷಮತೆಯು ಒಟ್ಟಾರೆಯಾಗಿ ತೃಪ್ತಿದಾಯಕ ವಾಗಿದ್ದರೂ ಸಾಲಗಳ ಮೌಲ್ಯಾಂಕನದಲ್ಲಿ ಜಾಗರೂಕತೆಯ ಅವಶ್ಯಕತೆ ಕಂಡು ಬಂದಿರುತ್ತದೆ. |
| **46** | ತನಿಖೆ/ಹಿಂದಿನ ತನಿಖೆಯ ದಿನಾಂಕ<br>a) ಸಹಕಾರ ಸಂಘ<br>b) ಆರ್.ಬಿ.ಐ ಯಿಂದ | ವರದಿ ಸಾಲಿನಲ್ಲಿ ತನಿಖೆ ಆಗಿರುವುದಿಲ್ಲ<br>ಆರ್.ಬಿ.ಐ. ನವರು 2024–25ನೇ ಸಾಲಿನ ಪರಿವೀಕ್ಷಣೆ ನಡೆಸಿ ದಿನಾಂಕ: 24.02.2026 ರಂದು ವರದಿ ನೀಡಿರುತ್ತಾರೆ. |
| **47** | ಶಾಖೆಗಳ ಬಗ್ಗೆ ವಿವರಣೆ:<br>ಎ) ಆರ್ಥಿಕ ಸ್ಥಿತಿ ಮತ್ತು ಶಾಖೆಗಳ ಸ್ವಾವಲಂಬನೆ ಬಗ್ಗೆ<br>(ರೂ.ಲಕ್ಷಗಳಲ್ಲಿ) | |

| ಕ್ರ. ಸಂ. | ಶಾಖೆಗಳು | ನಿವ್ವಳ ಲಾಭ/ಹಾನಿ (ರೂ. ಲಕ್ಷಗಳಲ್ಲಿ) | ಠೇವಣಿಗಳು (ರೂ. ಲಕ್ಷಗಳಲ್ಲಿ) | ಸಾಲಗಳು (ರೂ. ಲಕ್ಷಗಳಲ್ಲಿ) |
|---|---|---|---|---|
| 1 | ಕೇಂದ್ರ ಕಛೇರಿ/ಜಯನಗರ ಶಾಖೆ | –47.72 | 12228.00 | 5793.55 |
| 2 | ಮತ್ತೀಕೆರೆ ಶಾಖೆ | 111.44 | 7278.04 | 3147.01 |
| 3 | ವಿಜಯನಗರ ಶಾಖೆ | –62.88 | 2605.30 | 1315.30 |
| 4 | ಇಂದಿರಾನಗರ ಶಾಖೆ | –14.72 | 2409.79 | 894.42 |
| 5 | ಕೆಂಗೇರಿ ಶಾಖೆ | 13.48 | 1757.71 | 1154.53 |
| 6 | ಯಲಹಂಕ ಶಾಖೆ | 37.79 | 5263.70 | 2741.64 |
| 7 | ಬಿ.ಇ.ಎಸ್. ಕಾಲೇಜು ಶಾಖೆ | 53.87 | 1368.26 | 2181.30 |
| 8 | ಬೇಗೂರು ಶಾಖೆ | –4.27 | 872.28 | 1202.97 |
| | **ಒಟ್ಟು** | **86.99** | **33783.08** | **18430.72** |

| | | |
|---|---|---|
| | ಬಿ) ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ | ಶಾಖೆಗಳ ನಿಯತಕಾಲಿಕೆಗಳನ್ನು ಕಾಲಕಾಲಕ್ಕೆ ಸರಿಯಾಗಿ ಸಲ್ಲಿಸಲಾಗಿರುವುದನ್ನು ಗಮನಿಸ ಲಾಗಿದೆ. |

| | | |
|---|---|---|
| | ಸಿ) ಹೊಂದಾಣಿಕ ಲೆಕ್ಕಗಳ ಬಗ್ಗೆ "ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ" ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ | ಶಾಖೆಗಳ ಹೊಂದಾಣಿಕೆ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ ಶಾಖೆಗಳ ಹೊಂದಾಣಿಕೆ ಲೆಕ್ಕಗಳನ್ನು ಮತ್ತು ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕಗಳೊಂದಿಗೆ ಪ್ರಧಾನ ಕಛೇರಿಯಲ್ಲಿ ಕಾಲಕಾಲಕ್ಕೆ ಸಮನ್ವಯ ಮಾಡಿಕೊಳ್ಳಲಾಗುತ್ತಿರುತ್ತದೆ. ವರದಿ ವರ್ಷಾಂತ್ಯಕ್ಕೆ ನಿವ್ವಳ ವ್ಯತ್ಯಾಸವಿರುವುದಿಲ್ಲ. |
| **48** | ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ (Automation & Computarisation)<br>i) ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ ಜಾರಿಯಲ್ಲಿರುವ ಬಗ್ಗೆ ಮತ್ತು ಪ್ರಸ್ತುತ ಸಾಲಿನಲ್ಲಿ ಈ ಕಾರ್ಯದಲ್ಲಿನ ಪ್ರಗತಿ. | ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ಸೇವೆಯನ್ನು ಅಳವಡಿಸಲಾಗಿರುತ್ತದೆ. |
| | ii) ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡದೇ ಇರುವ ಗಂಭೀರ ಅಂಶಗಳ ಕುರಿತು ವಿಮರ್ಶೆ. | ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡದೇ ಇರುವ ಗಂಭೀರ ಅಂಶಗಳು ಯಾವುದೂ ಕಂಡುಬಂದಿರುವುದಿಲ್ಲ. |
| | iii) ಗಣಕೀಕರಣಗೊಳಿಸಿರುವ ಶಾಖೆಗಳ ಸಂಖ್ಯೆ ಹಾಗೂ ಗಣಕೀಕರಣಗೊಂಡ ಪ್ರಮಾಣ | ಎಲ್ಲಾ 8 ಶಾಖೆಗಳಲ್ಲಿ ಕೋರ್ ಬ್ಯಾಂಕಿಂಗ್ ಸೇವೆಯನ್ನು ಅಳವಡಿಸಲಾಗಿರುತ್ತದೆ. |
| | iv) ತುರ್ತು ಪರಿಸ್ಥಿತಿಯಲ್ಲಿ ಗಣಕೀಕೃತ ಮಾಹಿತಿಗಳನ್ನು ಸಂರಕ್ಷಿಸುವ ಬಗ್ಗೆ ಪಾಲಿಸುತ್ತಿರುವ ನಿಯಮ | ಎಕ್ಸ ಟರ್ನಲ್ ಹಾರ್ಡ್‌ಡಿಸ್ಕ್‌ನಲ್ಲಿ ಬ್ಯಾಕಪ್ ಮಾಹಿತಿಗಳನ್ನು ಸಂರಕ್ಷಿಸುವ ಪದ್ಧತಿ ಜಾರಿಯಲ್ಲಿರುತ್ತದೆ ಮತ್ತು ಕ್ಲೌಡ್‌ನಲ್ಲಿ ಇಟ್ಟಿರುತ್ತಾರೆ. |
| | v) E.D.P. ಲೆಕ್ಕಪರಿಶೋಧನೆ ಜಾರಿಯಲ್ಲಿರುವ ಬಗ್ಗೆ ಮತ್ತು ಅಳವಡಿಕೆ ಪ್ರಮಾಣ | ಆರ್.ಬಿ.ಐ.ನ ಮಾರ್ಗಸೂಚಿಗಳ ಪ್ರಕಾರ ವಾರ್ಷಿಕ ಆಧಾರದ ಮೇಲೆ 2025-26ನೇ ಸಾಲಿಗೆ ಇನ್‌ಫರ್ಮೇಷನ್ ಸಿಸ್ಟಂ ಆಡಿಟ್‌ನ್ನು ಮಾಡಿಸಿರುತ್ತಾರೆ. |
| | vi) ಇ-ಬ್ಯಾಂಕಿಂಗ್: ಜಾರಿಯಲ್ಲಿರುವ ಮಾರ್ಗಸೂಚಿಗಳು ಈ ಕುರಿತು ಮೇಲ್ವಿಚಾರಣೆ ಮತ್ತು ಕಾಲಕಾಲಕ್ಕೆ ತಾಂತ್ರಿಕತೆಯನ್ನು ಅಪ್ಡೇಟ್ ಮಾಡುವ ಬಗ್ಗೆ ವಿಮರ್ಷೆಯ ವಿಧಾನ ಮತ್ತು ಲೆಕ್ಕಪರಿಶೋಧನೆ ಬಗ್ಗೆ | ಇ-ಬ್ಯಾಂಕಿಂಗ್ ಸೌಲಭ್ಯ ಇರುವುದಿಲ್ಲ. |
| | vii) ಗಣಕೀಕರಣ ಮತ್ತು ಸ್ವಯಂ ಚಾಲಿತ ವ್ಯವಸ್ಥೆ ಬಗ್ಗೆ ಸಲಹೆ ಸೂಚನೆಗಳು ಯಾವುದಾದರೂ ಇದ್ದಲ್ಲಿ | ಬ್ಯಾಂಕಿನ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲು ಗಣಕಯಂತ್ರದ ತಂತ್ರಾಂಶವನ್ನು ಬಳಸಿಕೊಳ್ಳಲಾಗುತ್ತಿದೆ. |

**49** **ಪ್ರಸಕ್ತ ಸಾಲಿನ ವಹಿವಾಟನ್ನು ಹಿಂದಿನ ಸಾಲಿನ ವಹಿವಾಟಕ್ಕು ಹೋಲಿಕೆ ಹಾಗೂ ಗಳಿಸಿದ ಲಾಭ/ನಷ್ಟದ ಬಗ್ಗೆ ವಿಮರ್ಶೆ** (ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿವರ | | | | ಪ್ರತಿಶತ ಪ್ರಮಾಣ | | | |
|---|---|---|---|---|---|---|---|---|
| | | ಪ್ರಸಕ್ತ ಸಾಲಿನ ಮೊತ್ತ (ರೂ.ಲಕ್ಷಗಳಲ್ಲಿ) | ಹಿಂದಿನ ಸಾಲಿನ ಮೊತ್ತ (ರೂ.ಲಕ್ಷಗಳಲ್ಲಿ) | ಪ್ರತಿಶತ ಪ್ರಮಾಣದ ಆಧಾರ | ಪ್ರಸಕ್ತ ಸಾಲಿನ | ಹಿಂದಿನ ಸಾಲಿನ | ಹೆಚ್ಚು | ಕಡಿಮೆ |
| 1 | ಒಟ್ಟು ಮಾರಾಟ | | – | ಒಟ್ಟು ಮಾರಾಟ | – | – | – | – |
| | ವ್ಯಾಪಾರಿ ಲಾಭ | | – | | – | – | – | – |
| | ವ್ಯಾಪಾರಿ ನಷ್ಟ | | – | | – | – | – | – |
| 2 | ಒಟ್ಟು ಗುಂತಾವಣಿಗಳು | 19153.56 | 17720.56 | ಒಟ್ಟು ಗುಂತಾವಣಿಗಳು | – | – | – | – |
| | ಗುಂತಾವಣಿಗಳ ಮೇಲೆ ಸ್ವಿಕರಿಸಿದ ಬಡ್ಡಿ | 1090.57 | 1073.89 | | 5.70 | 6.06 | – | 0.36 |
| 3 | ಒಟ್ಟ ನೀಡಿದ ಸಾಲ | 18430.72 | 17538.03 | ಒಟ್ಟ ನೀಡಿದ ಸಾಲ | – | – | – | – |
| | ಸಾಲಗಳ ಮೇಲೆ ಸ್ವಿಕರಿಸಿದ ಬಡ್ಡಿ | 1821.38 | 2043.25 | | 9.88 | 11.65 | – | 1.77 |
| 4 | ದುಡಿಯುವ ಬಂಡವಾಳ | 43254.72 | 39271.95 | ದುಡಿಯುವ ಬಂಡವಾಳ | – | – | – | – |
| | ಇತರೆ ಆದಾಯ | 281.85 | 78.58 | | 0.65 | 0.20 | 0.45 | – |
| 5 | ಒಟ್ಟು ಪಡೆದ ಸಾಲ | – | – | ಒಟ್ಟು ಪಡೆದ ಸಾಲ | – | – | – | – |
| | ಸಾಲುಗಳ ಮೇಲೆ ಪಾವತಿಸಿದ ಬಡ್ಡಿ | – | – | | – | – | – | – |
| 6 | ಒಟ್ಟು ಠೇವಣಿ | 33783.08 | 31548.96 | ಒಟ್ಟು ಠೇವಣಿ | – | – | – | – |
| | ಠೇವಣಿಗಳ ಮೇಲೆ ಪಾವತಿಸಿದ ಬಡ್ಡಿ | 1903.44 | 1906.83 | | 5.63 | 6.04 | | 0.41 |

| | | | | | | | | |
|---|---|---|---|---|---|---|---|---|
| | ದುಡಿಯುವ ಬಂಡವಾಳ | 43254.72 | 39271.95 | | – | – | – | |
| 7 | ಸಿಬ್ಬಂದಿ ವೆಚ್ಚ | 792.60 | 901.82 | ದುಡಿಯುವ ಬಂಡವಾಳ | 1.83 | 2.30 | | 0.47 |
| 8 | ಆಡಳಿತ ವೆಚ್ಚ | 279.42 | 268.33 | | 0.65 | 0.68 | | 0.03 |
| 9 | ಇತರೆ ವೆಚ್ಚ | 6.82 | 10.96 | | 0.02 | 0.03 | – | 0.01 |
| 10 | ಸವಕಳಿಗಳು | 9.98 | 11.91 | | 0.02 | 0.03 | – | 0.01 |
| 11 | ಅವಕಾಶಗಳು | 120.89 | 39.79 | | 0.28 | 0.10 | 0.18 | – |
| 12 | ನಿವ್ವಳ ಲಾಭ | 86.99 | 62.67 | | 0.20 | 0.16 | 0.04 | – |
| | ಮುಂದುವರೆದ ನಿವ್ವಳ ನಷ್ಟ | 1068.43 | 1155.42 | | 2.47 | 2.94 | – | 0.47 |

| | |
|---|---|
| a. ಲೆಕ್ಕಗಳ ನಿರ್ವಹಣೆಯಲ್ಲಿನ/ ಕಾರ್ಯ ನೀತಿಯಲ್ಲಿನ ಬದಲಾವಣೆಯಿಂದಾಗಿ ವರದಿ ಸಾಲಿನ ಲಾಭ-ನಷ್ಟ ಮೇಲಾದ ಪರಿಣಾಮ ಗಳ ಬಗ್ಗೆ. | ಲೆಕ್ಕಗಳ ನಿರ್ವಹಣೆಯಲ್ಲಿನ / ಕಾರ್ಯ ನೀತಿಯಲ್ಲಿನ ಬದಲಾವಣೆಯಿಂದಾಗಿ ವರದಿ ಸಾಲಿನ ಲಾಭ-ನಷ್ಟದ ಮೇಲಾದ ಪರಿಣಾಮಗಳ ಬಗ್ಗೆ ಕಳೆದ ಸಾಲಿಗೆ ಹೋಲಿಸಿದಲ್ಲಿ ಬ್ಯಾಂಕಿನ ಲೆಕ್ಕಗಳ ನಿರ್ವಹಣೆ /ಕಾರ್ಯನೀತಿಯಲ್ಲಿ ಬದಲಾವಣೆ ಆಗಿರುವುದಿಲ್ಲ. |

**b) ಆಸ್ತಿ-ಜವಾಬ್ದಾರಿ ತಃಖ್ತೆಯಲ್ಲಿ ಈ ಮೇಲೆ ವಿವರಿಸದೇ ಬಾಕಿ ಉಳಿದ ಎಲ್ಲಾ ಅಂಶಗಳ ಬಗ್ಗೆ ವಿಶ್ಲೇಷಣೆ.**

| | |
|---|---|
| (1) ಠೇವಣಿಗಳ ಮೇಲಿನ ಸರಾಸರಿ ವೆಚ್ಚ | ಶೇ. 5.97 |
| (2) ಒಟ್ಟು ನಿಧಿಗಳ (ಪಡೆದ ಠೇವಣಿ+ಪಡೆದ ಸಾಲ) ಮೇಲಿನ ಸರಾಸರಿ ವೆಚ್ಚ | ಶೇ. 5.97 |
| (3) ಸಾಲಗಳ ಮೇಲಿನ ಸರಾಸರಿ ಆದಾಯ | ಶೇ. 11.32 |
| (4) ಹೂಡಿಕೆಗಳ ಮೇಲಿನ ಸರಾಸರಿ ಆದಾಯ | ಶೇ. 5.84 |
| (5) ಒಟ್ಟು ನಿಧಿಗಳ (ಕೊಟ್ಟ ಸಾಲ+ಹೂಡಿಕೆ) ಮೇಲಿನ ಸರಾಸರಿ ಆದಾಯ | ಶೇ. 8.38 |
| (6) ಮಾರ್ಜಿನ್ (5 –2) | ಶೇ. 2.41 |

| ವಿವರ | 331.03.2026ಕ್ಕೆ (ರೂ. ಲಕ್ಷಗಳಲ್ಲಿ) | 331.03.2025ಕ್ಕೆ (ರೂ. ಲಕ್ಷಗಳಲ್ಲಿ) | ಶೇಕಡಾವಾರು (ಹೆಚ್ಚಳ/ಇಳಿಕೆ) |
|---|---|---|---|
| ಸಾಲಗಳು | 18430.72 | 17538.02 | (+)5.09 |
| ಠೇವಣಿಗಳು | 33783.08 | 31548.96 | (+)7.08 |
| ಸಾಲ ಮತ್ತು ಠೇವಣಿಗಳ ಅನುಪಾತ | 54.56 | ಶೇ.55.59 | (–) 1.03 |

| | | |
|---|---|---|
| 50 | ಆಂತರಿಕ ವ್ಯವಸ್ಥೆ ಮತ್ತು ನಿಯಂತ್ರಣ:<br>i) ಸಮವರ್ತಿ/ ಆಂತರಿಕ ಲೆಕ್ಕಪರಿಶೋಧನೆ ಗಣಕಯಂತ್ರ ಮತ್ತು ಸಾಫ್ಟ್‌ವೇರ್‌ಗಳ ಇ ಡಿ ಪಿ ಲೆಕ್ಕಪರಿಶೋಧನೆ ಹಾಗೂ ಪರಿವೀಕ್ಷಣೆ ಬಗ್ಗೆ ಬ್ಯಾಂಕ್ ಹೊಂದಿರುವ ವ್ಯವಸ್ಥೆ ಮತ್ತು ನಿಯಂತ್ರಣ | ಬ್ಯಾಂಕಿನ ಸಮವರ್ತಿತ ಲೆಕ್ಕಪರಿಶೋಧನೆಯನ್ನು M/s M.A Narasimhan & Associates, chartered accountants, ಬೆಂಗಳೂರು ಇವರು ಬ್ಯಾಂಕಿನ ಆದೇಶ ಸಂಖ್ಯೆ. ಬಿಸಿಬಿ/384/2025–2026 ದಿನಾಂಕ : 08.07.2025ರಂತೆ ಸಮವರ್ತಿತ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತಾರೆ. ಇವರು ಎಲ್ಲಾ ಶಾಖೆಗಳ ಲೆಕ್ಕ ಪರಿಶೋಧನೆಯನ್ನು ಮಾಡಿ ಮಾಸಿಕವಾಗಿ ವರದಿಗಳನ್ನು ಸಲ್ಲಿಸಿರುವುದನ್ನು ಗಮನಿಸಲಾಗಿದೆ.<br>ಆರ್.ಬಿ.ಐನ ಮಾರ್ಗಸೂಚಿಗಳ ಪ್ರಕಾರ ವಾರ್ಷಿಕ ಆಧಾರದ ಮೇಲೆ 2025–26ನೇ ಸಾಲಿಗೆ ಇನ್ ಫರ್ಮೇಷನ್ ಸಿಸ್ಟಂ ಆಡಿಟ್‌ನ್ನು ಮಾಡಿಸಿ ವರದಿಯನ್ನು ಪಡೆಯಲಾಗಿದೆ. |
| | ii) ಎಂ.ಐ.ಎಸ್ ಅಸ್ತಿತ್ವದಲ್ಲಿರುವ ಬಗ್ಗೆ. ಮಾಹಿತಿಗಳ ಕ್ರೋಢೀಕರಣ ಮತ್ತು ನಿಖರತೆ ಬಗ್ಗೆ | ಎಲ್ಲಾ ಶಾಖೆಗಳಲ್ಲಿ ಕೋರ್ ಬ್ಯಾಂಕಿಂಗ್ ಸೇವೆಯನ್ನು ಅಳವಡಿಸಿಕೊಳ್ಳಲಾಗಿದ್ದು ಕ್ರೋಢೀಕೃತ ಮಾಹಿತಿಯು ನಿಖರವಾಗಿ ದೊರೆಯುತ್ತದೆ. |
| | iii) ಆರ್.ಬಿ.ಐ ಪರಿವೀಕ್ಷಣಾ ವ್ಯವಸ್ಥೆಗೆ ಹೊರತುಪಡಿಸಿದ ಮಾಹಿತಿಗಳ ನಂಬಲಾರ್ಹತೆ ಬಗ್ಗೆ ಜಾರಿಯಲ್ಲಿರುವ ನಿಯಮಗಳು. | ವಿವಿಧ ಸಮಿತಿಗಳು ಮತ್ತು ಆಡಳಿತ ಮಂಡಳಿಯು ಬ್ಯಾಂಕಿನ ಒಟ್ಟಾರೆ ವ್ಯವಹಾರಗಳ ಬಗ್ಗೆ ಚರ್ಚಿಸುವ ನಿಯಮ ಜಾರಿಯಲ್ಲಿರುತ್ತದೆ. |
| 51 | **ಇತರೆ ವಿಷಯಗಳು:**<br>i) ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಲೆಕ್ಕಪತ್ರ ನೀತಿ ನಿಯಮಗಳಲ್ಲಿ ಆಗಿರುವ ಬದಲಾವಣೆ ಬಗ್ಗೆ ಟಿಪ್ಪಣಿ. | ಹಿಂದಿನ ವರ್ಷಾಂತ್ಯಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಲೆಕ್ಕಪತ್ರ ನೀತಿ ನಿಯಮಗಳಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ. |

| | | |
|---|---|---|
| | ii) Under writing ಹಾಗೂ ನಿಷ್ಪನ್ನು (derivative) ಇವುಗಳ ನಿರ್ವಹಣೆ ಬಗ್ಗೆ ಬ್ಯಾಂಕು ಅನುಸರಿಸುತ್ತಿರುವ ನಿಯಮಗಳು | ವರದಿ ಸಾಲಿನಲ್ಲಿ ಇಂತಹ ವ್ಯವಹಾರಗಳು /ಪ್ರಕರಣಗಳು ಕಂಡುಬಂದಿರುವುದಿಲ್ಲ. |
| | iii) ಆದಾಯ ತೆರಿಗೆ ಬಡ್ಡಿ ತೆರಿಗೆ ಗ್ರ್ಯಾಚುಯಿಟಿ ಪಿಂಚಣಿ ಮತ್ತು ಭವಿಷ್ಯ ನಿಧಿ ಇವುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. | ಆದಾಯ ತೆರಿಗೆ, ಗ್ರ್ಯಾಚುಯಿಟಿ ಮತ್ತು ಭವಿಷ್ಯ ನಿಧಿ ಇವುಗಳಿಗೆ ಸರಿಯಾದ ಪ್ರಮಾಣದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಬಡ್ಡಿ ತೆರಿಗೆ ಮತ್ತು ಪಿಂಚಣಿ ಈ ಬ್ಯಾಂಕಿಗೆ ಅನ್ವಯಿಸುವುದಿಲ್ಲ. |
| | iv) ಬ್ಯಾಂಕಿನ ಆಸ್ತಿ ಜವಾಬ್ದಾರಿ ತಃಖ್ತೆ ಖಾತೆಗಳನ್ನು ಹೊರತುಪಡಿಸಿದ ಕ್ಲೇಮ್‌ಗಳ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ | ಇತರೆ ಕ್ಲೇಮ್‌ಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ. |
| | v) ಶಾಖೆಗಳ ನಿಯತಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತಃಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಡೀಕರಿಸುವಾಗ ಕಂಡುಬಂದ ಗಮನಾರ್ಹ ಅಂಶಗಳು | ಕ್ರೋಡೀಕರಿಸುವಾಗ ಯಾವುದೇ ಗಮನಾರ್ಹ ಅಂಶಗಳು ಕಂಡು ಬಂದಿರುವುದಿಲ್ಲ. |
| | vi) ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ ಸಮನ್ವಯಕ್ಕೊಳ ಪಟ್ಟಿರುವ ತಃಖ್ತೆಗಳ ಬಗ್ಗೆ ವಿವರಣೆ | ಎಲ್ಲಾ ಬ್ಯಾಂಕುಗಳಿಂದ ದೃಢೀಕರಣ ಪತ್ರಗಳನ್ನು ಪಡೆಯಲಾಗಿರುತ್ತದೆ. ಬ್ಯಾಂಕಿನ ಶಿಲ್ಕಿನಲ್ಲಿ ವ್ಯತ್ಯಾಸ ಇರುವ ಮೊತ್ತಕ್ಕೆ ಸಮನ್ವಯ ಪಟ್ಟಿ ತಯಾರಿಸಿ ತಾಳೆ ಮಾಡಕೊಳ್ಳಲಾಗಿರುತ್ತದೆ. ಈ ಸಮನ್ವಯ ಪಟ್ಟಿಗಳಲ್ಲಿ ಯಾವುದೇ ಅಸಾಮಾನ್ಯ ನಮೂದುಗಳು ಕಂಡು ಬಂದಿರುವುದಿಲ್ಲ. |
| | vii) NOSTRO ಲೆಕ್ಕಗಳ ಮರು ಮೌಲ್ಯ ಮಾಪನ ಹಾಗೂ ಬಾಕಿ ಇರುವ ಫಾರ್ವರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ಧತಿ ಬಗ್ಗೆ | ಅನ್ವಯಿಸುವುದಿಲ್ಲ |
| | viii) CRAR ನ ಬಗ್ಗೆ ವಿಶ್ಲೇಷಣೆ | RBI ನಿರ್ದೇಶನಗಳ ಸಂಖ್ಯೆ POT.PCB.Cir /4509.116.00.01 ದಿ: 24.06.2001 ರ ರೀತಿ (ಹಾಗೂ ಆರ್.ಬಿ.ಐ ನಿರ್ದೇಶನಗಳ ಸಂಖ್ಯೆ UBD.PCB.CIR.No.26 ದಿ: 01.11.2006 ಅನ್ವಯವಾಗುವಂತೆ ಪರಿಷ್ಕರಿಸಿ ಕೊಂಡ) ಸಂಸ್ಥೆಯ ಸ್ವಂತ ಬಂಡವಾಳ / |

| | | |
|---|---|---|
| | | ಆಸ್ತಿಯು ಅಪಾಯದ ಪ್ರಭಾವವಿರುವ ಆಸ್ತಿಗಳಿಗೆ ಹೋಲಿಸಿದಾಗ ಶೇ.12ರ ಕನಿಷ್ಟ ಮಟ್ಟದ ಮೇಲಿರಬೇಕಿದ್ದು ದಿ.31.03.2026ಕ್ಕೆ ಅದು ಶೇ.15.13 ರಷ್ಟು ಇರುತ್ತದೆ. |
| | (i) ಹಿಂದಿನ ಸಾಲಿನ ಲಾಭದ ಶೇ.1%ಕ್ಕಿಂತ ಹೆಚ್ಚಿಗೆ ಕೊಡುಗೆ/ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ | ನೀಡಿರುವುದಿಲ್ಲ |
| | ii) ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ-ಆದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ | ವರದಿ ಸಾಲಿನಲ್ಲಿ ಠೇವಣಿಗಳ ಮೇಲಿನ ಸರಾಸರಿ ವೆಚ್ಚವು (Cost Of Deposits) ಶೇ.5.97 ರಷ್ಟಿದ್ದು ಸಾಲಗಳ ಮೇಲಿನ ಸರಾಸರಿ ಆದಾಯವು (Yield On Advances) ಶೇ.11.32 ರಷ್ಟಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಈ ಅನುಪಾತ ಸಮರ್ಪಕವಾಗಿದೆ. |
| | ix) ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಛಿಸುವ ಇತರೆ ವಿಷಯಗಳ ಬಗ್ಗೆ | ಸಲಹೆ-ಸೂಚನೆ ಮತ್ತು ಕ್ರಮವಿಡಬೇಕಾದ ಕಂಡಿಕೆಗಳ ವಿಭಾಗವನ್ನು ಗಮನಿಸುವುದು ಮತ್ತು ಅನುಪಾಲನೆ ಮಾಡುವುದು ಅಗತ್ಯ. |
| 52 | ಬ್ಯಾಂಕಿನ ಅಧೀನ ಸಂಸ್ಥೆಗಳ ಕಾರ್ಯ ನಿರ್ವಹಣೆ ಬಗ್ಗೆ: | |
| | (1) ಅಧೀನ ಸಂಸ್ಥೆಗಳು ಬ್ಯಾಂಕಿಗೆ ವರದಿ ಮಾಡಲು ಜಾರಿಯಲ್ಲಿರುವ ವ್ಯವಸ್ಥೆ. | ಅಧೀನ ಸಂಸ್ಥೆಗಳು ಇರುವುದಿಲ್ಲ |
| | (2) ಅಧೀನ ಸಂಸ್ಥೆಗಳು ನಿವ್ವಳ ನಷ್ಟ ಅನುಭವಿಸುತ್ತಿದ್ದಲ್ಲಿ ವಿಮರ್ಶೆ | ಅನ್ವಯಿಸುವುದಿಲ್ಲ |
| 53 | D.E.A. FUND SCHEME 2014 ಜಾರಿಯಲ್ಲಿರುವ ಬಗ್ಗೆ | |
| | i) ಬ್ಯಾಂಕ್ ಪ್ರಾರಂಭವಾದಾಗಿನಿಂದ ವಾರಸುದಾರರಿಲ್ಲದೆ ಠೇವಣಿಗಳನ್ನು D.E.A. FUND ಗೆ ವರ್ಗಾಯಿಸಿರುವ ಬಗ್ಗೆ | 10 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ವಾರಸುದಾರರಿಲ್ಲದ ಠೇವಣಿಗಳನ್ನು ಮತ್ತು ಇತರೆ ಮೊತ್ತಗಳನ್ನು ಬ್ಯಾಂಕಿನ ಸಾಫ್ಟ್‌ವೇರ್ ಮುಖಾಂತರ ಗುರುತಿಸಿ ಅವುಗಳನ್ನು D.E.A. FUND ಗೆ ವರ್ಗಾಯಿಸುತ್ತಿದ್ದಾರೆ. |

| | | |
|---|---|---|
| | ii) ಈ ಕುರಿತು ನಿಗದಿಪಡಿಸಲಾಗಿರುವ ವಿವಿಧ ನಮೂನೆ ಹಾಗೂ ನಿಯತಕಾಲಿಕೆಗಳನ್ನು ಸಲ್ಲಿಸಿರುವ ಬಗ್ಗೆ | ನಿಗದಿಪಡಿಸಲಾಗಿರುವ ವಿವಿಧ ನಮೂನೆ ಹಾಗೂ ನಿಯತಕಾಲಿಕೆಗಳನ್ನು ಸಲ್ಲಿಸಲಾಗಿರುತ್ತದೆ. |
| | iii) ಈ ಕುರಿತು ಸಮನ್ವಯ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ | ವರದಿ ಸಾಲಿನಲ್ಲಿ ಸಮನ್ವಯ ಪ್ರಮಾಣ ಪತ್ರ ನಮೂನೆ –3ನ್ನು ಸಲ್ಲಿಸಲಾಗಿರುತ್ತದೆ. |
| | iv) ಗ್ರಾಹಕರ ದೂರುಗಳನ್ನು ಪರಿಹರಿಸಲು ಬ್ಯಾಂಕ್ ಹೊಂದಿರುವ ವ್ಯವಸ್ಥೆ | ಬ್ಯಾಂಕಿನಲ್ಲಿ ದೂರು ಪುಸ್ತಕವನ್ನು ನಿರ್ವಹಿಸುತ್ತಿದ್ದು, ದೂರುಗಳೇನಾದರೂ ಬಂದರೆ ಅವುಗಳನ್ನು ಆಡಳಿತ ಮಂಡಳಿಯವರ ಮತ್ತು ಕಾರ್ಯ ನಿರ್ವಹಣಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಬ್ಯಾಂಕಿನವರು ತಿಳಿಸಿರುತ್ತಾರೆ, |
| | v) ಗ್ರಾಹಕರ / ವಾರಸುದಾರರ ಠೇವಣಿಗಳನ್ನು ಹಿಂದಿರುಗಿಸುವ ಬಗ್ಗೆ | ಸೂಕ್ತ ದಾಖಲಾತಿಗಳನ್ನು ಪಡೆದು ಮೊತ್ತವನ್ನು ಹಿಂದಿರುಗಿಸುವ ಪದ್ಧತಿಯು ಜಾರಿಯಲ್ಲಿರುತ್ತದೆ. |
| | iv) ಗ್ರಾಹಕರ ದೂರುಗಳನ್ನು ಪರಿಹರಿಸಲು ಬ್ಯಾಂಕ್ ಹೊಂದಿರುವ ವ್ಯವಸ್ಥೆ | ಬ್ಯಾಂಕಿನಲ್ಲಿ ದೂರು ಪುಸ್ತಕವನ್ನು ನಿರ್ವಹಿಸುತ್ತಿದ್ದು, ದೂರುಗಳೇನಾದರೂ ಬಂದರೆ ಅವುಗಳನ್ನು ಆಡಳಿತ ಮಂಡಳಿಯವರ ಮತ್ತು ಕಾರ್ಯ ನಿರ್ವಹಣಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಬ್ಯಾಂಕಿನವರು ತಿಳೀಸಿರುತ್ತಾರೆ, |
| | v) ಗ್ರಾಹಕರ / ವಾರಸುದಾರರ ಠೇವಣಿಗಳನ್ನು ಹಿಂದಿರುಗಿಸುವ ಬಗ್ಗೆ | ಸೂಕ್ತ ದಾಖಲಾತಿಗಳನ್ನು ಪಡೆದು ಮೊತ್ತವನ್ನು ಹಿಂದಿರುಗಿಸುವ ಪದ್ಧತಿಯು ಜಾರಿಯಲ್ಲಿರುತ್ತದೆ. |
| | vi) ಈ ಸಂಬಂಧ ಬ್ಯಾಂಕಿನ ದಾಖಲೆಗಳನ್ನು ಪರಿಶೋಧಿಸುವ ಬಗ್ಗೆ ಇರುವ ವ್ಯವಸ್ಥೆ. | ಬ್ಯಾಂಕಿನ ಸಮವರ್ತಿತ ಲೆಕ್ಕಪರಿಶೋಧಕರಿಂದ ಈ ದಾಖಲೆಗಳನ್ನು ಪರಿಶೋಧಿಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ |
| 54 | ಆಡಳಿತ ಮಂಡಳಿ:<br>1. ಚುನಾಯಿತ ಆಡಳಿತ ಮಂಡಳಿಯ ಕಾರ್ಯನಿರ್ವಹಣೆ, ರಚನೆ ಸಮಿತಿಗಳು | ಬ್ಯಾಂಕಿನ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ 18 ಆಗಿರುತ್ತದೆ. ಒಂದು ಸ್ಥಾನವನ್ನು ಪರಿಶಿಷ್ಠ ಜಾತಿ, ಒಂದು |

| | | |
|---|---|---|
| | ರಚನೆ, ಕಾರ್ಪೋರೇಟ್ ಗವರ್ನೆನ್ಸ್, ಆಡಳಿತ ಮಂಡಳಿಯಲ್ಲಿನ ವೃತ್ತಿಪರತೆ ನಿಯತಕಾಲಿಕವಾಗಿ ಸಭೆ ನಡೆಸುವ ಬಗ್ಗೆ ಸಭೆಯಲ್ಲಿ ಚರ್ಚೆಯಾದ ವಿಷಯಗಳು ಗೈರು ಹಾಜರಾದ ನಿರ್ದೇಶಕರು, ನಿರ್ದೇಶಕರಿಂದ ಬೈಲಾ ಉಲ್ಲಂಘನೆ, ನಿರ್ದೇಶಕರನ್ನು ವಜಾಗೊಳಿಸಿರುವ ವಿವರ ಯಾವುದಾದರೂ ಇದ್ದಲ್ಲಿ ಇತ್ಯಾದಿ ಅಂಶಗಳ ಬಗ್ಗೆ (ಚುನಾಯಿತ ಆಡಳಿತ ಮಂಡಳಿ ಇಲ್ಲದೆ ಇದ್ದಲ್ಲಿ ಮೇಲಿನ ಅಂಶಗಳ ಬಗ್ಗೆ ಆಡಳಿತಾಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ ನೀಡುವುದು) | ಸ್ಥಾನವನ್ನು ಪರಿಶಿಷ್ಠ ಪಂಗಡ, 2 ಸ್ಥಾನಗಳನ್ನು ಮಹಿಳಾ ವರ್ಗ, ಒಂದು ಸ್ಥಾನವನ್ನು ಹಿಂದುಳಿದ ವರ್ಗ ಪ್ರವರ್ಗ "ಎ", 1 ಸ್ಥಾನವನ್ನು ಹಿಂದುಳಿದ ವರ್ಗ ಪ್ರವರ್ಗ "ಬಿ". ಈ ರೀತಿಯಾಗಿ ವಿವಿಧ ವರ್ಗಗಳಿಗೆ ಸೇರಿದ ಸದಸ್ಯರಿಗೆ ಮೀಸಲಿರಿಸಬೇಕಾಗಿದ್ದು ಸರಿಯಾದ ಮೀಸಲಾತಿ ಸ್ಥಾನಗಳನ್ನೊಳಗೊಂಡಿರುತ್ತದೆ. ದಿನಾಂಕ 31.03.2026ರ ಅಂತ್ಯಕ್ಕೆ 17 ಸದಸ್ಯರು ಹಾಗೂ ಇಬ್ಬರು ವೃತ್ತಿಪರ ನಾಮನಿರ್ದೇಶಿತರು ಆಡಳಿತ ಮಂಡಳಿ ಯಲ್ಲಿ ಇರುತ್ತಾರೆ.<br>ಆಡಳಿತ ಮಂಡಳಿಯ ಸಭೆಗಳಲ್ಲಿ ಸಾಮಾನ್ಯವಾಗಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಗಿರುವುದನ್ನು ಗಮನಿಸಲಾಗಿದೆ.<br>1. ಆಸ್ತಿ-ಜವಾಬ್ದಾರಿ ಮತ್ತು ಲಾಭ- ನಷ್ಟದ ಬಗ್ಗೆ<br>2. ಬಡ್ಡಿದರ ನಿಗದಿಪಡಿಸಿದರ ಬಗ್ಗೆ<br>3. ಹೂಡಿಕೆ ವ್ಯವಹಾರದ ಬಗ್ಗೆ<br>4. ವಂಚನೆ ಪ್ರಕರಣಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ<br>5. ಅನುತ್ಪಾದಕ ಸಾಲಗಳ ಶೇಕಡಾವಾರು ಪ್ರಮಾಣ ಕಡಿಮೆ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ<br>6. ಸುಸ್ತಿ ಸಾಲಗಾರರ ಮೇಲೆ ಕ್ರಮ ಜರುಗಿಸುವ ಬಗ್ಗೆ ಮುಂತಾದವುಗಳು |
| | ii) ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇಮಕಾತಿ ವಿದ್ಯಾರ್ಹತೆ ಮತ್ತು ಬ್ಯಾಂಕ್ ನಡೆಸುವ ಸಾಮರ್ಥ್ಯ ಹೊಂದಿರುವ ಬಗ್ಗೆ | ಹಿಂದೆ ಇದ್ದ ಕಾರ್ಯದರ್ಶಿಯವರು ಸ್ವಯಂ ನಿವೃತ್ತಿ ಹೊಂದಿದ್ದು ವ್ಯವಸ್ಥಾಪಕರು ಪ್ರಭಾರ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. |
| | iii) 2ನೇ ಹಂತದ ಸಿಬ್ಬಂದಿಗಳ ಕಾರ್ಯ ನಿರ್ವಹಣೆ ನೇಮಕಾತಿ ತರಬೇತಿ ಜವಾಬ್ದಾರಿ ನಿಗದಿಪಡಿಸುವಿಕೆ ರೊಟೇಷನ್ ಬಗ್ಗೆ ವಿಮರ್ಶೆ. | ಎಲ್ಲಾ ಸಿಬ್ಬಂದಿಗಳನ್ನು ಬ್ಯಾಂಕಿನ ಸಿಬ್ಬಂದಿ ನಿಯಮಾವಳಿಗಳು ಹಾಗೂ ಉಪ ನಿಯಮಗಳ ಪ್ರಕಾರ ಆಯ್ಕೆ ಮಾಡಿ ಕೊಳ್ಳಲಾಗಿದ್ದು, ಆಯಾ ಹುದ್ದೆಗೆ ಅವಶ್ಯಕ |

| | | |
|---|---|---|
| | | ತರಭೇತಿಯನ್ನು ನೀಡಲಾಗಿರುತ್ತದೆ. ಆಯಾ ಹುದ್ದೆಗೆ ಅನುಗುಣವಾಗಿ ಜವಾಬ್ದಾರಿ ನಿಗಧಿಪಡಿಸಲಾಗಿದೆ. ವರದಿ ಸಾಲಿನಲ್ಲಿ ರೊಟೇಷನ್ ಮಾಡುವ ಪದ್ಧತಿ ಜಾರಿಯಲ್ಲಿರುವುದಿಲ್ಲ.<br>**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.** |
| 55 | ಲೆಕ್ಕಪರಿಶೋಧಕರ ಸಲಹೆ/ಸೂಚನೆಗಳು | ಲೆಕ್ಕಪರಿಶೋಧನಾ ವರದಿಯ ಕಂಡಿಕೆ 36 ನೋಡುವುದು |
| 56 | ಲೆಕ್ಕಪರಿಶೋಧನಾ ಫಲಿತಾಂಶ ಹಾಗೂ ಕ್ರಮವಿಡಬೇಕಾದ ಕಂಡಿಕೆಗಳು | ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 37 ನೋಡುವುದು |
| 57 | a) ಲೆಕ್ಕಪರಿಶೋಧನಾ ವರ್ಗೀಕರಣ:<br>ಎ) ಹಿಂದಿನ ಸಾಲಿಗೆ ಪರಿಶೋಧನಾ ವರ್ಗೀಕರಣ<br>ಬಿ) ವರದಿ ಸಾಲಿಗೆ ಪರಿಶೋಧನಾ ವರ್ಗೀಕರಣ<br>(ವರ್ಗೀಕರಣ ಪಟ್ಟಿ ಲಗತ್ತಿಸಿದೆ) | <br>'ಬಿ' ದರ್ಜೆ<br><br>'ಎ' ದರ್ಜೆ |

ಮೆಃ ಗಿರೀಶ ವಿಜಯ್ ಅಂಡ್ ಅಸೋಸಿಯಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಸಂಸ್ಥೆ ನೊಂದಣಿ ಸಂಖ್ಯೆ:014117S

ದಿನಾಂಕ: 25.06.2026
ಸ್ಥಳ : ಬೆಂಗಳೂರು

ಸಹಿ/–
(ಗಿರೀಶ ಟಿ.ಎಲ್)
ಪಾಲುದಾರರು
UDIN : 26230764RBUZTR9896

**ಅಡಕಗಳು**
ಜಮಾ ಖರ್ಚು ತಃಖ್ತೆ
ಲಾಭ– ನಷ್ಟ ತಃಖ್ತೆ
ಆಸ್ತಿ ಜವಾಬ್ದಾರಿ ತಃಖ್ತೆ
ನಿಗದಿಪಡಿಸಿದ ನಮೂನೆಯಲ್ಲಿ ದೃಢೀಕರಣ
ಸಮಗ್ರ ಆರ್ಥಿಕ ವಿವರವುಳ್ಳ ತಃಖ್ತೆ (ನಿಗದಿತ ನಮೂನೆಯಲ್ಲಿ ಲಗತ್ತಿಸುವುದು.)
ಎನ್.ಪಿ.ಎ ತಃಖ್ತೆ
ವರ್ಗೀಕರಣ ತಃಖ್ತೆ ಅನುಬಂಧ–2 (ಲೆಕ್ಕ ಪರಿಶೋಧನಾ ವರ್ಗೀಕರಣ)

# ಶಾಖಾ ಉತ್ಸುವಾರಿ ಉಪಸಮಿತಿ ಸದಸ್ಯರುಗಳು

**I. ಕೇಂದ್ರ ಕಛೇರಿ /ಜಯನಗರ ಶಾಖೆ :**

| | | |
|---|---|---|
| 1 | ಶ್ರೀ ಕೆ. ಎಸ್. ಸುಧಾಕರ್ | ಅಧ್ಯಕ್ಷರು |
| 2 | ಶ್ರೀ ಜೆ. ಎಂ. ಜಯಪ್ರಕಾಶ್ | ಸದಸ್ಯರು |
| 3 | ಡಾ. ಎಂ. ವೀರಪ್ಪ | ಸದಸ್ಯರು |
| 4 | ಶ್ರೀ ಬಿ. ಎನ್. ಲೋಕೇಶ್ | ಸದಸ್ಯರು |

**II. ಮತ್ತೀಕೆರೆ ಶಾಖೆ :**

| | | |
|---|---|---|
| 1 | ಶ್ರೀ ಕೆ. ಎಸ್. ಸುಧಾಕರ್ | ಅಧ್ಯಕ್ಷರು |
| 2 | ಶ್ರೀ ಜೆ. ಎಂ. ಜಯಪ್ರಕಾಶ್ | ಸದಸ್ಯರು |
| 3 | ಡಾ. ಎಂ. ವೀರಪ್ಪ | ಸದಸ್ಯರು |
| 4 | ಶ್ರೀ ಬಿ. ಎನ್. ಲೋಕೇಶ್ | ಸದಸ್ಯರು |
| 5 | ಶ್ರೀ ಹೆಚ್. ಪಿಳ್ಳಾಂಜನಪ್ಪ | ಸದಸ್ಯರು |

**III. ವಿಜಯನಗರ ಶಾಖೆ :**

| | | |
|---|---|---|
| 1 | ಶ್ರೀ ಕೆ. ಎಸ್. ಸುಧಾಕರ್ | ಅಧ್ಯಕ್ಷರು |
| 2 | ಶ್ರೀ ಜೆ. ಎಂ. ಜಯಪ್ರಕಾಶ್ | ಸದಸ್ಯರು |
| 3 | ಡಾ. ಎಂ. ವೀರಪ್ಪ | ಸದಸ್ಯರು |
| 4 | ಶ್ರೀ ಬಿ. ಎನ್. ಲೋಕೇಶ್ | ಸದಸ್ಯರು |
| 5 | ಶ್ರೀ ಬಿ. ಎಲ್. ಸಂಜೀವ್ | ಸದಸ್ಯರು |
| 6 | ಶ್ರೀ ಲಕ್ಷ್ಮಣ್ | ಸದಸ್ಯರು |

**IV. ಇಂದಿರಾನಗರ ಶಾಖೆ :**

| | | |
|---|---|---|
| 1 | ಶ್ರೀ ಕೆ. ಎಸ್. ಸುಧಾಕರ್ | ಅಧ್ಯಕ್ಷರು |
| 2 | ಶ್ರೀ ಜೆ. ಎಂ. ಜಯಪ್ರಕಾಶ್ | ಸದಸ್ಯರು |
| 3 | ಡಾ. ಎಂ. ವೀರಪ್ಪ | ಸದಸ್ಯರು |
| 4 | ಶ್ರೀ ಬಿ. ಎನ್. ಲೋಕೇಶ್ | ಸದಸ್ಯರು |
| 5 | ಶ್ರೀ ಟಿ. ರವಿಶಂಕರ್ | ಸದಸ್ಯರು |
| 6 | ಶ್ರೀ ಎಸ್. ಬಸವರಾಜಪ್ಪ | ಸದಸ್ಯರು |

**V. ಕೆಂಗೇರಿ ಶಾಖೆ :**

| | | |
|---|---|---|
| 1 | ಶ್ರೀ ಕೆ. ಎಸ್. ಸುಧಾಕರ್ | ಅಧ್ಯಕ್ಷರು |
| 2 | ಶ್ರೀ ಜೆ. ಎಂ. ಜಯಪ್ರಕಾಶ್ | ಸದಸ್ಯರು |
| 3 | ಡಾ. ಎಂ. ವೀರಪ್ಪ | ಸದಸ್ಯರು |
| 4 | ಶ್ರೀ ಬಿ. ಎನ್. ಲೋಕೇಶ್ | ಸದಸ್ಯರು |
| 5 | ಶ್ರೀ ಹೆಚ್. ಜಯದೇವ್ | ಸದಸ್ಯರು |
| 6 | ಶ್ರೀ ಟಿ. ಜಿ. ಆದಿಶೇಷನ್ ಗೌಡ | ಸದಸ್ಯರು |

**VI. ಯಲಹಂಕ ಶಾಖೆ :**

| | | |
|---|---|---|
| 1 | ಶ್ರೀ ಕೆ. ಎಸ್. ಸುಧಾಕರ್ | ಅಧ್ಯಕ್ಷರು |
| 2 | ಶ್ರೀ ಜೆ. ಎಂ. ಜಯಪ್ರಕಾಶ್ | ಸದಸ್ಯರು |
| 3 | ಡಾ. ಎಂ. ವೀರಪ್ಪ | ಸದಸ್ಯರು |
| 4 | ಶ್ರೀ ಬಿ. ಎನ್. ಲೋಕೇಶ್ | ಸದಸ್ಯರು |
| 5 | ಶ್ರೀ ವಿ. ಶ್ರೀನಿವಾಸಯ್ಯ | ಸದಸ್ಯರು |
| 6 | ಶ್ರೀ ಆರ್. ಸತೀಶ್ | ಸದಸ್ಯರು |

**VII. ಬಿ.ಇ.ಎಸ್. ಶಾಖೆ :**

| | | |
|---|---|---|
| 1 | ಶ್ರೀ ಕೆ. ಎಸ್. ಸುಧಾಕರ್ | ಅಧ್ಯಕ್ಷರು |
| 2 | ಶ್ರೀ ಜೆ. ಎಂ. ಜಯಪ್ರಕಾಶ್ | ಸದಸ್ಯರು |
| 3 | ಡಾ. ಎಂ. ವೀರಪ್ಪ | ಸದಸ್ಯರು |
| 4 | ಶ್ರೀ ಬಿ. ಎನ್. ಲೋಕೇಶ್ | ಸದಸ್ಯರು |
| 5 | ಶ್ರೀಮತಿ ಬಿ. ಎಲ್. ನಂದಿನಿ | ಸದಸ್ಯರು |
| 6 | ಶ್ರೀಮತಿ ಎಂ. ಹೆಚ್. ಅನಿತ | ಸದಸ್ಯರು |

**VIII. ಬೇಗೂರು ಶಾಖೆ :**

| | | |
|---|---|---|
| 1 | ಶ್ರೀ ಕೆ. ಎಸ್. ಸುಧಾಕರ್ | ಅಧ್ಯಕ್ಷರು |
| 2 | ಶ್ರೀ ಜೆ. ಎಂ. ಜಯಪ್ರಕಾಶ್ | ಸದಸ್ಯರು |
| 3 | ಡಾ. ಎಂ. ವೀರಪ್ಪ | ಸದಸ್ಯರು |
| 4 | ಶ್ರೀ ಬಿ. ಎನ್. ಲೋಕೇಶ್ | ಸದಸ್ಯರು |
| 5 | ಶ್ರೀ ಜಿ. ಎನ್. ಆರ್. ಮೋಹನ | ಸದಸ್ಯರು |
| 6 | ಶ್ರೀ ಕೆ. ಸಿ. ಶಾಂತರಾಜೇಗೌಡ | ಸದಸ್ಯರು |